
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಆಗಸ್ಟ್ 5, 2009 ರೂ. 12/-

ಹೊಳೆಗೆ ಹೊಸನೀರು

ಸರ್ಜಾಶಂಕರ ಹರಳಿಮಠ



ಸಿಂಗ್ ಬೋರ್ಡ್
೦೦ ಕೋಟಿ ಹಗರಣ

ಡ್ಡಿಯೇ

ಸೂತ್ರಧಾರ



ಕೋಣಗೆರೆಯಾದ ಜಾಣಗೆರೆ

ಮರುಚುನಾವಣೆ



ಅಗ್ನಿಪರೀಕ್ಷೆ



ಎಂಟ್ರೆನ್ಸ್ ಎಕ್ಸಾಮು




ಸೇಫ್ ಸೀಟು

ಭೂಗಳ್ಳ ಬಚ್ಚೇಗೌಡ



ಕಣ್ಣೀರನ್ನು ಹರಿಸಿ ಮಾರುವವರು!



ಕನ್ನಡದ ಟಿವಿ ಕಾರ್ಯಕ್ರಮಗಳ ಮಾರುಕಟ್ಟೆಯಲ್ಲಿ ಈಗ ದೊಡ್ಡದೊಡ್ಡ ಬದಲಾವಣೆಗಳು ಬರುತ್ತಿವೆ. ಈವರೆಗೆ ಸಿನಿಮಾ ಆಧಾರಿತ ಕಾರ್ಯಕ್ರಮಗಳು ಮತ್ತು ಸೀರಿಯಲ್‌ಗಳು - ಅದರಲ್ಲೂ ಹೆಣ್ಣುಮಕ್ಕಳನ್ನು ಆಕರ್ಷಿಸುವ ಕಣ್ಣೀರಿನ ಸೀರಿಯಲ್‌ಗಳು - ಹೆಚ್ಚಿನ ನೋಡುಗರನ್ನು ಹೊಂದಿದ್ದರಿಂದಲೇ ಹೆಚ್ಚಿನ ಟಿಆರ್‌ಪಿ ರೇಟನ್ನು ಪಡೆದಿದ್ದವು. ಆದರೆ ಈ ಟಿವಿ ಕನ್ನಡ ವಾಹಿನಿಯು 'ಎದೆ ತುಂಬಿ ಹಾಡುವೆನು' ಎಂಬ ಮಕ್ಕಳ ಹಾಡುಗಾರಿಕೆಯ ಸ್ಪರ್ಧಾತ್ಮಕ ರಿಯಾಲಿಟಿ ಶೋ ಪ್ರಾರಂಭಿಸಿದ ಮೇಲೆ ಕನ್ನಡ ಟಿವಿ ಕಾರ್ಯಕ್ರಮಗಳ ಒಟ್ಟು ಕಾಂಪೊಸಿಷನ್ನೇ ಬದಲಾಗಿಬಿಟ್ಟಿತು. ಈಗ ಎಲ್ಲೆಡೆ ರಿಯಾಲಿಟಿ ಶೋಗಳದ್ದೇ ದರ್ಬಾರು.

'ಎದೆ ತುಂಬಿ ಹಾಡುವೆನು' ಯಶಸ್ಸನ್ನು ನೋಡಿ ಜೀ ಟಿವಿ ಕನ್ನಡ ವಾಹಿನಿ ಅದೇ ರೀತಿಯ 'ಲಿಟಲ್ ಚಾಂಪ್ಸ್' ಎಂಬ ರಿಯಾಲಿಟಿ ಶೋ ಪ್ರಾರಂಭಿಸಿತು. ಇದನ್ನು ಈ ಟಿವಿ ಮತ್ತು ಜೀ ಟಿವಿಗಳು ತಮ್ಮ ಎಲ್ಲಾ ಭಾಷಾ ವಾಹಿನಿಗಳಲ್ಲೂ ಪ್ರಸಾರ ಮಾಡುತ್ತಿವೆ. ಇದನ್ನು ನೋಡಿ ಕಸ್ತೂರಿ ಚಾನೆಲ್ಲು ಕೂಡಾ ಅಂತಹದ್ದೇ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಇನ್ನು ಟಿವಿ 9 ತೋರಿಸುವ ಎಲ್ಲಾ ಕಾರ್ಯಕ್ರಮಗಳು ಹೆಚ್ಚು ಕಡಿಮೆ ಲೈವ್ ರಿಯಾಲಿಟಿ ಶೋಗಳೇ! ಆ ನಂತರ ಯಾವುದೋ ಚಾನೆಲ್ಲು ಮಕ್ಕಳ ಮತ್ತು ದೊಡ್ಡವರ ಕುಣಿತದ ರಿಯಾಲಿಟಿ ಶೋ ಪ್ರಾರಂಭಿಸಿತು. ಸರಿ. ಎಲ್ಲಾ ಚಾನೆಲ್‌ಗಳು ಒಂದರ ಹಿಂದೊಂದರಂತೆ ಅದೇ ರೀತಿಯ ಕಾರ್ಯಕ್ರಮಗಳನ್ನು ಪ್ರಾರಂಭಿಸಿದವು. ಹೀಗಾಗಿ ಈಗ ಒಟ್ಟನಲ್ಲಿ ಸೀರಿಯಲ್‌ಗಳಿಗಿಂತ ಈ ಬಗೆಯ ರಿಯಾಲಿಟಿ ಶೋಗಳೇ ಹೆಚ್ಚಾಗುತ್ತಿವೆ. ಪ್ರೈಮ್ ಟೈಮ್ ಎಂದು ಕರೆಯಲ್ಪಡುವ ರಾತ್ರಿ 7ರಿಂದ 10ರ ನಡುವಿನ ಅವಧಿಯನ್ನು ಇವೇ ಆವರಿಸುತ್ತಿವೆ.

ಧಾರಾವಾಹಿಗಳಂತೆ ಇವೂ ಲಘು ಮನರಂಜನೆಯನ್ನು ಹೊರತುಪಡಿಸಿ ನೋಡುಗರ ಇನ್ಯಾವುದೇ ನಾಗರಿಕ ಅಗತ್ಯಗಳನ್ನು ಪೂರೈಸುವುದಿಲ್ಲ. ರೋಚಕತೆ, ಕತ್ತುಕೊಯ್ಯುವ ಸ್ಪರ್ಧೆಗಳನ್ನು ಅತ್ಯಂತ ಜಾಣತನದಿಂದ ಪ್ರತಿಭಾನ್ವೇಷಣೆ ಎಂಬ ಮುಸುಕಿನಲ್ಲಿ ಪ್ಯಾಕೇಜು ಮಾಡುವ ಈ ಕಾರ್ಯಕ್ರಮಗಳು ನೋಡುಗರ ಚಿಂತನಾಶೀಲತೆಯನ್ನಿರಲಿ, ಕಲಾರಸಿಕತೆಯನ್ನೂ ಹೆಚ್ಚಿಸುವುದಿಲ್ಲ. ಇತ್ತೀಚೆಗೆ ಈ ಕಾರ್ಯಕ್ರಮಗಳಲ್ಲೂ ಒಂದು ರೀತಿಯ ಏಕತಾನತೆ ಆವರಿಸುತ್ತಿರುವುದನ್ನು ಅರ್ಥಮಾಡಿಕೊಂಡ ಈ ಕಾರ್ಯಕ್ರಮಗಳ ನಿರ್ಮಾಪಕರು ತಮ್ಮ ರಿಯಾಲಿಟಿ ಶೋ ಅನ್ನು ಇನ್ನಷ್ಟು ರೋಚಕಗೊಳಿಸಿ ಜನರನ್ನು ಹಿಡಿದಿಟ್ಟುಕೊಳ್ಳಲು ಈ ಸ್ಪರ್ಧೆಗಳಲ್ಲಿ 'ಕೃತಕ' ಜಗಳಗಳ 'ರಿಯಾಲಿಟಿ' ಶೋಗಳನ್ನೂ ಬಿತ್ತರಿಸಲು ಪ್ರಾರಂಭಿಸಿವೆ.


ಇಂಥಾ ಪ್ರತಿ ಸ್ಪರ್ಧಾತ್ಮಕ ರಿಯಾಲಿಟಿ ಶೋಗಳಿಗೂ ಮೂವರೋ ಐವರೋ ಜಡ್ಜ್‌ಗಳಿರುತ್ತಾರೆ. ಆಗ ಈ ಜಡ್ಜ್‌ಗಳು ನೀಡುವ ತೀರ್ಮಾನದ ವಿರುದ್ಧ ಸ್ಪರ್ಧಿಯೋ ಅವರ ತಂದೆ ತಾಯಿಯೋ ಅಥವಾ ಮತ್ತೊಬ್ಬ ಜಡ್ಜೋ ಪೂರ್ವಯೋಜನೆಯಂತೆ ಕ್ಯಾತೆ ತೆಗೆಯುತ್ತಾರೆ. ಜಗಳ ಪ್ರಾರಂಭಿಸುತ್ತಾರೆ. ಇದು ಇಡೀ ವಾತಾವರಣದಲ್ಲಿ ರೋಚಕತೆಯನ್ನೂ ಮತ್ತು ನೋಡುಗರಲ್ಲಿ ಕುತೂಹಲವನ್ನೂ ಉಂಟು ಮಾಡುತ್ತಿದ್ದಂತೆ ಕಮರ್ಷಿಯಲ್ ಬ್ರೇಕ್ ಬರುತ್ತದೆ. "ಮುಂದೇನಾಯಿತು ಎಂದು ತಿಳಿದುಕೊಳ್ಳಲು ಎಲ್ಲೂ ಹೋಗಬೇಡಿ.. ನಮಗಾಗಿ ಕಾಯುತ್ತಾ ಇರಿ" ಎಂದು ಕಾರ್ಯಕ್ರಮ ಮುಗಿಯುತ್ತದೆ ಮತ್ತು ಅದೇ ಸಮಯದಲ್ಲಿ ಮರುದಿನಕ್ಕೂ ನೋಡುಗ ಗಿರಾಕಿಯನ್ನು ಕಾಯಂ ಮಾಡಿಕೊಳ್ಳುತ್ತದೆ. ಹೀಗೆ ಜೀ ಟಿವಿಯ ತೀರ್ಪುಗಾರರು 'ಜಗಳ' ಪ್ರಾರಂಭಿಸುತ್ತಿದ್ದಂತೆ ಲಗುಬಗನೆ ಈ ಟಿವಿ, ಕಸ್ತೂರಿ ಟಿವಿ ಮತ್ತು ಸುವರ್ಣ ಟಿವಿಯ ರಿಯಾಲಿಟಿ ಕಾರ್ಯಕ್ರಮಗಳ ತೀರ್ಪುಗಾರರೂ-ಸ್ಪರ್ಧಿಗಳೂ ಜಗಳ ಪ್ರಾರಂಭಿಸಿ ತಮ್ಮ ತಮ್ಮ ಕಾರ್ಯಕ್ರಮಗಳ ರೋಚಕತೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ಸಮೂಹ ಮಾಧ್ಯಮಗಳು ಜನತೆಯನ್ನು ಎಷ್ಟು ಕುರಿಗಳೆಂದು ಭಾವಿಸಿವೆ ಎನ್ನುವುದಕ್ಕೆ ಇದು ಮತ್ತೊಂದು ಉದಾಹರಣೆ. ಅದಕ್ಕೇ ಲಾವೇ ಎಂಬ ಒಬ್ಬ ಚಿಂತಕ "ಬಂಡವಾಳಶಾಹಿ ತನ್ನ ಸರಕುಗಳನ್ನು ಹೆಚ್ಚು ಮಾರಬೇಕೆಂದರೆ ತನ್ನ ಗ್ರಾಹಕ ಹೆಚ್ಚುಹೆಚ್ಚು ಮುಠ್ಠಾಳನಾಗಿರಬೇಕೆಂದು ಬಯಸುತ್ತಾನೆ" ಎಂದು ಹೇಳಿದ್ದು. ಒಬ್ಬ ಪ್ರಜ್ಞಾವಂತ ಗ್ರಾಹಕನಿಗೆ ತನ್ನ ಅಗ್ಗದ ಮಾಲು ಮಾರುವುದು ಕಷ್ಟವಾದ್ದರಿಂದ ಬಂಡವಾಳಶಾಹಿ ಸಮಾಜ ಜನರ ಪ್ರಜ್ಞೆಯನ್ನು ಮೊಂಡುಗೊಳಿಸಿ ಜನರ ಮುಠ್ಠಾಳತನವನ್ನು ಹೆಚ್ಚಿಸಲು ಪ್ರಯತ್ನಿಸುತ್ತದೆ. ಸಮೂಹ ಮಾಧ್ಯಮಗಳು "ಜನತೆಯಲ್ಲಿ ಈ ಬಗೆಯ ಮುಠ್ಠಾಳತನವನ್ನು ಪೋಷಿಸುವುದು ಮಾತ್ರವಲ್ಲದೆ ಈ ಬಗೆಯ ಮುಠ್ಠಾಳತನಕ್ಕೆ ಸಮಾಜದಲ್ಲಿ ಮಾನ್ಯತೆಯನ್ನೂ ಮತ್ತು ಮೆಚ್ಚುಗೆಯನ್ನೂ ದೊರಕಿಸಿಕೊಡುತ್ತದೆ" ಎಂದು ಆ ಚಿಂತಕ ಅಭಿಪ್ರಾಯ ಪಡುತ್ತಾನೆ. ಥಿಯೋಡಾರ್ ಅಡೋರ್ನೋ ಎಂಬ ಮತ್ತೊಬ್ಬ ಚಿಂತಕ "ಜನಪ್ರಿಯ ಮಾಧ್ಯಮಗಳ ಪ್ರಧಾನ ಉದ್ದೇಶವೇ ಜನರ ಬುದ್ಧಿಮತ್ತೆಯನ್ನು ಮೊಂಡುಗೊಳಿಸಿ ಬಂಡವಾಳಶಾಹಿ ಮಾರುಕಟ್ಟೆಯ ವಿಸ್ತರಣೆಗೆ ಬೇಕಿರುವ ಕೆಲಸ ಮತ್ತು ಬಳಕೆ ಪದ್ಧತಿಗಳನ್ನು ಒಪ್ಪಿಕೊಳ್ಳುವಂತೆ ಮಾಡುವುದಾಗಿದೆ" ಎಂದು ಅಭಿಪ್ರಾಯ ಪಡುತ್ತಾನೆ. ಇವರೆಲ್ಲಾ ಇದನ್ನು ದಶಕಗಳ ಹಿಂದೆ ಐರೋಪ್ಯ ಸಂದರ್ಭದಲ್ಲಿ ಹೇಳಿದ್ದರೂ ನಮ್ಮ ಸಮೂಹ ಮಾಧ್ಯಮಗಳು ಸಂಪೂರ್ಣವಾಗಿ ಖಾಸಗಿ ಉದ್ಯಮವಾಗಿರುವ ಇಂದಿನ ಸಂದರ್ಭಕ್ಕೆ ಮತ್ತು ನೋಡುಗರು ಕೇವಲ ಗ್ರಾಹಕರಾಗಿರುವ ಸಂದರ್ಭಕ್ಕೆ ಇನ್ನೂ ಚೆನ್ನಾಗಿಯೇ ಅನ್ವಯಿಸುತ್ತದೆ.

ಟಿವಿ ಉದ್ಯಮದ ಯಶಸ್ಸು ನಿಂತಿರುವುದೇ ಅದು ಎಷ್ಟು ನೋಡುಗರನ್ನು ಪಡೆದಿದೆ ಎಂಬುದರ ಮೇಲೆ. ಏಕೆಂದರೆ ಆ ಆಧಾರದಲ್ಲೇ ಅವುಗಳಿಗೆ ಜಾಹೀರಾತು ಸಿಗುತ್ತದೆ. ಹೀಗಾಗಿ ಕನ್ನಡದಲ್ಲೂ ಮತ್ತು ಇತರ ಭಾಷಾ ವಾಹಿನಿಗಳಲ್ಲೂ ಹೆಚ್ಚೆಚ್ಚು ನೋಡುಗರನ್ನು ಪಡೆಯಲು ಪೈಪೋಟಿ ನಡೆದಿದೆ. ಈ ಪೈಪೋಟಿಯಲ್ಲಿ ಅವರು ಕಂಡುಕೊಂಡಿರುವ ಮತ್ತೊಂದು ಅತ್ಯಂತ ಸುಲಭದ ದಾರಿಯೆಂದರೆ ಮನುಷ್ಯನಲ್ಲಿ ಮುಂದುವರೆದಿರುವ ಕೆಲವು ಪ್ರಾಣಿ ಸಹಜ ಗುಣಗಳಾದ ಸ್ವಚ್ಛಂದ ಕಾಮ, ಅನಿಯಂತ್ರಿತ ಕ್ರೋಧಗಳನ್ನು ಪ್ರಚೋದಿಸುವ ಕಾರ್ಯಕ್ರಮಗಳನ್ನು ಮತ್ತು ನಾಗರಿಕ ಸಮಾಜ ಹತ್ತಿಕ್ಕಬೇಕೆಂದು ಬಯಸುವ ಕದನಕುತೂಹಲ ಪ್ರವೃತ್ತಿಯನ್ನು, ಅಂದರೆ ಬೇರೆಯವರು ಜಗಳ ಕಾಯುತ್ತಿದ್ದರೆ ನಿಂತುನೋಡಿ ಮಜಾ ತೆಗೆದುಕೊಳ್ಳುವ ಪ್ರವೃತ್ತಿಗಳನ್ನು, ಮತ್ತು ಬೇರೆಯವರ ಮನೆ ಜಗಳವನ್ನು ಕದ್ದು ಕೇಳುವ ಅಥವಾ ಗಾಸಿಪಿಂಗ್ ಮಾಡುವ ಪ್ರವೃತ್ತಿಗಳನ್ನು! ಇಂಥಾ ಕಾರ್ಯಕ್ರಮಗಳಿಗೆ ಈಗ ಹೆಚ್ಚು ಟಿಆರ್‌ಪಿ ರೇಟಿಂಗ್. ಹಿಂದಿ ಮತ್ತು ಇಂಗ್ಲಿಷಿನಲ್ಲಂತೂ ಈಗ ಇಂಥಾ ಕಾರ್ಯಕ್ರಮಗಳಿಗೇ ವಿಶೇಷ ಚಾನೆಲ್‌ಗಳಿವೆ. ಕನ್ನಡ ಚಾನೆಲ್‌ಗಳು ಇರುವ ತಮ್ಮ ಕಾರ್ಯಕ್ರಮಗಳಲ್ಲೇ ಇಂಥಾ ಎಲ್ಲಾ ಮಸಾಲೆಗಳನ್ನು ಸೇರಿಸುತ್ತಿವೆ.

ಈಗ ಈ 'ರಿಯಾಲಿಟಿ' ಶೋಗಳಿಗೆ ಕನ್ನಡ ವಾಹಿನಿಗಳ ಹೊಚ್ಚಹೊಸ ಸೇರ್ಪಡೆ ಜನರ ಸಂಕಷ್ಟಗಳ ಬದುಕನ್ನು, ಅವರ ಕಣ್ಣೀರ ಕಥೆಗಳನ್ನು ಮಾರಿ ಕಾಸುಮಾಡಿಕೊಳ್ಳುವುದು. ಇದನ್ನು ಮೊದಲು ಪ್ರಾರಂಭಿಸಿದ್ದು ಮತ್ತೆ ಜೀ ಟಿವಿಯೇ. 'ಬದುಕು ಜಟಕಾ ಬಂಡಿ' ಎಂಬ ಈ ಕಾರ್ಯಕ್ರಮವನ್ನು ಲಿಪ್‌ಸ್ಟಿಕ್ ಸುಂದರಿ ಮಾಳವಿಕಾ ಅಳುಮುಖವಿಟ್ಟುಕೊಂಡು ನಡೆಸಿಕೊಡುತ್ತಾಳೆ. ತನ್ನದಲ್ಲದ ತಪ್ಪಿಗೆ ವೇಶ್ಯಾಗೃಹಗಳಿಗೆ ಮಾರಲ್ಪಟ್ಟು ಈಗ ಭೀಕರ ಏಡ್ಸ್ ರೋಗಕ್ಕೆ ತುತ್ತಾಗಿರುವ ಹೆಣ್ಣುಮಗಳ ಕಣ್ಣೀರ ಕಥೆಗಳನ್ನು, ಗಂಡನಿಂದ ಪರಿತ್ಯಕ್ತರಾದವರ ಗೋಳನ್ನು ಅಥವಾ ಇಂಥ ಕರುಳು







ಕಿತ್ತುಬರುವ ಘೋರಗಳಿಗೆ ತುತ್ತಾಗಿರುವವರನ್ನೇ ಸ್ಟುಡಿಯೋಗೆ ಕರೆಸಿ ಅವರಿಂದಲೇ ಅವರ ಕತೆಗಳನ್ನು ಈ 'ರಿಯಾಲಿಟಿ' ಶೋಗಳಲ್ಲಿ ಹೇಳಿಸಲಾಗುತ್ತದೆ. ಇದನ್ನು ನಡೆಸಿಕೊಡುವ ಮಾಳವಿಕಾರಂಥ ಆಂಕರ್‌ಗಳು ಸಹ ಅವರ ಜೊತೆ ಕಣ್ಣೀರಿಡುತ್ತಾರೆ. ಆದರೆ ಅವರ ಕಣ್ಣೀರು ಕೆನ್ನೆಯ ಮೇಲೆ ಕೆಲವು ಕ್ಷಣಗಳಷ್ಟು ಮಾತ್ರ ಹರಿಯುವಂತೆ ನಿಯಂತ್ರಣವನ್ನೂ ಮಾಡುತ್ತಾರೆ.

'ಬದುಕು ಜಟಕಾ ಬಂಡಿ' ಯಶಸ್ಸನ್ನು ಕಾಣುತ್ತಿದ್ದಂತೆ ಇತರೆ ಚಾನೆಲ್‌ಗಳು ಅದೇ ರೀತಿಯ ಕಾರ್ಯಕ್ರಮಗಳಿಗೆ ಮುಗಿಬಿದ್ದಿವೆ. ಸುವರ್ಣ ಚಾನೆಲ್ ಮಾಜಿ ನಟಿ ಲಕ್ಷ್ಮಿ ನೇತೃತ್ವದಲ್ಲಿ 'ಇದು ಕಥೆಯಲ್ಲ ಜೀವನ' ಎಂಬ ಕಾರ್ಯಕ್ರಮ ಪ್ರಾರಂಭಿಸಿದೆ. ಇದರಲ್ಲಿ ಪ್ರಧಾನವಾಗಿ ಗಂಡ-ಹೆಂಡಿರ ಜಗಳವನ್ನು ಬಿಡಿಸುವ 'ಪೆದ್ದಮ್ಮ'ನ ಪಾತ್ರ ಲಕ್ಷ್ಮಿಯದ್ದು! ಸದ್ಯಕ್ಕೆ ಈ ಕಣ್ಣೀರಿನ ಮಾರ್ಕೆಟ್ಟನ್ನು ಅತಿ ಹೆಚ್ಚು ಸೂರೆ ಹೊಡೆಯುತ್ತಿರುವುದು ಸುವರ್ಣ ಚಾನಲ್ಲೆ! ಕಣ್ಣೀರಲ್ಲಿ ಇಷ್ಟೊಂದು ಕಾಸಿರುವುದನ್ನು ಕಂಡ ಕಸ್ತೂರಿ ಚಾನೆಲ್ ಸಹ 'ಇದು ಯಾರು ಬರೆದ ಕಥೆಯೋ?' ಎಂಬ ಕಾರ್ಯಕ್ರಮ ಪ್ರಾರಂಭಿಸುತ್ತಿದೆ. ಇದನ್ನು ನಡೆಸಿಕೊಡುವವರು ಅಳುಮುಂಜಿ ತಾರಾ!

ಜನರ ಖಾಸಗಿ ಬದುಕಿನ ನೋವು ಕಷ್ಟಗಳ ಅರ್ಥಮಾಡಿಕೊಂಡು ಸೂಕ್ತ ಸಲಹೆ ಕೊಡು 'ಕೌನ್ಸೆಲಿಂಗ್-ಆಪ್ತ ಸಲಹೆ' ಎಂಬುದು ವೈದ್ಯಶಾಸ್ತ್ರ ಭಾಗವೇ! ಆದರೆ ಆಪ್ತ ಸಲಹೆಗಾರರಾಗುವವರು ಒಂದ ತರಬೇತಿ ಪಡೆದಿರುತ್ತಾರೆ. ಆದರೆ ಟಿವಿ ಚಾನೆಲ್‌ಗಳ ಆಪ್ತ ಸಲಹೆ ಕೊಡುವವರಿಗೆ ಯಾವ ತರಬೇತಿಯ ಅಗತ್ಯವೂ ಇಲ್ಲ. ಪ್ರಸಿದ್ಧರಾಗಿರಬೇಕು ಮತ್ತು ಬೇಕೆಂದಾ ಬೇಕೆನ್ನಿಸುವಷ್ಟು ಕಣ್ಣೀರನ್ನು ಸುರಿಸುವಷ್ಟು ನಿಯಂತ್ರಣವುಳ್ಳ ರಾಗಿರಬೇಕು ಅಷ್ಟೆ. ಮಾತ್ರವಲ್ಲ, ಇವರು ಕೊಡು ಸಲಹೆಯಾದರೂ ಏನು? ತನ್ನ ಜೀವಮಾನದುದ್ದಕ್ಕೂ ಕಣ್ಣೀರು ಸುರಿಸುವ ಆದರೆ ಹೊಸಿಲು ದಾಟದ ಹೆಣ್ಣಿ ಪಾತ್ರವನ್ನೇ ಮಾಡುತ್ತಾ ಬಂದ ಲಕ್ಷ್ಮಿ ಈವರೆಗೆ ಜಗ ಮಾಡಿದ ದಂಪತಿಗಳಲ್ಲಿ ಹೆಣ್ಣಿಗೆ ಕೊಟ್ಟಿರುವ ಸಲಹೆಯೆ ಯಾವ ಕಾರಣಕ್ಕೂ ಹೊಸಿಲು ದಾಟಬಾರದೆಂಬುದನ್ನೆ ನಾವೆಲ್ಲರೂ ಸೇರಿ ನಿಮ್ಮ ಸಮಸ್ಯೆ ಬಗೆಹರಿಸುತ್ತೇ ಎಂದು ಪಕ್ಕಾ ಫಿಲ್ಮಿ ಭರವಸೆ ನೀಡುವ ಈ ಬೆಳ್ಳಿತೆರೆಯ ನಾಯಕಿ ಕಾರ್ಯಕ್ರಮವನ್ನು ಒಂದು ಸಮಾಜಸೇವಾ ಕಾರ್ಯಕ್ರಮವೆಂಬಂತೆ ಬಿಂಬಿಸುತ್ತಾ ಅದರ ಹಿಂದಿ ಟಿಆರ್‌ಪಿ ರಾಜಕಾರಣವನ್ನು ಮರೆಮಾಚುತ್ತಾಳೆ.

ಆಪ್ತ ಸಲಹೆಯ ಮೂಲಸೂತ್ರವೇ ನೊಂದವರ ಬಿಚ್ಚಿಕೊಳ್ಳುವಂತಹ ಆಪ್ತ ವಾತಾವರಣವನ ಒದಗಿಸುವುದು ಮತ್ತು ನೊಂದವರ ಗೌಪ್ಯತೆಯನ ಕಾಪಾಡಿಕೊಳುವುದು. ಈ ಶರತ್ತಿನ ಮೇಲೇ ನೊಂದವರು ಅಲ್ಲಿಗೆ ಹೋಗುತ್ತಾರೆ. ಆದರೆ ಇಂತಹ ಟಿ ಕಾರ್ಯಕ್ರಮಗಳು ಮತ್ತು ಕ್ಯಾಮೆರಾಗಳು ಜನ ಸಂವೇದನೆಗಳನ್ನು ಭ್ರಷ್ಟಗೊಳಿಸುತ್ತಿದೆ. ಅಲ್ಲದೆ ಒಂದ ಭೇಟಿಯಲ್ಲೇ ಆ ಸಮಸ್ಯೆಗಳು ಅರ್ಥವೂ ಆಗುವುದಿ ಬಗೆಹರಿಯುವುದಂತೂ ದೂರವೇ ಉಳಿಯಿತು. ಆದರು ಇಲ್ಲೆಲ್ಲಾ ಮ್ಯಾಜಿಕ್. ಲಕ್ಷ್ಮಿಯ ಅಥವಾ ಮಾಳವಿಕಾ ಅಥವಾ ತಾರಾಳ ಒಂದು ನಗೆಯೇ ಆ ಸಮಸ್ಯೆಯನ ಬಗೆಹರಿಸುತ್ತದೆ ಎಂಬ ಭ್ರಮೆ ಬಿತ್ತುತ್ತದೆ.

ಇಲ್ಲಿ ಜನರ ಸಮಸ್ಯೆ ಬಗೆಹರಿಯುವುದಿ ಎಂಬುದೊಂದೇ ಸಮಸ್ಯೆಯಲ್ಲ. ಟಿವಿಗಳು ತಮ್ಮ ಲಾಭ ಅನ್ವೇಷಣೆಯಲ್ಲಿ ಮನುಷ್ಯನ ಸಹಜ ಸಂವೇದನೆಗಳನ ಹೇಗೆ ಭ್ರಷ್ಟಗೊಳಿಸುತ್ತದೆ ಮತ್ತು ಸರಕಾಗಿಸುತ್ತದೆ ಎಂಬುದ ಮನುಷ್ಯರ ಭಾವನೆಗಳ ವಾಣಿಜ್ಯೀಕರಣದ ಬಗ್ಗೆ ಅಧ್ಯಯ ಮಾಡಿರುವ ಐರೋಪ್ಯ ಸಮಾಜಶಾಸ್ತ್ರಜ್ಞೆ ಆಲಿ ರಸೆಲ್ಹೋಚೀಲ್ಡ್ "ಆಧುನಿಕ ಪ್ರಪಂಚದಲ್ಲಿ ಮನುಷ್ ಭಾವನೆಗಳು ಮತ್ತು ಸಂವೇದನೆಗಳು ಸಹ ಕಾರ್ಪೊರೇಟ ಶಕ್ತಿಯ ಲಾಭಕೋರತನಕ್ಕೆ ಅಧೀನವಾಗಿರುತ್ತವೆ. ಮಾನವ ಐಡೆಂಟಿಟಿಯೇ ಅದು ಎಷ್ಟು ಸರಕೀಕರಣಗೊಳ್ಳಬಲ್ಲದ ಎಂಬುದನ್ನು ಅವಲಂಬಿಸಿರುತ್ತದೆ" ಎಂದು ಅಭಿಪ್ರಾ ಪಡುತ್ತಾರೆ.

ಇಂದು ಅಕ್ಕಪಕ್ಕದ ಮನೆಯಲ್ಲಿ ಕೊಲೆ ಸುಲಿ ನಡೆದರೆ ನೊಂದವರಿಗೆ ಸಾಂತ್ವನ ಹೇಳುವುದಕ್ಕಿಂತ ಹೆಚ್ಚಾ ಅದನ್ನು ಕ್ರೈಮ್ ನ್ಯೂಸ್‌ನಲ್ಲಿ ಹಾಕಿಸಲು ನೆರೆಹೊರೆಯವ ಹಾತೊರೆಯುವುದು ಅಥವಾ ತಮ್ಮ ಖಾಸ ಸುಖದುಃಖಗಳನ್ನು ಟಿವಿ ಪರದೆಯಲ್ಲಿ ಕಂಡು ತಾವ ಆನಂದಿಸುವುದು ಇವೆಲ್ಲವೂ ನಮ್ಮ ಐಡೆಂಟಿಟಿಯನ ಟೀವಿಗಳು ನಿರ್ಧರಿಸುತ್ತಿವೆ ಎಂಬುದಕ್ಕೆ ಸಾಕ್ಷಿ. ಅಂದ ಮನುಷ್ಯ ಸಂವೇದನೆಗಳು ಅದರ ಸಾರ್ವಜನಿ ಪ್ರದರ್ಶನೀಯತೆಯ ಮೌಲ್ಯವನ್ನು ಆಧರಿ ಪ್ರಕಟಗೊಳ್ಳುತ್ತಿರುವುದು ಇಡೀ ಮನುಷ್ಯ ಸಮಾ ಭ್ರಷ್ಟಗೊಳ್ಳುತ್ತಿರುವುದರ ಸಂಕೇತವಲ್ಲವೇ? ತಮ್ಮ ಲಾಭ ಹೊಸ ದಾರಿಯನ್ನು ನಿರಂತರವಾಗಿ ಹುಡುಕುತ್ತಲೆ ಹೋಗುವ ಬಂಡವಾಳಶಾಹಿ ವ್ಯವಸ್ಥೆ ನಮಗ ಗೊತ್ತಿಲ್ಲದಂತೆ ನಮ್ಮನ್ನು ಯಂತ್ರಗಳನ್ನಾಗಿಸುವುದು ಹೀ

ಬ್ಲಾಗ್ ಲೋಕ

ಪ್ರತಾಪ ಸಿಂಹನ ಕುತರ್ಕಗಳು



"ಹಿಂದೂಗಳಲ್ಲೂ ಧರ್ಮಗುರುಗಳಿದ್ದಾರೆ. ಅವರಲ್ಲಿ ಕೆಲವರು ಲಂಪಟರಿದ್ದಾರೆ. ಮೋಸಗಾರರು, ಅನೈತಿಕ ಸಂಬಂಧ ಇಟ್ಟುಕೊಂಡವರು, ಶ್ರೀಕೃಷ್ಣನ ಪಡುತಲದಲ್ಲೇ ಅಕ್ರಮವಾಗಿ ಹೆಂಡತಿ ಇಟ್ಟುಕೊಂಡವರು, ಅನಧಿಕೃತವಾಗಿ ಮಕ್ಕಳು ಮಾಡಿಕೊಂಡಿರುವವರೂ ಇದ್ದಾರೆ. ಆದರೆ ಅವರ್ಯಾರೂ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ, ನಮ್ಮ ವೈಯಕ್ತಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅಷ್ಟಕ್ಕೂ ಧರ್ಮಗುರುಗಳನ್ನು ದೇವರ ಏಜೆಂಟರಾಗಲು ಎಂದೂ ಬಿಡಬಾರದು."

- ಹೀಗೆ ಪ್ರತಾಪಸಿಂಹ ಇಂದಿನ (2009 ಜುಲೈ 18) ತಮ್ಮ ಕಾಲಂನಲ್ಲಿ ಅರುಹುತ್ತಿಕೊಂಡಿದ್ದಾರೆ. ಇದರ ಅರ್ಥ ಏನು? ಮಠಾಧೀಶರು ಹ್ಯಾಗಾದರೂ ಇರಬಹುದು. ಅವರು ಎಲ್ಲಿಯವರೆಗೆ ನಮ್ಮ ಚಟುವಟಿಕೆಗಳಲ್ಲಿ, ವೈಯಕ್ತಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೋ, ಅಲ್ಲಿಯವರೆಗ ಅವರ ಈ ಅಕ್ರಮಗಳಿಗೂ ರಿಯಾಯ್ತಿ ಇದೆ ಅಂತಾ?

ಮುಸ್ಲಿಂ ಧಾರ್ಮಿಕ ನಾಯಕರನ್ನು ಟೀಕಿಸುವ ಭರದಲ್ಲಿ ಮಠಾಧೀಶರ ಭಂಡತನವನ್ನು ಉಲ್ಲೇಖಿಸಿಯೂ ಬೆಂಬಲಿಸುವ ಪ್ರತಾಪ ಸಿಂಹರನ್ನು ಸಮಾಜದ ಜವಾಬ್ದಾರಿಯುತ ಪತ್ರಕರ್ತ ಎನ್ನಲು ಸಾಧ್ಯವೆ? ಇದು ಬ್ಯಾಲೆನ್ಸಡ್ ದೃಷ್ಟಿಯೆ? ಸಾವಿರಾರು ಜನ ಓದುವ ತಮ್ಮ ಕಾಲಂನಲ್ಲಿ ಹೀಗೆ 'ಕೆಲವು ಮಠಾಧೀಶರ' ಕಾಮದ ಕೃತ್ಯಗಳನ್ನು ಪರೋಕ್ಷವಾಗಿ ಬೆಂಬಲಿಸುವ ಪ್ರತಾಪಸಿಂಹ, ಕೊಂಚ ಯೋಚಿಸಿ.

ಇಂಥವರ ಸಾಲಿಗೆ ರಾಜಕಾರಣಿಗಳನ್ನೂ ಸೇರಿಸಿ. 'ರಾಜಕಾರಣಿಗಳಲ್ಲೂ ವಿಪರೀತ ಭ್ರಷ್ಟರಿದ್ದಾರೆ. ಆದರೆ ರಾಜಕಾರಣಿಗಳು ವೈಯಕ್ತಿಕ ವಿಷಯಕ್ಕೆ ಎಲ್ಲಿಯವರೆಗೆ ಬರುವುದಿಲ್ಲವೋ, ಅಲ್ಲಿಯವರೆಗೆ ಹಲವು ರಾಜಕಾರಣಿಗಳು ಮಜವಾಗಿ ಸರ್ಕಾರಿ ಯೋಜನೆಗಳ ಹಣ ತಿಂದುಂಡು ಮಜಾ ಉಡಾಯಿಸಬಹುದು' ಎಂದೂ ಪ್ರತಾಪ ಸಿಂಹ ಹೇಳುತ್ತಾರೆಯೆ?

- 'ವಿಮರ್ಶಕಿ' ಎಂಬ ವರ್ಡ್‌ಪ್ರೆಸ್ ಬ್ಲಾಗ್‌ನಲ್ಲಿ

ಸುದ್ದಿಮನೆಯಲ್ಲ ಲದ್ದಿಮನೆ

'ವಿಜಯ ಕರ್ನಾಟಕ' ಸುದ್ದಿ ಮನೆಯಲ್ಲ, ಅದು ಕೇವಲ ಲದ್ದಿ ಮನೆ ಅಂತ ಜಿ.ಎಸ್.ಮೋಹನ್‌ಗ ಗೊತ್ತಾಗುತ್ತ ಬಿಡಿ. ಮೋಹನ್ ತಮಗ ಲದ್ದಿ ಬೇಕೋ, ಸುದ್ದಿ ಬೇಕೋ ಅಂತ ಡಿಸೈಡ್ ಮಾಡಬೇಕು ಅಷ್ಟೆ.

- ನಿಸಾರ್ ಅಹಮದ್ 'ಸುದ್ದಿಮಾತು' ಎಂಬ ಬ್ಲಾಗ್‌ಸ್ಪಾಟ್‌ನಲ್ಲಿ

ಪ್ರೀತಿಗಿರುವಷ್ಟು ಶಕ್ತಿ ಇನ್ನಾವುದಕ್ಕಿದೆ?



ಕಂಡಹಾಗೆ

ಗೌರಿ ಲಂಕೇಶ್

"ನಾನು ನಾನಲ್ಲ, ನನ್ನ ಹೆಸರೂ ನನ್ನದಲ್ಲ, ನನ್ನ ದೆ-ತಾಯಿ ನನ್ನನ್ನು ಹೆತ್ತವರಲ್ಲ, ನನ್ನ ತಮ್ಮ ಮತ್ತು ಗಿ ನನ್ನ ಒಡಹುಟ್ಟಿದವರಲ್ಲ, ನಾನಾಡುವ ಭಾಷೆ ನನ್ನ ತೃಭಾಷೆಯಲ್ಲ, ನಾನು ಪಾಲಿಸುವ ಧರ್ಮ ನನ್ನದಲ್ಲ, ನು ವಾಸಿಸುವ ದೇಶ ನನ್ನ ದೇಶವಲ್ಲ. ಅಂದರೆ ನಾನು ರೆಂದು ನೀವು ಭಾವಿಸಿದ್ದೀರೋ ಆತ ನಾನಲ್ಲ, ನಾನು ವಾಗಲೂ ಯಾರೆಂದು ಹೇಳಬೇಕೆಂಬ ಆಶೆ ನನಗೆ; ದರೆ ನನ್ನ ಬದುಕಿನ ಪರಿಸ್ಥಿತಿ ನಾನು ನಿಜ ಹೇಳದಂತೆ ಯುತ್ತಿದೆ....."

ಇಂತಹ ಪರಿಸ್ಥಿತಿಯಲ್ಲಿರುವ ಒಬ್ಬ ಮನುಷ್ಯನ ಬದುಕು ಗಿರಬಹುದೆಂದು ತೋರಿಸಿರುವ ಫ್ರೆಂಚ್ ನಿರ್ದೇಶಕ ದು ಮಿಹೈಲಿಯಾನು ಅವರ `Live and become' ದುಕು ಮತ್ತು ಬೆಳೆ) ಎಂಬ ಅದ್ಭುತ ಸಿನಿಮಾವನ್ನು ನ್ನೆ ನೋಡಿದೆ.

ನಮ್ಮಲ್ಲಿ ಬಹಳಷ್ಟು ಜನ ಯಹೂದಿಯರೆಲ್ಲ ಳಿಯರು ಎಂದು ನಂಬಿದ್ದಾರೆ. ಆದರೆ ಆಫ್ರಿಕಾದ ಯೋಪಿಯಾದಲ್ಲೂ ಕಪ್ಪು ಬಣ್ಣದ ಯಹೂದಿಯ ರು. ಐತಿಹ್ಯದ ಪ್ರಕಾರ ಇಸ್ರೇಲಿನ ರಾಜ ಸಾಲೊಮನ್ ಮತ್ತು ಇಥಿಯೋಪಿಯಾದಲ್ಲಿದ್ದ ಶೀಬಾ ಸಾಮ್ರಾಜ್ಯದ ಗೆ ಜನಿಸಿದ ಪುತ್ರ ಮನೆಲಿಕ್‌ನ ವಂಶಜರು ಈ ಯಹೂದಿಗಳು.

ಎಂಭತ್ತರ ದಶಕದಲ್ಲಿ ಇಥಿಯೋಪಿಯಾದ ಮೇಲೆ ನು ಮತ್ತು ಆಂತರಿಕ ಯುದ್ಧ ಜೊತೆಜೊತೆಗೆ ದಾಳಿ ಗ ಸಾವಿರಾರು ಸಂಖ್ಯೆಯಲ್ಲಿ ಜನ ನೆರೆಯ ಸೂಡಾನ್ ಶಕ್ಕೆ ವಲಸೆ ಹೋಗಿ ನಿರಾಶ್ರಿತರ ಶಿಬಿರಗಳಲ್ಲಿ ಸಿಸಲಾರಂಭಿಸಿದರು. ಅವರಲ್ಲಿ ಯಹೂದಿಯರೂ ರು. ಅದೇ ಹೊತ್ತಿಗೆ ಜಗತ್ತಿನಾದ್ಯಂತ ಚದುರಿ ಹೋಗಿದ್ದ ಹೂದಿಗಳಿಗೆ ಇಸ್ರೇಲ್ ತನ್ನ ಬಾಗಿಲನ್ನು ತೆರೆಯಿತಲ್ಲದೆ, ಯೋಪಿಯಾದಲ್ಲಿದ್ದ ಯಹೂದಿಯರನ್ನು ಇಸ್ರೇಲಿಗೆ ತ್ತೊಯ್ಯಲು 'ಆಪರೇಷನ್ ಮೋಸಸ್' ಎಂಬ ಗುಪ್ತ ರ್ಯಾಚರಣೆಯನ್ನು ಕೈಗೊಂಡಿತು.

`Live and become' ಚಿತ್ರದ ಕತೆ ಪ್ರಾರಂಭವಾಗು ೇ ಸೂಡಾನ್‌ನಲ್ಲಿನ ಒಂದು ನಿರಾಶ್ರಿತರ ಶಿಬಿರದಲ್ಲಿ. ಷ್ಯವೇ ಇಲ್ಲದಂತಹ ಆ ಶಿಬಿರದಲ್ಲಿ ಒಂದು ದಿನ ಹೂದಿ ತಾಯಿಯೊಬ್ಬಳ ಮಗ ಅವಳ ಮಡಿಲಲ್ಲೇ ನೆಯುಸಿರೆಳೆಯುತ್ತಾನೆ. ಅವಳ ದುಃಖವನ್ನು ಕ್ರಿಶ್ಚಿಯನ್ ಯೊಬ್ಬಳು ದೂರದಿಂದಲೇ ಗಮನಿಸುತ್ತಾಳೆ. ಅದೇ ರಾತ್ರಿ ಹಲವು ಯಹೂದಿಯರನ್ನು ಇಸ್ರೇಲಿಗೆ ಸಲು ಲಾರಿಗಳು ಬಂದಾಗ ಆ ಯಹೂದಿ ತಾಯಿ ಯನ್ನೇರಲು ಜನರ ಸಾಲಿನಲ್ಲಿ ನಿಲ್ಲುತ್ತಾಳೆ. ಆ ಕ್ಷಣ ಯನ್ ತಾಯಿಗೆ ಒಂದು ಪರಿಹಾರದ ಸೂತ್ರ ಳೆಯುತ್ತದೆ. ನಿದ್ರಿಸುತ್ತಿರುವ ತನ್ನ ಕ್ರಿಶ್ಚಿಯನ್ ಮಗನನ್ನು ಳಿಸಿ ಸಾಲುಗಟ್ಟಿ ನಿಂತಿರುವ ಜನರತ್ತ ಬೊಟ್ಟು ದಿ "ಹೋಗು" ಎಂದು ಆದೇಶಿಸುತ್ತಾಳೆ. ತನ್ನ ಯೇ ತನ್ನನ್ನು ಓಡಿಸುತ್ತಿದ್ದಾಳೆ ಎಂದು ಭಾವಿಸುವ ಕಣ್ಣೀರಿಡುತ್ತಾನೆ. ಆದರೆ ಆಕೆ ಕರಗುವುದಿಲ್ಲ ೋಗು, ಬದುಕು ಮತ್ತು ಬೆಳೆ" ಎಂದು ಆತನನ್ನು ದೂಡುತ್ತಾಳೆ. ವಿಧಿ ಇಲ್ಲದೆ ಆತ ಹೋಗುತ್ತಾನೆ; ತನ್ನ ಮಗನನ್ನು ಕಳೆದುಕೊಂಡಿರುವ ಯಹೂದಿ ತಾಯಿಯ ಕೈ ಹಿಡಿಯುತ್ತಾನೆ. ಆಕೆಗೆ ಗೊತ್ತಾಗುತ್ತದೆ: ನರಕ ಸದೃಶವಾಗಿರುವ ಶಿಬಿರದಿಂದ ತನ್ನ ಮಗನನ್ನು ಪಾರು ಮಾಡಲು ಕ್ರಿಶ್ಚಿಯನ್ ತಾಯಿ ತನ್ನೊಂದಿಗೆ ತನ್ನ ಪುತ್ರನನ್ನು ಗುಪ್ತವಾಗಿ ಸಾಗಿಸಲು ಇಚ್ಛಿಸುತ್ತಿದ್ದಾಳೆಂದು. ಆ ಹುಡುಗ ತೀರಿಕೊಂಡಿರುವ ತನ್ನ ಮಗನ ವಯಸ್ಸಿನವರೇ ಆದ್ದರಿಂದ ಈತನೇ ತನ್ನ ಮಗ ಎಂದು ಅಧಿಕಾರಿಗಳಿಗೆ ಹೇಳಿ ಅವನನ್ನು ತನ್ನೊಂದಿಗೆ ಇಸ್ರೇಲಿಗೆ ಕರೆದುಕೊಂಡು ಹೋಗುತ್ತಾಳೆ. ಅಲ್ಲಿ ತನ್ನ ಮಗನ ಹೆಸರಾದ ಸಾಲೊಮನ್ ಹೆಸರನ್ನೇ ಈ ಹುಡುಗನಿಗೂ ಇಡುತ್ತಾಳೆ. ತನ್ನ ವಂಶದ ಮತ್ತು ಸಮುದಾಯದ ಪ್ರಮುಖ ಹೆಸರನ್ನೆಲ್ಲ ಆತನಿಗೆ ಮನವರಿಕೆ ಮಾಡಿಕೊಟ್ಟು "ಎಂದೂ ನೀನು ನಿಜವಾಗಲೂ ಯಾರು ಎಂಬುದನ್ನು ಯಾರಿಗೂ ಹೇಳಬೇಡ" ಎಂದು ಹೇಳಿ ಕ್ಷಯರೋಗದಿಂದ ಸಾಯುತ್ತಾಳೆ.

ಹೊಸ ಹೆಸರು, ಹೊಸ ದೇಶ, ಹೊಸ ಪರಿಸರದಲ್ಲಿ ಬಾಲಕ ಏಕಾಂಗಿಯಾಗುತ್ತಾನೆ. ಆತನನ್ನು ದಾಖಲಿಸಿರುವ ಶಾಲೆಯಿಂದ ಓಡಿಹೋಗಲು ಯತ್ನಿಸುತ್ತಾನೆ, ಇತರೆ ಹುಡುಗರೊಂದಿಗೆ ಬಡಿದಾಡುತ್ತಾನೆ, ಆಹಾರವನ್ನು ತ್ಯಜಿಸಿ ಮೌನವಾಗಿ ಪ್ರತಿಭಟಿಸುತ್ತಾನೆ. ಕೊನೆಗೆ ಅವನನ್ನು ನಿಯಂತ್ರಿಸಲು ಆಗಲೇ ಇಬ್ಬರು ಮಕ್ಕಳನ್ನು ಹೊಂದಿರುವ ಬಿಳಿ ಯಹೂದಿ ದಂಪತಿಗಳಿಗೆ ಅವನನ್ನು ಅಧಿಕಾರಿಗಳು ದತ್ತು ನೀಡುತ್ತಾರೆ. ಅವರ ಮನೆಯಲ್ಲೂ ಬಾಲಕ ತನ್ನ ಬಂಡಾಯವನ್ನು ಮುಂದುವರೆಸುತ್ತಾನೆ. ಆದರೆ ಆ ದಂಪತಿಗಳು ಆತನನ್ನು ನಿಜವಾಗಲೂ ಪ್ರೀತಿಸುತ್ತಾರೆ, ಜನಾಂಗೀಯ ದ್ವೇಷಿಗಳಿಂದ ಅವನನ್ನು ರಕ್ಷಿಸುತ್ತಾರೆ, ತಾವು ನಾಸ್ತಿಕರಾದರೂ ಬಾಲಕನಿಗೆ ಯಹೂದಿ ಸಂಪ್ರದಾಯದಲ್ಲಿ ನಂಬಿಕೆ ಇದೆ ಎಂದು ಭಾವಿಸಿ ಆತನನ್ನು ಧಾರ್ಮಿಕ ಶಾಲೆಗೂ ದಾಖಲಿಸುತ್ತಾರೆ. ಪ್ರೀತಿಯಿಂದಲೇ ಬಾಲಕನ ಬಂಡಾಯವನ್ನು ಮುರಿಯುತ್ತಾರೆ. ತನ್ನನ್ನು ಹೆತ್ತ ತಾಯಿಗೆ ಹಂಬಲಿಸುತ್ತಲೇ, ತನ್ನನ್ನು ರಕ್ಷಿಸಿದ ತಾಯಿ ನೀಡಿದ ಎಚ್ಚರಿಕೆಯನ್ನು ಮರೆಯದೇ ತನ್ನನ್ನು ಸಾಕಿಸಲಹುತ್ತಿರುವ ತಾಯಿಗೆ ಹತ್ತಿರವಾಗುತ್ತಾನೆ. ಹೊಸ ದೇಶದ ಭಾಷೆ ಮತ್ತು ತನ್ನ ದತ್ತು ಸಂಸಾರದ ಫ್ರೆಂಚ್ ಭಾಷೆಗಳನ್ನು ಕಲಿಯುತ್ತಾನೆ. ಯಹೂದಿ ಸಂಪ್ರದಾಯಗಳನ್ನು ಪಾಲಿಸುತ್ತಾನೆ, ಇಸ್ರೇಲಿನಲ್ಲಿ ವಾಸಿಸುವ ಹಕ್ಕು ತನ್ನಂತಹ ಕಪ್ಪು ಯಹೂದಿಯರಿಗೂ ಇದೆ ಎಂದು ಪ್ರತಿಭಟಿಸುತ್ತಾನೆ, ವಿಧಿ ಇಲ್ಲದೆ ತಾನಿರುವ ಸಂದರ್ಭಕ್ಕೆ ಹೊಂದುಕೊಳ್ಳುತ್ತಾನೆ. ಆದರೆ ಅವನ ಆಳದಲ್ಲಿ ತನ್ನ ಬದುಕೇ ಒಂದು ದೊಡ್ಡ ಸುಳ್ಳು ಎಂಬ ನೋವು ಕಾಡುತ್ತಲೇ ಇರುತ್ತದೆ; ಹೆತ್ತ ತಾಯಿಯ ನೆನಪು ಮರುಕಳಿಸುತ್ತಿರುತ್ತದೆ.

ಆತ ಹದಿಹರೆಯವನಾದಾಗ ಬಿಳಿ ಯಹೂದಿ ಯುವತಿಯೊಬ್ಬಳು ಅವನನ್ನು ಪ್ರೇಮಿಸಲಾರಂಭಿಸುತ್ತಾಳೆ. ಇಸ್ರೇಲ್ ಸರ್ಕಾರದ ನಿಯಮದ ಪ್ರಕಾರ ಆ ಹಂತದಲ್ಲಿ ಆತ ಸೈನ್ಯವನ್ನು ಸೇರಬೇಕು. ಚಿಕ್ಕವನಿದ್ದಾಗಲೇ ಸಾಕಷ್ಟು ಸಾವು-ನೋವುಗಳನ್ನು ಅನುಭವಿಸಿರುವ ಅವನಿಗೆ ಸೈನ್ಯವನ್ನು ಸೇರುವ ಇಷ್ಟವಿಲ್ಲ, ಅತ್ತ ತನ್ನನ್ನು ಪ್ರೀತಿಸುತ್ತಿರುವ ಹುಡುಗಿಗೆ ತನ್ನ ಬಗ್ಗೆ ಸತ್ಯವನ್ನೂ ಹೇಳಲಾಗದೆ, ಇತ್ತ ಸೈನ್ಯಕ್ಕೆ ಸೇರಿ ಬಂದೂಕು ಹಿಡಿಯಲೂ ಆಗದೆ ಆತ ಫ್ರಾನ್ಸ್ ದೇಶಕ್ಕೆ ಪಲಾಯನ ಮಾಡುತ್ತಾನೆ. ಅಲ್ಲಿ ವೈದ್ಯಕೀಯ ಶಿಕ್ಷಣ ಪಡೆದು ಡಾಕ್ಟರ್ ಆಗುತ್ತಾನೆ. 'ಗಡಿಗಳಿಲ್ಲದ ವೈದ್ಯರು' ಎಂಬ ಸರ್ಕಾರೇತರ ಸಂಘಟನೆಯನ್ನು ಸೇರಿ ಯುದ್ಧ ಪೀಡಿತ ಪ್ರದೇಶಗಳಲ್ಲಿ ವೈದ್ಯನಾಗಿ ಸೇವೆ ಸಲ್ಲಿಸುತ್ತಾನೆ.



ಆದರೂ ಯುದ್ಧದ ಹಿಂಸೆ ಅವನನ್ನು ಬಸವಳಿಸುತ್ತದೆ. ಅನಾರೋಗ್ಯದಿಂದ ಹತ್ತು ವರ್ಷಗಳ ನಂತರ ಇಸ್ರೇಲಿಗೆ ವಾಪಸ್ ಬರುತ್ತಾನೆ. ಅಲ್ಲಿ ಅವನ ಹುಡುಗಿ ಆತನಿಗಾಗಿ ಕಾದಿರುತ್ತಾಳೆ. ತನ್ನ ತಂದೆ-ತಾಯಿಯ ವಿರೋಧದ ನಡುವೆಯೂ ಆಕೆ ಅವನನ್ನು ಮದುವೆಯಾಗುತ್ತಾಳೆ. ತಮ್ಮ ಮೊದಲನೆ ರಾತ್ರಿ ತನ್ನ ಹೆಂಡತಿಗಾದರೂ ತನ್ನ ಬಗ್ಗೆ ಸತ್ಯವನ್ನು ಹೇಳಬೇಕೆಂದು ಆತ ಪ್ರಯತ್ನಿಸುತ್ತಾನೆ. ಆದರೆ ಅವಳ ನಿಷ್ಕಳಂಕ ಪ್ರೀತಿ ಅವನ ಬಾಯಿ ಕಟ್ಟಿ ಹಾಕುತ್ತದೆ.

ಅವರಿಬ್ಬರ ಹೊಸ ಬದುಕು ನೆಮ್ಮದಿಯಿಂದ ಸಾಗುತ್ತದೆ. ಆದರೆ ಯಾವಾಗ ಆಕೆ ಗರ್ಭಿಣಿಯಾಗುತ್ತಾಳೋ ಆಗ ಆತನಿಂದ ಸುಳ್ಳನ್ನು ಮುಂದುವರಿಸಲಾಗುವುದಿಲ್ಲ, ಸತ್ಯ ಹೊರಬರುತ್ತದೆ. ತನ್ನ ಹೆಸರು ಸಾಲೊಮನ್ ಅಲ್ಲ, ತಾನು ಯಹೂದಿ ಅಲ್ಲ, ತಾನು ಇಸ್ರೇಲಿ ಅಲ್ಲ ಎಂದು ಹೇಳಿದಾಗ ಆಕೆ ಕಣ್ಣೀರಿಡುತ್ತಾಳೆ. ತಾನು ತನ್ನ ಹೆತ್ತವರನ್ನು, ಒಡಹುಟ್ಟಿದವರನ್ನು ತ್ಯಜಿಸಿದ್ದು ಇಂಥವನಿಗಾಗಿಯೇ ಎಂದು ಕುಪಿತಳಾಗುತ್ತಾಳೆ. ಅವನನ್ನು ತೊರೆದು ಹೋಗುತ್ತಾಳೆ.


ಆಗ ಆತನ ನೆರವಿಗೆ ಬರುವುದು ಅವನನ್ನು ಪ್ರೀತಿಯಿಂದ ಸಾಕಿಸಲಹಿದ ತಾಯಿ. ಆತ ಬೇಕೆಂತಲೇ ಸುಳ್ಳು ಹೇಳಲಿಲ್ಲ, ಬದಲಾಗಿ ಆತ ಇದ್ದ ಸಂದರ್ಭ ಹಾಗಿತ್ತು ಎಂದು ತಾಯಿ ಮನವರಿಕೆ ಮಾಡಿಕೊಟ್ಟ ನಂತರ ಹೆಂಡತಿ ಆತನಲ್ಲಿಗೆ ವಾಪಸ್ ಬರುತ್ತಾಳೆ. ಹಾಗೆ ಬರುವಾಗ "ನಿನಗಾಗಿ ಮೂವರು ತಾಯಂದಿರು ಏನೇನು ಮಾಡಿಲ್ಲ" ಎಂದು ಉದ್ಗಾರವೆತ್ತುತ್ತಾಳೆ ಮತ್ತು ಆತ ತನ್ನ ಹೆತ್ತ ತಾಯಿಯನ್ನು ಹುಡುಕಬೇಕು ಎಂದು ಹೇಳುತ್ತಾಳೆ. ಅವರಿಗೊಬ್ಬ ಮಗ ಜನಿಸಿದಾಗ ಸಾಲೊಮನ್ ಆಫ್ರಿಕಾದ ನಿರಾಶ್ರಿತರ ಶಿಬಿರದಲ್ಲಿ ಕೆಲಸ ಮಾಡುತ್ತಿರುತ್ತಾನೆ. ಆಗ ಓರ್ವ ಮುದುಕಿ ಆತನ ಕಣ್ಣಿಗೆ ಬೀಳುತ್ತಾಳೆ. "ಅಮ್ಮಾ" ಎಂದು ಆಕೆಯನ್ನು ಅಪ್ಪಿಕೊಳ್ಳುತ್ತಾನೆ. ಆಕೆಯ ಆಕ್ರಂದನದೊಂದಿಗೆ ಚಿತ್ರ ಮುಗಿಯುತ್ತದೆ.


ಈ ಜಗತ್ತಿನಲ್ಲಿ ತಮ್ಮ ಪ್ರಾಣ ಉಳಿಸಿಕೊಳ್ಳಲು ಅದೆಷ್ಟು ಜನ ಏನೇನನ್ನು ಮಾಡಿಲ್ಲ, ಅದೆಷ್ಟೋ ಜನ ಪ್ರಾಣ ರಕ್ಷಣೆಗಾಗಿ ಇತರರನ್ನು ಕೊಂದಿದ್ದಾರೆ, ಉಪವಾಸದಿಂದ ಸಾಯಬಾರದೆಂದು ಇತರೆ ಮನುಷ್ಯರ ಮಾಂಸವನ್ನು ತಿಂದು ಬದುಕಿದ್ದಾರೆ, ಮೂತ್ರವನ್ನು ಕುಡಿದು ತಮ್ಮ ಪ್ರಾಣ ಹೋಗದಂತೆ ನೋಡಿಕೊಂಡಿದ್ದಾರೆ, ನೂರಾರು ಸುಳ್ಳು ಹೇಳಿದ್ದಾರೆ, ತಮ್ಮನ್ನು ನಂಬಿರುವವರಿಗೇ ದ್ರೋಹ ಬಗೆದಿದ್ದಾರೆ.


`Live and become' ನ ನಾಯಕ ಕೂಡ ತನ್ನ ಪ್ರಾಣ ರಕ್ಷಣೆಗೆ ಸುಳ್ಳು ಹೇಳಿದ್ದಾನೆ, ತನ್ನ ಗುಟ್ಟು ರಟ್ಟಾಗದಂತೆ ಪ್ರತಿಕ್ಷಣ ಎಚ್ಚರಿಕೆ ವಹಿಸಿದ್ದಾನೆ. ಆದರೆ ಪ್ರೀತಿಗೆ ಆ ಸುಳ್ಳನ್ನು ಹೊರಗೆಡವುವ ಮತ್ತು ಆ ಸುಳ್ಳನ್ನು ಮೀರಿ ಬದುಕುವ ಶಕ್ತಿ ಇದೆ ಎಂದು ಚಿತ್ರ ತೋರಿಸುತ್ತದೆ.

ಪ್ರೀತಿಯೇ ಹೆತ್ತ ತಾಯಿ ಅವನನ್ನು ದೂರ ಕಳುಹಿಸುವಂತೆ ಮಾಡುತ್ತದೆ. ಪ್ರೀತಿಯೇ ಮತ್ತೊರ್ವ ತಾಯಿ ಅವನನ್ನು ರಕ್ಷಿಸುವಂತೆ ಮಾಡುತ್ತದೆ. ಪ್ರೀತಿಯೇ ಮೂರನೆ ತಾಯಿ ಅವನನ್ನು ಸಾಕಿಸಲಹುವಂತೆ ನೋಡಿಕೊಳ್ಳುತ್ತದೆ. ಪ್ರೀತಿಯೇ ಅವನ ಹೆಂಡತಿ ಅವನನ್ನು ಸ್ವೀಕರಿಸುವಂತೆ ಮಾಡುತ್ತದೆ. ದೇಶ, ಭಾಷೆ, ಧರ್ಮ, ಬಣ್ಣದಂತಹ ಗಡಿಗಳನ್ನು ಗುರುತಿಸದ ಪ್ರೀತಿಗೆ ಇರುವಷ್ಟು ಶಕ್ತಿ ಇನ್ನಾವುದಕ್ಕಿದೆ? ●

ಮರು ಚುನಾವಣೆ: ಯಡ್ಡಿಗೆ ಅಗ್ನಿ ಪರೀಕ್ಷೆ ಸಿದ್ದುಗೆ ಎಂಟ್ರೆನ್ಸ್ ಎಕ್ಸಾಮ್ ಕುಮಾರಣ್ಣನಿಗೆ ಸೇಫ್ ಸೀಟು!








ಮೊನ್ನೆ ಮೊನ್ನೆಯಷ್ಟೇ ಲೋಕಸಭಾ ಚುನಾವಣೆಯೆಂಬ ಅಗ್ನಿಪರೀಕ್ಷೆಯಲ್ಲಿ ಗೆದ್ದು ಹೊರಬಂದ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಈಗ ಮತ್ತೊಂದು ಅಗ್ನಿ ಪರೀಕ್ಷೆ ಎದುರಾಗಿದೆ. ಐದು ಅಸೆಂಬ್ಲಿ ಕ್ಷೇತ್ರಗಳಿಗೆ ಮರುಚುನಾವಣೆ ಘೋಷಣೆಯಾಗಿರುವುದರಿಂದ ಯಡ್ಡಿ ಮತ್ತೆ ಅಭಿವೃದ್ಧಿ ಕೆಲಸಗಳಿಗೆ ಟಾಟಾ ಹೇಳಿ ಉಪ ಚುನಾವಣೆಯ ರಾಜಕೀಯದಲ್ಲಿ ಮಗ್ನರಾಗಿದ್ದಾರೆ.

ಒಂದೇ ವರ್ಷದ ಅವಧಿಯಲ್ಲಿ ಯಡಿಯೂರಪ್ಪ ಎದುರಿಸುತ್ತಿರುವ ಮೂರನೇ ಚುನಾವಣಾ ಪರೀಕ್ಷೆ ಇದು. ಮೊದಲ ಪರೀಕ್ಷೆ ನಡೆದದ್ದು ಎಂಟು ಅಸೆಂಬ್ಲಿ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಾಗ. ಅದು ಸರ್ಕಾರದ ಅಳಿವು ಉಳಿವಿನ ಮೇಲೆ ಪರಿಣಾಮ ಬೀರಲಿದ್ದುದರಿಂದ ಅವು ತುಂಬಾ ಮುಖ್ಯವಾಗಿದ್ದವು. ಅಂದು ಎಂಟರಲ್ಲಿ ಐದು ಸ್ಥಾನಗಳನ್ನು ಗೆದ್ದ ಯಡ್ಡಿ ತನ್ನ ಕುರ್ಚಿಯನ್ನು ಭದ್ರಪಡಿಸಿಕೊಂಡಿದ್ದರು ಮಾತ್ರವಲ್ಲ, ಪಕ್ಷದ ಮೇಲಿನ ತಮ್ಮ ಹಿಡಿತವನ್ನೂ ಗಟ್ಟಿಗೊಳಿಸಿಕೊಂಡಿದ್ದರು.



ಅದಾದ ನಂತರ ಎರಡನೆ ಪರೀಕ್ಷೆಯನ್ನು ಲೋಕಸಭಾ ಚುನಾವಣೆಯ ರೂಪದಲ್ಲಿ ಎದುರಿಸಿದ ಯಡ್ಡಿ 28ರಲ್ಲಿ 19 ಸ್ಥಾನಗಳನ್ನು ಗೆದ್ದು ಚೆಡ್ಡಿಗಳ ಪ್ರಶ್ನಾತೀತ ನಾಯಕನಾಗಿ ಉದ್ಭವಿಸಿದ್ದರು. ಈಗ ಮೂರನೆ ಪರೀಕ್ಷೆಯಾದ ಈ ಮರು ಚುನಾವಣೆಯ ಐದು ಅಸೆಂಬ್ಲಿ ಕ್ಷೇತ್ರಗಳಲ್ಲಿ ಎಷ್ಟು ಸ್ಥಾನ ಗೆಲ್ಲುತ್ತಾರೆ ಎಂದು ನೋಡಬೇಕಾಗಿದೆ.


ಈ ಐದೂ ಅಸೆಂಬ್ಲಿ ಕ್ಷೇತ್ರದ ಫಲಿತಾಂಶ ಯಾವುದೇ ರೀತಿಯಲ್ಲಿ ಸರಕಾರದ ಅಳಿವುಉಳಿವಿನ ಮೇಲೆ ಪರಿಣಾಮ ಬೀರುವುದಿಲ್ಲ, ಯಾಕೆಂದರೆ ಈಗಾಗಲೇ ಸರ್ಕಾರವನ್ನು ಮುನ್ನಡೆಸಲು ಬೇಕಾದ ಸಂಖ್ಯೆಯ ಶಾಸಕರನ್ನು ಯಡ್ಡಿ ಖರೀದಿಸಿದ್ದಾಗಿದೆ. ಹೀಗಾಗಿ ಈ ಐದರಲ್ಲಿ ಐದನ್ನು ಕಳೆದುಕೊಂಡರೂ ಯಡ್ಡಿಯ ಸಿಂಹಾಸನಕ್ಕೆ ಯಾವುದೇ ಧಕ್ಕೆಯಿಲ್ಲ. ಆದರೆ ಸದ್ಯದಲ್ಲೇ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ಇರುವುದರಿಂದ ಈ ಅಸೆಂಬ್ಲಿ ಚುನಾವಣೆಯಲ್ಲೂ ಜಯಭೇರಿ ಬಾರಿಸುವುದು ಯಡ್ಡಿಗೆ ಅನಿವಾರ್ಯವಾಗಿದೆ.

ಒಂದು ಗೆದ್ದರೂ ಮೊಂಡುವಾದ

ಹಾಗೆ ನೋಡಿದರೆ, ಗೋವಿಂದರಾಜನಗರ, ರಾಮನಗರ, ಚನ್ನಪಟ್ಟಣ, ಚಿತ್ತಾಪುರ ಮತ್ತು ಕೊಳ್ಳೇಗಾಲ ಈ ಐದು ಕ್ಷೇತ್ರಗಳಲ್ಲಿ ನಡೆಯಲಿರುವ ಉಪ ಚುನಾವಣೆಯಲ್ಲಿ ನಾಲ್ಕು ಕಾಂಗ್ರೆಸ್‌ನ ಸ್ಥಾನವಾಗಿದ್ದು, ರಾಮನಗರ ಜೆಡಿಎಸ್‌ನ ಕೇಂದ್ರವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಗೋವಿಂದರಾಜನಗರವನ್ನು ಪ್ರತಿನಿಧಿಸುವ ಸಚಿವ ಸೋಮಣ್ಣ ಈ ಕ್ಷೇತ್ರದಿಂದ ಗೆಲ್ಲುವ ಸಾಧ್ಯತೆ ಕಾಣಿಸುತ್ತಿದೆ. ಯಾವತ್ತೂ ಸೋಲರಿಯದ ಈ ಸರದಾರ ಗೋವಿಂದರಾಜನಗರದಲ್ಲಿ ಗೆದ್ದು ತನ್ನ ರಾಜಕೀಯ ಅಸ್ತಿತ್ವವನ್ನು ಗಟ್ಟಿಗೊಳಿಸಬೇಕಿರುವುದು ಮಾತ್ರವಲ್ಲ, ತನ್ನ ನಾಯಕ ಯಡಿಯೂರಪ್ಪನವರ ಮರ್ಯಾದೆಯನ್ನೂ ಕಾಪಾಡಬೇಕಾಗಿದೆ. ಹಾಗಾಗಿ ಐದರಲ್ಲಿ ಒಂದು ಸ್ಥಾನ ಗೆದ್ದರೂ ಬಿಜೆಪಿಯ ಪರ ಜನ ತಮ್ಮ ಒಲವು ವ್ಯಕ್ತಪಡಿಸಿದ್ದಾರೆ ಎಂದು ಘೋಷಿಸಲು ಬಿಜೆಪಿ ನಾಯಕರು ತುದಿಗಾಲಲ್ಲಿ ನಿಂತಿದ್ದಾರೆ.

ಈ ಕಾರಣದಿಂದಾಗಿ ಈ ಐದೂ ಅಸೆಂಬ್ಲಿ ಕ್ಷೇತ್ರದ ಮರು ಚುನಾವಣೆ ಯಡ್ಡಿಗಿಂತ ಕಾಂಗ್ರೆಸ್ ಪಕ್ಷಕ್ಕೆ ಬಹಳ ಮುಖ್ಯವಾಗಿದೆ. ಅದರಲ್ಲೂ ಮೊನ್ನೆ ಮೊನ್ನೆಯಷ್ಟೇ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಸಿದ್ದರಾಮಯ್ಯ ಅವರ ಪಾಲಿಗಂತೂ ಈ ಚುನಾವಣೆ 'ಮಾಡು ಇಲ್ಲವೇ ಮಡಿ' ಎಂಬಂತಾಗಿದೆ. ಯಾಕೆಂದರೆ, ತೆರವಾದ ನಾಲ್ಕು ಕ್ಷೇತ್ರಗಳಲ್ಲಿ ಒಂದರಲ್ಲಿ ಬಿಜೆಪಿ ಗೆದ್ದರೂ ಇದು ಸಿದ್ದುಗೆ ಗುದ್ದು ಕೊಟ್ಟಂತಾಗುತ್ತದೆ. ಕಾಂಗ್ರೆಸ್ ಪಕ್ಷದಲ್ಲಿನ ಅಂತಃಕಲಹ ತಾರಕಕ್ಕೇರಿರುವುದರಿಂದ ಈ ಚುನಾವಣೆಯಲ್ಲಿ ಸಿದ್ದು, ದೇಶಪಾಂಡೆ ಮತ್ತು ಡಿಕೆ ಶಿವಕುಮಾರ್ ಅವರ ನಡುವಿನ ಹೊಂದಾಣಿಕೆಯ ಮೇಲೆ ಪಕ್ಷದ ಅಭ್ಯರ್ಥಿಗಳ ಫಲಿತಾಂಶ ನಿರ್ಣಯವಾಗಲಿದೆ.

ಕಾಂಗ್ರೆಸ್-ದಳ ಮೈತ್ರಿ?



ಈ ಮಧ್ಯೆ ಜಾತ್ಯತೀತ ಶಕ್ತಿಗಳೆಲ್ಲಾ ಒಂದಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಬೇಕು ಎಂಬ ಹಳೇ ಮಂತ್ರವನ್ನು ಹಲವರು ಹೊಸ ರಾಗದಲ್ಲಿ ಪಠಿಸುತ್ತಿದ್ದಾರೆ. ಇದರರ್ಥ ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ಯಡ್ಡಿಗೆ ಶಾಕ್ ನೀಡಬೇಕೆಂಬುದು. "ಇಂತಹ ಹೊಂದಾಣಿಕೆಗೆ ನಾವು ರೆಡಿ" ಎಂದು ಜೆಡಿಎಸ್‌ನ ಹೈಕಮಾಂಡ್ ದೇವೇಗೌಡ ಮತ್ತು ದಂಡ ನಾಯಕ ಕುಮಾರಸ್ವಾಮಿ ಈಗಾಗಲೇ ಘೋಷಿಸಿದ್ದಾರೆ. ಅಷ್ಟೇ ಅಲ್ಲ, ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕ ಸಿದ್ದು ಮತ್ತು ಜೆಡಿಎಸ್ ನಾಯಕ ರೇವಣ್ಣ ಹಳೆಯ ವೈರತ್ವವನ್ನು ಮರೆತು ಪರಸ್ಪರ ಆಲಿಂಗನ ಮಾಡಿ ಸರಕಾರದ ವಿರುದ್ಧ ವಾಗ್ದಾಳಿ ನಡೆಸುತ್ತಿರುವುದನ್ನು ಕೂಡ ಜಾತ್ಯತೀತ ಶಕ್ತಿಗಳು ಒಂದಾಗಬೇಕು ಎಂಬ ಕೂಗೆತ್ತುತ್ತಿರುವವರು ನೆನಪಿಸುತ್ತಾರೆ.


ಆದರೆ ಕಾಂಗ್ರೆಸ್‌ನಲ್ಲಿ ಈ ಬಗ್ಗೆ ಈಗಾಗಲೇ ಅಪಸ್ವರದ ಮಾತು ಕೇಳಿಬರುತ್ತಿದೆ. ಮುಖ್ಯವಾಗಿ ಸಿದ್ದರಾಮಯ್ಯನವರು ಜೆಡಿಎಸ್ ಜೊತೆಗಿನ ಈ ಮೈತ್ರಿ ಖಡಾಖಂಡಿತವಾಗಿ ಬೇಡ ಎನ್ನುತ್ತಿದ್ದಾರೆ. ಇವರ ಜೊತೆಗೆ ದೇಶಪಾಂಡೆ ಕೂಡಾ ಮೈತ್ರಿಯ ಬದಲು ಏಕಾಂಗಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಕಾಂಗ್ರೆಸ್ ಮತ್ತು ದಳ ಚುನಾವಣಾ ಮೈತ್ರಿಯನ್ನು ಮಾಡಿಕೊಳ್ಳಲಾಗದಂಥ ಪರಿಸ್ಥಿತಿಯಲ್ಲಿರುವುದು ಯಡ್ಡಿಗೆ ಸಂತಸ ತಂದಿದೆ.

ದೇವೇಗೌಡರ ಬೆಂಬಲದಿಂದ ಚುನಾವಣೆಯನ್ನು ಎದುರಿಸಿದ್ದೇ ಆದಲ್ಲಿ ಮುಂಬರುವ ದಿನಗಳಲ್ಲಿ ಪಕ್ಷದ ಸಂಘಟನೆ ಕಷ್ಟವಾಗುತ್ತದೆ. ಹಾಗೆಯೇ ಸದ್ಯದಲ್ಲೇ ನಡೆಯಲಿರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕೂಡಾ ಈ ಮೈತ್ರಿಯಿಂದಾಗಿ ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆಯಾಗಬಹುದು ಎಂಬುದು ಸಿದ್ದರಾಮಯ್ಯ ಬಣದ ವಾದ. ಒಂದು ವೇಳೆ ಮೈತ್ರಿಯನ್ನು ಮಾಡಿಕೊಂಡಿದ್ದೇ ಆದಲ್ಲಿ ಇದರಿಂದ ದಳಕ್ಕೇ ಲಾಭವೇ ವಿನಃ ಕಾಂಗ್ರೆಸ್‌ಗಲ್ಲ ಎಂಬುದು ಅವರ ಮತ್ತೊಂದು ತರ್ಕ. ಐದು ಕ್ಷೇತ್ರಗಳಲ್ಲಿ ರಾಮನಗರ ಮತ್ತು ಚನ್ನಪಟ್ಟಣ ಕ್ಷೇತ್ರವನ್ನು ನಮಗೆ ಬಿಟ್ಟುಕೊಡಿ ಎಂದು ಕುಮಾರಸ್ವಾಮಿ ಈಗಾಗಲೇ ಪರೋಕ್ಷವಾಗಿ ಕಾಂಗ್ರೆಸ್‌ಗೆ ಸೂಚಿಸಿದ್ದಾರೆ. ಈ ಎರಡೂ ಕ್ಷೇತ್ರಗಳು ಕುಮಾರಸ್ವಾಮಿ ಪ್ರತಿನಿಧಿಸುವ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿವೆ ಎಂಬುದೇ ವಿಶೇಷ. ಅಲ್ಲಿಗೆ ರಾಮನಗರದ ಜೊತೆಗೆ ಚನ್ನಪಟ್ಟಣವನ್ನೂ ಗೆಲ್ಲುವುದು ಕುಮಾರಸ್ವಾಮಿಯವರ ಉದ್ದೇಶ. ಕಾಂಗ್ರೆಸ್ ಜೊತೆ ಮೈತ್ರಿ ಸಾಧಿಸಿದರೆ, ಖಂಡಿತವಾಗಿಯೂ ಚನ್ನಪಟ್ಟಣ ದಳದ ಪಾಲಾಗುವುದರಲ್ಲಿ ಸಂಶಯವೇ ಇಲ್ಲ.

ಒಂದೆಡೆ ಗೋವಿಂದರಾಜನಗರ ಬಜೆಪಿಗೆ ಹೋದರೆ


ಕೊಳ್ಳೇಗಾಲ: ಕೃಷ್ಣಮೂರ್ತಿಗೆ ನಾಲ್ಕನೇ ಸೋಲು?

ಕೊಳ್ಳೇಗಾಲ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಯಾರೇ ಸ್ಪರ್ಧಿಸಿದರೂ ಅಲ್ಲಿ ಸಿದ್ದರಾಮಯ್ಯನವರ ಪ್ರತಿಷ್ಠೆಯೇ ಚುನಾವಣೆಯ ಮುಖ್ಯ ವಿಷಯವಾಗುತ್ತದೆ. ಯಾಕೆಂದರೆ ಕೊಳ್ಳೇಗಾಲ ಸಿದ್ದರಾಮಯ್ಯನವರ ಸಾಮ್ರಾಜ್ಯದ ಕಾರಸ್ಥಾನ. ಸದ್ಯಕ್ಕೆ ಇಲ್ಲಿ ಸಿದ್ದಣ್ಣನ ಬಲಗೈ ಬಂಟ ಜಯಣ್ಣ ಚುನಾವಣೆಯಲ್ಲಿ ಸ್ಪರ್ಧಿಸುವ ಮಾತು ಕೇಳಿಬರುತ್ತಿದೆ. ಜಯಣ್ಣನನ್ನು ಗೆಲ್ಲಿಸುವ ಮುಖಾಂತರ ಸಿದ್ದಣ್ಣ ಕೂಡಾ ಗೆಲುವಿನ ಆನಂದವನ್ನು ಸವಿಯುವ ಕನಸು ಕಾಣುತ್ತಿದ್ದಾರೆ.



ಬಿಜೆಪಿ ಪಾಲಿಗೆ ಕೊಳ್ಳೇಗಾಲ ವಿಚಿತ್ರ ಕ್ಷೇತ್ರವಾಗಿದೆ. ಮಾಜಿ ಸಚಿವ ರಾಚಯ್ಯನವರ ಮಗ ಎ.ಆರ್. ಕೃಷ್ಣಮೂರ್ತಿ ಅವರಿಗೆ ಬಿಜೆಪಿ ಕೊಳ್ಳೇಗಾಲದಿಂದ ಸ್ಪರ್ಧಿಸಲು ಟಿಕೆಟ್ ನೀಡಿದೆ. ಮೊನ್ನೆಯ ಅಸೆಂಬ್ಲಿ ಚುನಾವಣೆಯಲ್ಲಿ ಚಿತ್ರ ನಿರ್ದೇಶಕ ಎಸ್. ಮಹೇಂದರ್ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕೃಷ್ಣಮೂರ್ತಿ ಈಗಾಗಲೇ ಮೂರು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲಿನ ಕಹಿ ಅನುಭವ ಕಂಡವರು. ಮೊನ್ನೆಯ ಲೋಕಸಭಾ ಚುನಾವಣೆಯಲ್ಲೂ ಇವರೇ ಬಿಜೆಪಿ ಅಭ್ಯರ್ಥಿಯಾಗಿ ಸೋಲು ಕಂಡಿದ್ದರು. ಆ ಸೋಲೇ ಈ ಬಾರಿಯ ಚುನಾವಣೆಯಲ್ಲಿ ಸಿಂಪಥಿಯಾಗಿ ಪರಿವರ್ತನೆಯಾಗಬಹುದು ಎಂಬ ಲೆಕ್ಕಾಚಾರ ಬಿಜೆಪಿ ನಾಯಕರದ್ದು. ಆದರೆ ಅಲ್ಲಿ ಮಹೇಂದರ್, ಮಾಜಿ ಪೊಲೀಸ್ ಅಧಿಕಾರಿ ಸುಭಾಷ್ ಭರಣಿ, ಬಿಜೆಪಿ ನಾಯಕ ನಂಜುಂಡಪ್ಪ ಹಾಗೂ ಇನ್ನಿಬ್ಬರು ಟಿಕೆಟ್‌ಗಾಗಿ ಸ್ಪರ್ಧೆ ನಡೆಸಿದ್ದರಿಂದ ಇವರೆಲ್ಲರೂ ಚುನಾವಣೆ ಸಂದರ್ಭದಲ್ಲಿ 'ಮೌನ'ವಾದರೆ ಕೃಷ್ಣಮೂರ್ತಿಗೆ ಅಮೋಘ ನಾಲ್ಕನೇ ಸೋಲು ಕಟ್ಟಿಟ್ಟ ಬುತ್ತಿ.

ಚನ್ನಪಟ್ಟಣ: ಯೋಗವಿಲ್ಲದ ಯೋಗೇಶ್ವರ್




ಇದು ಖಂಡಿತವಾಗಿಯೂ ಪ್ರಜಾಪ್ರಭುತ್ವದ ವ್ಯಂಗ್ಯ ಎನ್ನಬೇಕಾಗಿದೆ. ಮೊನ್ನೆಯ ಅಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಬಂದ ಶಾಸಕ ಯೋಗೇಶ್ವರ್ ಲೋಕಸಭಾ ಚುನಾವಣೆಗೆ ಮೊದಲು ಅಸೆಂಬ್ಲಿ ಸ್ಥಾನಕ್ಕೆ ರಾಜೀನಾಮೆ ನೀಡಿ ದೆಹಲಿಗೆ ಹೋಗುವ ಕನಸು ಕಂಡರು. ಯಾವಾಗ ದೆಹಲಿ ವಿಮಾನ ಹತ್ತುವ ಯೋಗ ಈ ಯೋಗೇಶ್‌ಗೆ ದೊರಕಲಿಲ್ಲವೋ ಆಗ ಮತ್ತೆ ಚನ್ನಪಟ್ಟಣವೇ ವಾಸಿ ಎಂದು ಪುನಃ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

ಒಂದೇ ಒಂದು ವ್ಯತ್ಯಾಸವೆಂದರೆ, ಕಳೆದ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಯೋಗಿ ಈಗ ಬಿಜೆಪಿ ಅಭ್ಯರ್ಥಿ. ಅಂತೂಇಂತೂ ಒಂದೇ ವರ್ಷದ ಅವಧಿಯಲ್ಲಿ ಮೂರು ಬಾರಿ ಮತದಾರರ 'ಸೇವೆ' ಮಾಡುವ ಸೌಭಾಗ್ಯ ಈ ಯೋಗಿಗೆ ದೊರಕಿದೆ.

ಮೆಗಾಸಿಟಿ ಕುಖ್ಯಾತಿಯ ಯೋಗಿಯನ್ನು ಸೋಲಿಸಲು ಕಾಂಗ್ರೆಸ್ ಈ ಬಾರಿ ವಿಶೇಷವಾದ ಕಾರ್ಯತಂತ್ರ ಹೆಣೆದಿದೆ. ಇದರ ಮೊದಲ ಹೆಜ್ಜೆಯೆಂಬಂತೆ ಮೊನ್ನೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಯೋಗಿ ಮನೆ ಮೇಲೆ ದಾಳಿ ನಡೆಸಿದ್ದಾರೆ. ಇದರಿಂದ ತಬ್ಬಿಬ್ಬಾಗಿರುವ ಯೋಗಿ ಈಗ ಯಾವ ಮುಖ ತೋರಿಸಿ ಮತದಾರರಲ್ಲಿ ಮತ ಕೇಳುತ್ತಾರೋ ನೋಡಬೇಕು. ಒಂದೆಡೆ ಯೋಗಿಯ ಧನಬಲ ಕುಗ್ಗಿದೆ, ಮತ್ತೊಂದೆಡೆ ಮನೋಬಲ ಭಗ್ನಗೊಂಡಿದೆ. ಹೀಗಾಗಿ ಯೋಗಿ ಪಾಲಿಗೆ ಯಶಸ್ಸಿನ ಯೋಗ ಮರೀಚಿಕೆಯಾದರೂ ಆಗಬಹುದು. ದಿನಕ್ಕೊಂದು ಪಕ್ಷ ಬದಲಿಸುವ, ದಿನಕ್ಕೊಂದು ವೇಷ ಧರಿಸುವ, ವಾರಕ್ಕೊಮ್ಮೆ ದೆಹಲಿಗೆ ಹಾರುವ ಕನಸು ಕಾಣುತ್ತಿರುವ ಯೋಗಿಯ ಬಗ್ಗೆ ಮತದಾರರು ಜಿಗುಪ್ಸೆಗೊಂಡಿರುವುದಂತೂ ನಿಜ.

ಚನ್ನಪಟ್ಟಣದಲ್ಲಿ ತನ್ನ ಪಾರುಪತ್ಯವನ್ನು ಪ್ರದರ್ಶಿಸಿ ತಾನಿನ್ನೂ ಜನನಾಯಕ ಎಂಬುದನ್ನು ತೋರಿಸಲು ಕಾಂಗ್ರೆಸ್ ಕಾರ್ಯಾಧ್ಯಕ್ಷ ಡಿಕೆಶಿ ಅಹರ್ನಿಶಿ ದುಡಿಯುತ್ತಿದ್ದಾರೆ.

ಸೋಮಣ್ಣ: ಮಾಡಣ್ಣ ಇಲ್ಲ ಮಡಿಯಣ್ಣ!



ಗೋವಿಂದರಾಜನಗರ ಉಪಚುನಾವಣೆ ಹಿಂದಿನ ಚಾಮುಂಡೇಶ್ವರಿ ಉಪಚುನಾವಣೆಯ ತರಹ ರಾಷ್ಟ್ರಮಟ್ಟದ ಗಮನ ಸೆಳೆಯುತ್ತದಲ್ಲದೆ, ಅದು ಕೂಡ ಫೋಟೋ ಫಿನಿಷ್‌ನಲ್ಲಿ ಅಂತ್ಯಗೊಳ್ಳಲಿದೆ ಎಂದೇ ರಾಜಕೀಯ ವಲಯದಲ್ಲಿ ಈಗಾಗಲೇ ಮಾತು ಕೇಳಿಬರುತ್ತಿದೆ.

ಯಾರು ಏನೇ ಹೇಳಲಿ ಸೋಮಣ್ಣನವರ ಪಾಲಿಗೆ ಇದು ಅವರ ವೃತ್ತಿಜೀವನದ ಅತ್ಯಂತ ಸಂಕಷ್ಟದ ಸಮಯ. ಹೀಗಾಗಿ ಈ ಬಾರಿಯ ಚುನಾವಣೆ ಅವರಿಗೆ ಮಾಡು ಇಲ್ಲವೇ ಮಡಿ ಎಂಬಂತಾಗಿದೆ. ಈ ಚುನಾವಣೆಯಲ್ಲಿ ಒಂದು ವೇಳೆ ಸೋತರೆ ರಾಜಕೀಯವಾಗಿ ಸೋಮಣ್ಣ ಎಂಬ ನುರಿತ ರಾಜಕಾರಣಿಯ ವರ್ಣರಂಜಿತ ಅಧ್ಯಾಯ ಮುಗಿದುಹೋದಂತೆಯೇ. ದಳ, ಕಾಂಗ್ರೆಸ್, ಪಕ್ಷೇತರ.... ಹೀಗೆ ಹಲವಾರು ಅವತಾರಗಳಲ್ಲಿ ಕಾಣಿಸಿಕೊಂಡಿರುವ ಸೋಮಣ್ಣ ಈಗ ಕೋಮುವಾದಿ ಚೆಡ್ಡಿಗಳ ಅಭ್ಯರ್ಥಿಯ ಅವತಾರದಲ್ಲಿ ಚುನಾವಣೆಯನ್ನು ಎದುರಿಸುತ್ತಿದ್ದಾರೆ.

ಗೋವಿಂದರಾಜನಗರ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷದಷ್ಟು ಒಕ್ಕಲಿಗರು ಮತ್ತು ಮೂವತ್ತು ಸಾವಿರದಷ್ಟು ಕುರುಬ ಜನಾಂಗದ ಮತಗಳು ಇರುವುದರಿಂದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಪ್ರಬಲ ಪೈಪೋಟಿ ಎದ್ದುಕಾಣಲಿದೆ. ಇಷ್ಟಕ್ಕೂ ಕಾಂಗ್ರೆಸ್ ಶಾಸಕ ಲೇಟಿಟ್ ಕೃಷ್ಣಪ್ಪನವರೂ ಕೂಡ ತನ್ನ ಎದುರಾಳಿ ಸೋಮಣ್ಣನನ್ನು ಮುಗಿಸಲು ಇದೇ ಸೂಕ್ತವಾದ ಸಮಯ ಎಂದು ತಮ್ಮ ಶಕ್ತಿ ಮೀರಿ ದುಡಿಯಲು ತುದಿಗಾಲಲ್ಲಿ ನಿಂತಿದ್ದಾರೆ.

ಆದರೆ ಹಲವಾರು ಚುನಾವಣೆಗಳಲ್ಲಿ ತನ್ನ ಚತುರತೆಯನ್ನು ಮೆರೆದು ರಾಜಕೀಯ ಪಂಡಿತರ ಲೆಕ್ಕಾಚಾರವನ್ನು ತಲೆಬುಡ ಮಾಡಿದ ಸೋಮಣ್ಣ ಗೋವಿಂದರಾಜ ನಗರದಲ್ಲೂ ಮತ್ತೊಮ್ಮೆ ಜಯಭೇರಿ ಬಾರಿಸುವ ಸಾಧ್ಯತೆಯೇ ಹೆಚ್ಚು. ಆದರೆ ಈ ಹಿಂದಿನ ಚುನಾವಣೆಗಳಂತೆ ಸೋಮಣ್ಣ ನಿರಾಯಾಸವಾಗಿ ಗೆಲ್ಲುವ ಸಾಧ್ಯತೆಯಂತೂ ಇಲ್ಲ. ಹೀಗಾಗಿ ಸೋಮಣ್ಣನ ಪಾಲಿಗೆ ಈ ಚುನಾವಣೆ ಮುಳ್ಳಿನಿಂದ ಆವೃತವಾದ ಹೂವಿನಂತಾಗಿದೆ.


ಮತ್ತೊಂದೆಡೆ ಚನ್ನಪಟ್ಟಣ ದಳಕ್ಕೆ ಹೋದರೆ, ಕಾಂಗ್ರೆಸ್‌ಗೆ ಉಳಿಯುವುದು ಕೇವಲ ಎರಡು ಸ್ಥಾನ ಮಾತ್ರ. ಈ ಲೆಕ್ಕಾಚಾರದಂತೆ ವಿಶ್ಲೇಷಿಸಿದರೆ, ಕಾಂಗ್ರೆಸ್ ಅರ್ಧದಷ್ಟು ಕುಸಿತ ಕಾಣುತ್ತದೆ. ಆ ಕಾರಣಕ್ಕಾಗಿ ಮೈತ್ರಿಯ ಸಹವಾಸ ಮಾಡದೇ ಏಕಾಂಗಿಯಾಗಿ ಸ್ಪರ್ಧಿಸಿ ಮೂರು ಸ್ಥಾನ ಗೆಲ್ಲುವತ್ತ ಕಾಂಗ್ರೆಸ್ ಪಕ್ಷದ ನಾಯಕರು ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಸೋಮಣ್ಣ ವಿರುದ್ಧ ಸಿದ್ದು ಪಡೆ

ಸಿದ್ದರಾಮಯ್ಯನವರ ಕಾರ್ಯಕ್ಷೇತ್ರವಾದ ಕೊಳ್ಳೇಗಾಲದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸೋಲಬಾರದು ಎಂಬ ರಾಜಕೀಯ ತಂತ್ರಗಾರಿಕೆಗೆ ಸಿದ್ದು ಬಣ ಬದ್ಧವಾಗಿದೆ. ಮತ್ತೊಂದೆಡೆ 'ಹೊಡೆದರೆ ದೊಡ್ಡ ಮಿಕ್ಕವನ್ನೇ ಹೊಡೆಯಬೇಕು' ಎಂಬ ಮಾತಿನಂತೆ ಗೋವಿಂದರಾಜನಗರದಲ್ಲಿ ಸೋಮಣ್ಣನನ್ನು ಸೋಲಿಸಲು ಸಿದ್ದು ಬಣ ಅನೇಕಾನೇಕ ಒಳತಂತ್ರಗಳನ್ನು ರಚಿಸಿ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಿದೆ. ಯಡ್ಡಿ ಸಂಪುಟದ ಸಚಿವ ಸೋಮಣ್ಣನನ್ನು ಸೋಲಿಸಿದರೆ, ಅದು ರಾಷ್ಟ್ರಮಟ್ಟದ ಸುದ್ದಿಯಾಗುತ್ತದೆ ಮಾತ್ರವಲ್ಲ, ಮೇಡಂ ಸೋನಿಯಾಜಿ ಕಿವಿಗೂ ಬೀಳುತ್ತವೆ. ಆ ಮೂಲಕ ಸಿದ್ದರಾಮಯ್ಯನವರ ನಾಯಕತ್ವಕ್ಕೆ ಒಂದು ಹೊಸ ವರ್ಚಸ್ಸು ಬಂದಂತಾಗುತ್ತದೆ ಎಂಬುದು ಸಿದ್ದು ಹಿಂಬಾಲಕರ ಲೆಕ್ಕಾಚಾರ. ಜೊತೆಗೆ ಯಡಿಯೂರಪ್ಪನವರ ಕುಲಬಾಂಧವರೂ, ಪರಮಾಪ್ತರೂ ಆಗಿರುವ ಸೋಮಣ್ಣ 'ಔಟ್' ಆದರೆ ಅದು ಬಜೆಪಿಯ ಅಧಃಪತನಕ್ಕೆ ನಾಂದಿಯಾಗಬಹುದು ಎಂಬುದು ಅವರ ಎಣಿಕೆ. ಈ ಎಲ್ಲ ಕಾರಣದಿಂದಾಗಿ ಈ ಐದು ಕ್ಷೇತ್ರಗಳಲ್ಲಿ ಗೋವಿಂದರಾಜನಗರ ಅತ್ಯಂತ ಪ್ರತಿಷ್ಠೆಯ ಕ್ಷೇತ್ರವಾಗಿ ಮೂಡಿಬರುವುದರಲ್ಲಿ ಆಶ್ಚರ್ಯವಿಲ್ಲ. ಈ ಕ್ಷೇತ್ರದಿಂದ ಸೋಮಣ್ಣನಿಗೆ ಪ್ರಬಲ ಪೈಪೋಟಿ ನೀಡುವ 'ಅಚ್ಚರಿಯ ಅಭ್ಯರ್ಥಿ'ಯನ್ನು ನಿಲ್ಲಿಸುತ್ತೇವೆ ಎಂದು ಕಾಂಗ್ರೆಸ್‌ನವರು ವದಂತಿಕಾರು ಹಬ್ಬಿಸುತ್ತಿದ್ದಾರೆ. ಈ ಪುಕಾರಿನಿಂದಾಗಿ ಹೆದರಿ ಕಂಗಾಲಾಗಿರುವ ಸೋಮಣ್ಣ ಗೋವಿಂದರಾಜನಗರದ ಕ್ಷೇತ್ರದುದ್ದಕ್ಕೂ ಈಗಾಗಲೇ ಪಾದಯಾತ್ರೆ ಆರಂಭಿಸಿದ್ದಾರೆ.

ಕಾಂಗ್ರೆಸ್ ಪರವಾಗಿ ಗೋವಿಂದರಾಜನಗರದಿಂದ ಮಾಗಡಿಯ ಮಾಜಿ ಶಾಸಕ ಎಚ್.ಎಂ. ರೇವಣ್ಣ ಅಥವಾ ವಿಜಯನಗರದ ಕುಬೇರ ಶಾಸಕ ಎ. ಕೃಷ್ಣಪ್ಪ ಅವರ ಮಗ ಪ್ರಿಯಾಕೃಷ್ಣರನ್ನು ಅಭ್ಯರ್ಥಿ ಮಾಡುವ ಬಗ್ಗೆ ಮಾತು ಕೇಳಿಬರುತ್ತದೆ. ಇವರಿಬ್ಬರ ಹೊರತಾಗಿಯೂ ಒಬ್ಬ ಅಚ್ಚರಿಯ ಅಭ್ಯರ್ಥಿಯನ್ನು ನಿಲ್ಲಿಸುವ ಬಗ್ಗೆಯೂ ಸಿದ್ದು ಪಡೆ ಸಿದ್ಧತೆ ನಡೆಸುತ್ತಿದೆ.

ಮತ್ತೊಂದೆಡೆ ಮೊನ್ನೆಯಷ್ಟೇ ಆದಾಯ ತೆರಿಗೆ ಅಧಿಕಾರಿಗಳ ದಾಳಿಗೆ ಒಳಗಾಗಿರುವ ಸಿ.ಪಿ. ಯೋಗೇಶ್ವರ್ ಅವರನ್ನೂ ರಾಜಕೀಯವಾಗಿ ಮುಗಿಸಲು ಕಾಂಗ್ರೆಸ್ ಒಪ್ಪವಾಗಿ ರಣತಂತ್ರ ಹೆಣೆಯುತ್ತಿದೆ. ಇಲ್ಲಿ ಕಾಂಗ್ರೆಸ್ ಪಾಲಿಗೆ ವಿಚಿತ್ರವಾದ ಪರಿಸ್ಥಿತಿ. ಯೋಗೇಶ್ವರ್ ಈ ಸ್ಥಾನವನ್ನು ಉಳಿಸಿಕೊಳ್ಳಲು ಎಷ್ಟು ಪ್ರಯತ್ನಿಸುತ್ತಿದ್ದಾರೋ ಅಷ್ಟೇ ಪ್ರಯತ್ನವನ್ನು ಕುಮಾರಸ್ವಾಮಿ ಕೂಡಾ ಮಾಡುತ್ತಿದ್ದಾರೆ. ತನ್ನ ಲೋಕಸಭಾ ಕ್ಷೇತ್ರದ ಪರಿಧಿಯಲ್ಲಿ ಬರುವ ಈ ಕ್ಷೇತ್ರದಲ್ಲಿ ದಳದ ಅಭ್ಯರ್ಥಿಯನ್ನು ಗೆಲ್ಲಿಸಿ, ತನ್ನ ಶಕ್ತಿಯನ್ನು ಪ್ರದರ್ಶಿಸುವ ಉತ್ಸಾಹದಲ್ಲಿದ್ದಾರೆ ಕುಮಾರಸ್ವಾಮಿ. ಹೀಗಾಗಿ ಈ ಸ್ಥಾನವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ ಪಕ್ಷ ಇಲ್ಲಿ ಬಿಜೆಪಿ ಮತ್ತು ದಳದ ಪ್ರಬಲ ಅಭ್ಯರ್ಥಿಗಳನ್ನು ಎದುರಿಸಬೇಕಾಗಿದೆ. ಈ ಕ್ಷೇತ್ರದಿಂದ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಅವರನ್ನು ಅಭ್ಯರ್ಥಿಯಾಗಿಸುವ ಮಾತು ಕೇಳಿಬರುತ್ತಿದೆ. ಅವರ ಹೆಸರು ಇತ್ತೀಚೆಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೆ ಕೂಡಾ ಕೇಳಿಬಂದಿತ್ತು.



ಮಗನತ್ತ 'ಚಿತ್ತ'ಪುರ

ಸೋಲರಿಯದ ನಾಯಕ ಮಲ್ಲಿಕಾರ್ಜುನ ಖರ್ಗೆಯವರ ಸುಪುತ್ರ ಎಂಬುದೇ ಪ್ರಿಯಾಂಕಾ ಖರ್ಗೆ ಪಾಲಿಗೆ ಬಹುದೊಡ್ಡ ಪ್ಲಸ್ ಪಾಯಿಂಟ್. ಅಷ್ಟೇ ಅಲ್ಲ, ಸದ್ಯಕ್ಕೆ ಖರ್ಗೆ ಸಾಹೇಬರು ಲೋಕಸಭೆಗೆ ಆಯ್ಕೆಯಾಗಿ ಮಂತ್ರಿ ಸ್ಥಾನವನ್ನು ಅಲಂಕರಿಸಿರುವುದರಿಂದ ಕ್ಷೇತ್ರದ ಮತದಾರರೆಲ್ಲ ಹ್ಯಾಪಿಯಾಗಿದ್ದಾರೆ. ಹೀಗಾಗಿ ಪ್ರಿಯಾಂಕಾ ಖರ್ಗೆಗೆ ಅಪ್ಪನ ವರ್ಚಸ್ಸು, ಪ್ರಭಾವ ಮತ್ತು ಸ್ಥಾನಮಾನವೇ ಶ್ರೀರಕ್ಷೆಯಾಗಲಿದೆ.

ತನ್ನ ಮಗ ಚಿತ್ತಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಬರುವತ್ತ ಚಿತ್ತ ಹರಿಸಿರುವ ಖರ್ಗೆ ಈಗಾಗಲೇ ತಮ್ಮ ಹಿಂಬಾಲಕರ ಜೊತೆಗೆ ಎರಡು ಮೂರು ಸುತ್ತಿನ ರಹಸ್ಯ ಮಾತುಕತೆಗಳನ್ನು ಮುಗಿಸಿದ್ದಾರೆ. ಈ ಕ್ಷೇತ್ರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಲಿಂಗಾಯತ ಮತದಾರರೂ ಇರುವುದೊಂದೇ ಸದ್ಯಕ್ಕೆ ಖರ್ಗೆಯನ್ನು ಕಾಡುತ್ತಿರುವ ಅಂಶವಾಗಿದೆ. ಹೀಗಾಗಿ ಗೋವಿಂದರಾಜನಗರ ಕ್ಷೇತ್ರದಲ್ಲಿ ಖರ್ಗೆಯವರು ಸೋಮಣ್ಣನ ವಿರುದ್ಧ ಪ್ರಚಾರ ಮಾಡುವ ದುಸ್ಸಾಹಸಕ್ಕೆ ಕೈ ಹಾಕದೇ ಮ್ಯಾಚ್ ಫಿಕ್ಸಿಂಗ್ ಮಾಡಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಏನೇ ಆದರೂ ಪ್ರಿಯಾಂಕಾ ಖರ್ಗೆ ಕಾಂಗ್ರೆಸ್ ಪಾಲಿಗೆ ಚಿತ್ತಾಪುರದ ಅತ್ಯಂತ ಸೇಫ್ ಬೆಟ್.

ಇನ್ನೊಂದೆಡೆ ಮಲ್ಲಿಕಾರ್ಜುನ ಖರ್ಗೆ ಪ್ರತಿನಿಧಿಸಿದ ಚಿತ್ತಾಪುರ ಕ್ಷೇತ್ರದಲ್ಲಿ ಅವರ ಮಗ ಪ್ರಿಯಾಂಕಾ ಖರ್ಗೆಗೆ ಟಿಕೆಟು ದೊರೆಯುವುದು ಬಹುತೇಕ ಖಚಿತವಾಗಿದೆ. ಖರ್ಗೆಯವರು ಕೇಂದ್ರ ಸರ್ಕಾರದ ಮಂತ್ರಿಯಾಗಿರುವುದರಿಂದ ತನ್ನ ಪುತ್ರನನ್ನು ಗೆಲ್ಲಿಸಲು ಸಕಲ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ.

ಯಡ್ಡಿ ಈಸ್ ಕಿಂಗ್?

ಹೀಗಾಗಿ ಕೊಳ್ಳೇಗಾಲದಲ್ಲಿ ಸಿದ್ದರಾಮಯ್ಯನವರ ಪ್ರತಿಷ್ಠೆ ಚನ್ನಪಟ್ಟಣದಲ್ಲಿ ಡಿಕೆಶಿಯ ವರ್ಚಸ್ಸು ಮತ್ತು ಚಿತ್ತಾಪುರದಲ್ಲಿ ಖರ್ಗೆಯ ಕರಾಮತ್ತು ಕೆಲಸ ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ. ಕಳೆದ ಬಾರಿ ಎಂಟು ಅಸೆಂಬ್ಲಿ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಆದ ಮುಖಭಂಗ ಈ ಬಾರಿ ರಿಪೀಟ್ ಆಗದಂತೆ ಕಾಂಗ್ರೆಸ್ ನಾಯಕರು ಮುನ್ನೆಚ್ಚರಿಕೆ ವಹಿಸಿಕೊಂಡಿದ್ದಾರೆ. ಐದರಲ್ಲಿ ಕನಿಷ್ಠ ಮೂರು ಕ್ಷೇತ್ರಗಳಲ್ಲಿ ಮತ್ತೆ ಜಯಭೇರಿ ಬಾರಿಸುವ ಆತ್ಮವಿಶ್ವಾಸವನ್ನು ಕಾಂಗ್ರೆಸ್ ನಾಯಕರು ಹೊಂದಿದ್ದಾರೆ. ಹೀಗಾಗಿ ಗೋವಿಂದರಾಜ ನಗರದ ಫಲಿತಾಂಶ ತಮ್ಮ ಪರವಾಗಿ ಬಂದರೆ ಕಾಂಗ್ರೆಸ್ ನಾಯಕರ ಪಾಲಿಗೆ ಅದೊಂದು ಬೋನಸ್ ಆಗುತ್ತದೆ. ಸದ್ಯಕ್ಕೆ ಬಜೆಪಿ ನಾಯಕರು ಕೂಡಾ ಗೋವಿಂದರಾಜ ನಗರದಿಂದ ಸೋಮಣ್ಣನನ್ನು ಗೆಲ್ಲಿಸುವತ್ತ ಮಾತ್ರ ಗಮನಹರಿಸುತ್ತಿದ್ದಾರೆ.

ಈ ಚುನಾವಣೆ ಕುಮಾರಸ್ವಾಮಿ ಪಾಲಿಗೆ ದಿಲ್‌ಖುಷ್, ಸಿದ್ದಣ್ಣನ ಪಾಲಿಗೆ ಕಬೀ ಖುಷ್ ಕಬೀ ಗಮ್ ಆಗಿದೆ. ಯಡ್ಡಿ ಮಾತ್ರ ಯಡ್ಡಿ ಇಸ್ ಕಿಂಗ್ ಎಂದು ಬೀಗುವ ಸಂಭ್ರಮದಲ್ಲಿದ್ದಾರೆ.

● ಸದಾಶಿವ ಶೆಣೈ

ರಾಮನಗರ: 'ತ್ಯಾಗರಾಜ' ಯಾರು?




ಕುಮಾರಸ್ವಾಮಿ ತೆರವು ಮಾಡಿದ ಪ್ರತಿಷ್ಠೆಯ ರಾಮನಗರ ಕ್ಷೇತ್ರದಲ್ಲಿ ಅವರ ಉತ್ತರಾಧಿಕಾರಿಯಾಗಿ ಯಾರು ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂಬ ಕುತೂಹಲ ರಾಜಕೀಯ ವಲಯದಲ್ಲಿ ಆರಂಭವಾಗಿದೆ.

ಈ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಗೆಲ್ಲುವ ಬಗ್ಗೆ ಸಂಶಯವೇ ಇಲ್ಲ, ಆದರೆ ಯಾರನ್ನು ಅಭ್ಯರ್ಥಿ ಮಾಡಬೇಕು ಎಂಬ ಬಗ್ಗೆ ಕುಮಾರಸ್ವಾಮಿಯವರು ಸಿಕ್ಕಾಪಟ್ಟೆ ತಲೆಕೆಡಿಸಿಕೊಂಡು ಕುಳಿತುಕೊಂಡಿದ್ದಾರೆ. ಈ ಮಧ್ಯೆ ಈಗಾಗಲೇ ಜೆಡಿಎಸ್ ನಾಯಕ ರೇವಣ್ಣನವರ ಪತ್ನಿ ಭವಾನಿ ಈ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ. ಗೌಡರ ಕುಟುಂಬವನ್ನು ಅತ್ಯಂತ ಹತ್ತಿರದಿಂದ ಬಲ್ಲವರಿಗೆ ಆ ಕುಟುಂಬದ ರಾಜಕೀಯ ಚೆನ್ನಾಗಿ ಗೊತ್ತು, ಅನಿತಾ ಕುಮಾರಸ್ವಾಮಿ ಶಾಸಕಿಯಾಗಿ ಆಯ್ಕೆಯಾದ ನಂತರ ಗೌಡರ ಕುಟುಂಬದಲ್ಲಿ ಯಾವುದು ಸರಿಯಾಗಿ ನಡೆಯುತ್ತಿಲ್ಲ, ವಾಸ್ತವವಾಗಿ ದೇವೇಗೌಡರಿಗೂ ಅನಿತಾ ಕುಮಾರಸ್ವಾಮಿ ರಾಜಕೀಯಕ್ಕೆ ಧುಮುಕುವುದು ಇಷ್ಟವಿರಲಿಲ್ಲ, ಪಿತೃವಾಕ್ಯವನ್ನು ಎರಡನೇ ಬಾರಿಗೆ ಧಿಕ್ಕರಿಸಿದ ಕುಮಾರಸ್ವಾಮಿ ಮಧುಗಿರಿ ಕ್ಷೇತ್ರದಿಂದ ತನ್ನ ಪತ್ನಿಯನ್ನು ಗೆಲ್ಲಿಸಿ ತಮ್ಮ ರಾಜಕೀಯ ತಂತ್ರಗಾರಿಕೆಯನ್ನು ಮೆರೆದಿದ್ದರು.

ಹೀಗಾಗಿ ಸಹಜವಾಗಿಯೇ ಈಗ ರೇವಣ್ಣನವರ ಪತ್ನಿ ಭವಾನಿಯವರ ಹೆಸರು ಕೇಳಿಬರುತ್ತಿದೆ. ಆದರೆ ರಾಮನಗರ ಕುಮಾರಸ್ವಾಮಿಯ ರಾಜಕೀಯದ ಕರ್ಮಭೂಮಿ. ಯಾವುದೇ ಸಂದರ್ಭದಲ್ಲಿ ಮತ್ತೆ ರಾಜ್ಯ ರಾಜಕೀಯಕ್ಕೆ ಮರಳಬೇಕಾದಲ್ಲಿ ಆ ಸ್ಥಾನವನ್ನು ತನಗಾಗಿ ತ್ಯಾಗ ಮಾಡಬಲ್ಲ ಒಬ್ಬ ತ್ಯಾಗರಾಜನನ್ನು ಕುಮಾರಸ್ವಾಮಿ ಹುಡುಕುತ್ತಿರುವುದರಿಂದ ಇಲ್ಲಿಂದ ಭವಾನಿ ಸ್ಪರ್ಧಿಸುವ ಸಾಧ್ಯತೆಗಳು ಕಡಿಮೆ. ಈ ಕಾರಣಕ್ಕಾಗಿ ಕುಮಾರಸ್ವಾಮಿಯ ರೈಟ್ ಹ್ಯಾಂಡ್ ಮತ್ತು ಲೆಫ್ಟ್ ಹ್ಯಾಂಡ್ ಎನಿಸಿರುವ ರಾಜು ಮತ್ತು ಕೃಷ್ಣ ಎಂಬ ಲೋಕಲ್ ಮುಖಂಡರ ಹೆಸರುಗಳು ಈ ಕ್ಷೇತ್ರಕ್ಕೆ ಕೇಳಿಬರುತ್ತಿದೆ. ಅಂತಿಮವಾಗಿ ಈ ಕ್ಷೇತ್ರದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಪರಮಾಧಿಕಾರ ಕುಮಾರಸ್ವಾಮಿಯದ್ದೇ ಆಗಿದೆ. ಕುಟುಂಬದ ಒಳಜಗಳದ ಒಳಹರಿವನ್ನು ಅರಿತವರ ಪ್ರಕಾರ ಭವಾನಿಯವರಿಗೆ ಸ್ಥಾನ ಬಿಟ್ಟುಕೊಡುವ ಬದಲು ತನ್ನ ಸಹೋದರಿಯರಿಗೆ ಸ್ಥಾನ ಬಿಡಲು ಕುಮಾರಣ್ಣ ಒಲವು ವ್ಯಕ್ತಪಡಿಸಿದ್ದಾರೆ. ಹೀಗಾಗಿ ರಾಮನಗರದ ಮಟ್ಟಿಗೆ ಅಭ್ಯರ್ಥಿ ಯಾರು ಎಂಬುದಷ್ಟೇ ಸದ್ಯಕ್ಕಿರುವ ಕುತೂಹಲವೇ ವಿನಃ ಫಲಿತಾಂಶದ ಬಗ್ಗೆ ಯಾವುದೇ ಕುತೂಹಲ ಇಲ್ಲ. ●

ಸಿ.ಟಿ. ರವಿ ರಕ್ಷಣೆಯಲ್ಲಿ ಕಳ್ಳ ಸಿಇಓ ಶಿವೇಗೌಡ



ಇದು ಪಕ್ಕಾ ಕಳ್ಳನ ದಗಲ್ಬಾಜಿ ಕತೆ. ಫೌಂಡೇಷನ್ ಹಾಕದೇ ಗೋಡೆ ಎಬ್ಬಿಸಬಲ್ಲ, ಇಲ್ಲದ ಸಮುದಾಯಭವನಕ್ಕೆ ಕಾಂಪೌಂಡ್ ಕಟ್ಟಬಲ್ಲ, ಶೌಚಾಲಯವನ್ನೂ ಬಿಡದೇ ದೋಚಬಲ್ಲ ಇಂತಹ ಕಳ್ಳನ ಹೆಸರು ಶಿವೇಗೌಡ. ಚಿಕ್ಕಮಗಳೂರು ತಾಲ್ಲೂಕು ಪಂಚಾಯತಿಗೆ ಇವನೇ ಸಿಇಓ. ಸದ್ಯಕ್ಕೆ ಜಿಲ್ಲಾ ಪಂಚಾಯತಿಗೆ ನಾಲ್ಕು ನಕಲಿ ಬಿಲ್‌ಗಳನ್ನು ಸಲ್ಲಿಸಿ ಸಿಕ್ಕಿಬಿದ್ದಿದ್ದಾನೆ. ಜಿ.ಪಂ. ಸಿಇಓ ಕಾರಣ ಕೇಳಿ ನೋಟಿಸ್ ನೀಡಿದಾಗ, ಚಿಕ್ಕಮಗಳೂರಿನ ಚೆಡ್ಡಿ ಶಾಸಕ ಸಿ.ಟಿ. ರವಿ ನೋಟಿಸ್ ವಾಪಸ್ ತಗೊಳ್ಳಿ ಅಂತಾ ಜಿಲ್ಲಾಡಳಿತದ ಮೇಲೆ ಒತ್ತಡ ಹೇರಿದ್ದ.

ಗೊತ್ತಾಯಿತಲ್ಲ ಕಳ್ಳ ಶಿವೇಗೌಡನ ಗಾಡ್‌ಫಾದರ್ ಯಾರು ಎಂದು.....

ಶೌಚಾಲಯಕ್ಕೂ ಬಾಯಿ

ಹಿರೇಗೌಜ ಗ್ರಾ.ಪಂ. ವ್ಯಾಪ್ತಿಯಲ್ಲಿ 2008-09 ರ ಸಾಲಿನಲ್ಲಿ 49 ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರಿಗೆ ಶೌಚಾಲಯ ನಿರ್ಮಿಸಿ ಕೊಡಲು ನಿರ್ಧರಿಸಲಾಗಿತ್ತು. "ಏ, ಪಾಯಿಖಾನೆ ತಗೊಂಡು ಅವರೇನು ಮಾಡ್ತಾರೆ" ಎಂದು ತನ್ನ ಶಿಷ್ಯಪಡೆಗೆ ಕಣ್ಣು ಹೊಡೆದ ಸಿಇಓ ಶಿವೇಗೌಡ. ಸಿಗ್ನಲ್ ಸಿಕ್ಕಿದ್ದೇ ತಡ ಗ್ರಾ.ಪಂ. ಕಾರ್ಯದರ್ಶಿ ಸೋಮಶೇಖರ ಮತ್ತು ಬಿಲ್ ಕಲೆಕ್ಟರ್ ಶಾಂತಕುಮಾರ ದಿಢೀರ್ ಕಾರ್ಯಾಚರಣೆಗಿಳಿದರು; ಶೌಚಾಲಯ ಕಟ್ಟಲಲ್ಲ, ಶೌಚ ಸ್ವಾಹಾ ಮಾಡಲು! ಮಾರ್ಚ್ 31, 2009 ರಂದು 49 ಫಲಾನುಭವಿಗಳ ಸಹಿಗಳನ್ನು ಫೋರ್ಜರಿ ಮಾಡಿ ಎಲ್ಲ ದುಡ್ಡನ್ನು ನುಂಗಿ ಹಾಕಿದರು. ರೈತಸಂಘ ಈ ವಂಚನೆಯನ್ನು ಬಯಲಿಗೆಳೆದ ಕೂಡಲೇ ಜಾಗೃತನಾದ ಶಿವೇಗೌಡ ತನಿಖಾ ನಾಟಕ ಶುರುವಿಟ್ಟ. ಕಾಂತರಾಜು ಎಂಬಾತನನ್ನು ತನಿಖೆಗೆ ನೇಮಿಸಿದ. ಸಿಕ್ಕಷ್ಟು ಸಿಗಲಿ ಎಂದು ಒಂದಿಷ್ಟು ಎಂಜಲು ತಿಂದ ಕಾಂತರಾಜು, ಕೆಲ ಫಲಾನುಭವಿಗಳಿಂದ 'ಹಣ ಮುಟ್ಟಿದೆ' ಎಂದು ಚೀಟಿ ಬರೆಸಿಕೊಂಡು 'ಎವರಿಥಿಂಗ್ ಇಸ್ ಫೈನ್' ಎಂದು ತನ್ನ ಇನ್‌ವೆಸ್ಟಿಗೇಷನ್‌ಗೆ ಫುಲ್‌ಸ್ಟಾಪ್ ಹಾಕಿದ. ಜನರ ಒತ್ತಡಕ್ಕೆ ಮಣಿದ ಗ್ರಾ.ಪಂ. ಅಧ್ಯಕ್ಷೆ ನಾಗಮ್ಮ ಸರಿಯಾಗಿ ವಿಚಾರಣೆ ಮಾಡಿ ಎಂದು ಸಿಇಓಗೆ ದೂರು ನೀಡಿದರು. ಶಾಸಕನ ಬೆಂಬಲವಿರುವ ಸಿಇಓ ಶಿವೇಗೌಡನಿಗೆ ಜನಪ್ರತಿನಿಧಿಗಳು ಯಾವ ಲೆಕ್ಕ? ದೂರು ನೀಡಿದ ಅಧ್ಯಕ್ಷೆಯನ್ನೇ ಈ ದುಷ್ಟ ಬೆದರಿಸಿದ. "ನಿಮ್ಮನ್ನೂ ಈ ಅವ್ಯವಹಾರದೊಳಗೆ ಸೇರಿಸಿಬಿಡ್ತೀನಿ ನೋಡಿ. ನಿಮ್ಮ ಮೇಲೆ ಕಾನೂನುಕ್ರಮ ತೆಗೆದುಕೊಳ್ಳಬೇಕಾಗುತ್ತೆ" ಎಂದು ಸರ್ವಾಧಿಕಾರಿಯಂತೆ ಹಾರಾಡಿದ. ಅಲ್ಲೇ ಇದ್ದ ರೈತಸಂಘದ ಕಾರ್ಯಕರ್ತರು ಹಿಗ್ಗಾಮುಗ್ಗಾ ಬೈದಿದ್ದರಿಂದ ತಲೆತಗ್ಗಿಸಿ ಕುಳಿತ. ಸದ್ಯ ಇತರ ನಾಲ್ಕು ಕೇಸುಗಳಲ್ಲಿ ಇವನಿಗೆ ನೋಟಿಸ್ ನೀಡಿರುವ ಜಿ.ಪಂ. ಸಿಇಓರವರು ಈ ಶೌಚಾಲಯ ದರೋಡೆಯತ್ತಲೂ ಒಂದು ಕಣ್ಣು ಹಾಯಿಸಬೇಕಿದೆ.

'ಬಿಲ್' ಕುಲ್ ಸುಳ್ಳ

ಬೋಗಸ್ ಬಿಲ್ ಸೃಷ್ಟಿಸುವಲ್ಲಿ ಭಾರೀ ಪ್ರಾವೀಣ್ಯತೆ ಹೊಂದಿದ್ದಾನೆ ಶಿವೇಗೌಡ. ಈ ರೀತಿ ಆತ ಸೃಷ್ಟಿಸಿದ ನಾಲ್ಕು ಬಿಲ್‌ಗಳನ್ನು ನೋಡಿ ಜಿ.ಪಂ. ಅಧಿಕಾರಿಗಳೇ ಹೌಹಾರಿಬಿಟ್ಟು, ಪಟ್ಟಂತ ನೋಟಿಸ್ ಜಾರಿ ಮಾಡಿಬಿಟ್ಟರು.

'ಹರಿಹರದಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಆರದವಳ್ಳಿ ಆಂಜನೇಯ ಗುಡಿಯ ಸಮೀಪವಿರುವ ಸಮುದಾಯ ಭವನಕ್ಕೆ 30 ಸಾವಿರ ವೆಚ್ಚದಲ್ಲಿ ಕಾಂಪೌಂಡ್ ಕಟ್ಟಸಲಾಗಿದೆ' ಎಂದು ಶಿವೇಗೌಡ ಜಿ.ಪಂ.ಗೆ 'ಬಿಲ್ಲು' ಹೊಡೆದ. ಹಕೀಕತ್ತು ಏನೆಂದರೆ ಆ ಜಾಗದಲ್ಲಿ ಸಮುದಾಯ ಭವನವೇ ಇಲ್ಲ, ಇನ್ನು ಇವನ ಕಾಂಪೌಂಡ್ ಎಲ್ಲಿ ಬರಬೇಕು?

ಹುಯಿಗೆರೆ ಗ್ರಾ.ಪಂ. ವ್ಯಾಪ್ತಿಯ ಬಿಕ್ಕರಣೆ ಗ್ರಾಮದ ಹರಿಜನ ಕಾಲನಿಯಲ್ಲಿ 40 ಸಾವಿರ ವೆಚ್ಚದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಕಟ್ಟಿದ; ನೆಲದ ಮೇಲಲ್ಲ ಹಾಳೆಯ ಮೇಲೆ! ಬಿಲ್ ಜೊತೆಗೆ ಫೋಟೋ ಲಗತ್ತಿಸಬೇಕಲ್ಲ? ಹಳೇ ಕಟ್ಟಡದ ಫೋಟೋ ಅಂಟಿಸಿ ಗೋಲ್‌ಮಾಲ್ ಮಾಡಲು ನೋಡಿದ. ಪಾಪ, ಬಿಲ್ ಚತುರನಿಗೆ ಅದೇ ತಿರುಗುಬಾಣವಾಯ್ತು.

ಸತ್ತಿಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಪಾಳ್ಯ ಗ್ರಾಮದಲ್ಲಿ ಅಂಗನವಾಡಿ ಕಟ್ಟಡಕ್ಕೆಂದು 50 ಸಾವಿರ ಮಂಜೂರಾಗಿತ್ತು. 'ಗೋಡೆ ಹಂತದವರೆಗೆ ವರ್ಕ್ ಫಿನಿಷ್' ಎಂದು ಬಿಲ್ ಹಿಡಿದು ದಾಳಿ ಮಾಡಿದ. ಆದರೆ ಇಲ್ಲಿವರೆಗೆ ತಳಪಾಯ ಕಟ್ಟಿದ ಬಿಲ್ ಅನ್ನೇ ಸಲ್ಲಿಸಿಲ್ಲ! ಅಂದರೆ ಈ ಮಹಾಶಯ ಕಟ್ಟಡ ನಿರ್ಮಾಣದ ಕೆಲಸವನ್ನು ಪೀಸ್ ಪೀಸ್ ಮಾಡಿ, ಸಿಕ್ಕವರಿಗೆಲ್ಲ ಪೀಸ್‌ವರ್ಕ್ ನೀಡಿ, ಬಿಲ್ ಪಾಸ್ ಮಾಡಿಕೊಳ್ಳಲು ಯತ್ನಿಸಿದ್ದ.


12 ನೇ ಹಣಕಾಸು ಯೋಜನೆಯಲ್ಲಿ ಮೂಗ್ತಿಹಳ್ಳಿ ಗ್ರಾಮದ ಸರ್ಕಾರಿ ಹೈಸ್ಕೂಲ್‌ಗೆ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆಂದು 75 ಸಾವಿರ ಬಿಡುಗಡೆಯಾಯ್ತು. ಇಲ್ಲೂ ಕೊಠಡಿ ಕಟ್ಟಿಸದ ಶಿವೇಗೌಡ ಮತ್ತದೇ ಹಳೇ ಶಾಲೆಯ ಫೋಟೋ ಪೇಸ್ಟ್ ಮಾಡಿ ಬಿಲ್ ಸಲ್ಲಿಸಿದ. ತಾನೇನೋ ಭಾರಿ ಪ್ರಾಮಾಣಿಕ ಅಂತ ತೋರಿಸಲು 74,900 ರೂ. ಬಿಲ್ ಹಾಕಿದ್ದಾನೆ ಈ ಚೋರ.

ಈ ಹಿಂದೆ ಹಾಸನ ತಾಲ್ಲೂಕಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ (BEO) ಆಗಿದ್ದಾಗ ಹರಳಹಳ್ಳಿಯ ಕುವೆಂಪು ಮಾದರಿ ಶಾಲೆಯ ಪಾಠೋಪಕರಣ, ಪೀಠೋಪಕರಣಗಳ ಖರೀದಿಯಲ್ಲಿ, ಸಿವಿಲ್ ಕಾಮಗಾರಿಯಲ್ಲಿ 24 ಲಕ್ಷದ ಲಫಡಾ ಮಾಡಿ ಕೆಲಕಾಲ ಸಸ್ಪೆಂಡಾಗಿದ್ದ. ಇಂತಹ ದರೋಡೆಕೋರನನ್ನು ಚಿಕ್ಕಮಗಳೂರಿಗೆ ತಂದು ದೋಚಲು ಬಿಟ್ಟವನು ಚೋರಗುರು ಸಿ.ಟಿ. ರವಿ.

ಸದ್ಯ ಸಿ.ಟಿ. ರವಿಯ ಒತ್ತಡಗಳಿಗೆ ಮಣಿಯದೇ, ಶಿವೇಗೌಡನಿಗೆ ಪಾಠ ಕಲಿಸುವ ಜವಾಬ್ದಾರಿ ಜಿಲ್ಲಾ ಪಂಚಾಯ್ತಿಯ ಸಿಇಓ ಮೇಲಿದೆ.


● ವರದಿಗಾರ

ಜಿ.ಎನ್. ಮೋಹನ್: ಖಾಕಿ ಚೆಡ್ಡಿಗೆ ಕೆಂಪು ಉಡುದಾರ!



ಜಿ.ಎನ್. ಮೋಹನ್‌ರವರು ಆದಷ್ಟು ಬೇಗ ತಮ್ಮ ಚೆಡ್ಡಿಗೆ ಬಿಗಿದುಕೊಂಡಿರುವ ಕೆಂಪು ಉಡುದಾರವನ್ನು ಕಳಚಿ ಹಾಕಿದರೆ ಪತ್ರಿಕಾ ಓದುಗರಿಗೆ, ಸಾಹಿತ್ಯದ ಓದುಗರಿಗೆ ಒಂದಿಷ್ಟು ಗೊಂದಲಗಳಾದರೂ ಬಗೆಹರಿಯುತ್ತವೆ.

ಎಡಪಂಥೀಯ ಚಳವಳಿಯೊಂದಿಗೆ ಗುರುತಿಸಿಕೊಂಡ, ಸಾಹಿತ್ಯದ ಮೂಲಕ ಒಳ್ಳೆ ಬರಹಗಾರರೆನಿಸಿಕೊಂಡ ಜಿ.ಎನ್. ಮೋಹನ್ 'ವಿಜಯಕರ್ನಾಟಕ' ಎಂಬ ಕೊಟ್ಟಿಯಲ್ಲಿ ನಿಂತು ಮಾಧ್ಯಮಗಳ ವಿಶ್ಲೇಷಣೆ ಆರಂಭಿಸಿದ್ದಾರೆ.



ಅವರ 'ಮೀಡಿಯಾ ಮಿರ್ಚಿ' ಎಂಬ ಅಂಕಣದ ಮೊದಲ 'ಪ್ರಯೋಗ'ದಲ್ಲೇ ಅವರು 'ಪ್ರಜಾವಾಣಿ'ಯ ವಿರುದ್ಧ ಎರಗಿದ್ದಾರೆ. 'ವಿಜಯಕರ್ನಾಟಕ' ಎಂಬ ಬ್ರಾಹ್ಮಣ್ಯದ ಪಾಂಪ್ಲೆಟ್‌ನಲ್ಲಿ ಹೀಗೆ 'ಪ್ರಜಾವಾಣಿ' ಬಗ್ಗೆ ಪ್ರಶ್ನೆ ಎತ್ತಿರುವುದಂತೂ ತೀರಾ **unethical.**

ರ್‍ಯಾಲಿ, ಮೆರವಣಿಗೆಗಳು ಬೆಂಗಳೂರಲ್ಲಿ ನಡೆದಾಗ ಉಂಟಾಗುವ ಟ್ರಾಫಿಕ್ ಜಾಮ್ 'ಪ್ರಜಾವಾಣಿ'ಯ ಉಸ್ತುವಾರಿ ಸಂಪಾದಕರಿಗೆ ಕಿರಿಕಿರಿ ಅಂತೆ. ರ್‍ಯಾಲಿ ಮಾಡಿದ ಜನರ ಸಮಸ್ಯೆಗಳ ಬಗ್ಗೆ 'ಪ್ರಜಾವಾಣಿ' ಬರೆಯುವುದಿಲ್ಲವಂತೆ...

ಅಲ್ಲ ಕಾಮ್ರೇಡ್ ಮೋಹನ್‌ರವರೇ ರ್‍ಯಾಲಿಗಳ ಕುರಿತು ಇಂತಹ ಅಭಿಪ್ರಾಯವನ್ನು ಹದಗೊಳಿಸಿದ್ದು ನೀವೀಗ ಬರೆಯುತ್ತಿರುವ ಟೈಮ್ಸ್ ಬಳಗವೇ ಅಲ್ಲವೇ? ಹಾಗಾದರೆ ವಿಶ್ವೇಶ್ವರ ಭಟ್ಟ, ರಂಗನಾಥ ಭಟ್ಟರು ರೈತರ, ಅಂಗನವಾಡಿ ಕಾರ್ಯಕರ್ತೆಯರ, ದಲಿತರ ರ್‍ಯಾಲಿಗಳಾದಾಗ ಅವರ ಸಮಸ್ಯೆಗಳ ಕುರಿತು ಬರೆಯುತ್ತಲೇ ಬಂದಿದ್ದಾರಾ? ಇಲ್ಲ ಇಲ್ಲ ಸತ್ತರೂ ಅವರು ಬರೆಯೋದೇ ಇಲ್ಲ.

ಟ್ರಾಫಿಕ್ ಜಾಮ್‌ನಿಂದ ಆಸ್ಪತ್ರೆಗೆ ಹೊರಟಿದ್ದ ರೋಗಿಗಳಿಗೆ, ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿಗಳಿಗೆ ತೊಂದರೆ ಆಯ್ತು ಎಂಬುದನ್ನು ಚಿತ್ರಸಮೇತ ಹೈಲೈಟ್ ಮಾಡಿ ಸೇಫ್‌ಜೋನ್‌ನಲ್ಲಿರುವ ನಗರವಾಸಿ ಶ್ರೀಮಂತರು, ಮೇಲ್‌ಮಧ್ಯಮವರ್ಗದವರಲ್ಲಿ ರ್‍ಯಾಲಿಗಳ ಕುರಿತು ಆಕ್ರೋಶ ಉಕ್ಕುವಂತೆ ಬಿಂಬಿಸುವುದು ಇವೇ ಪತ್ರಿಕೆಗಳು ಎಂಬುದು ಎಲ್ಲರಿಗೂ ಗೊತ್ತೇ ಇದೆ. ಅಂತಾದ್ದರಲ್ಲಿ ಇದ್ದುದರಲ್ಲಿ ಈ ನಾಡಿನ ಬಹುಜನರ ಆಶಯಗಳನ್ನು ಎತ್ತಿ ಹಿಡಿಯುವ 'ಪ್ರಜಾವಾಣಿ'ಯನ್ನು ಮೋಹನ್ ಟೀಕಿಸಿರುವುದನ್ನು ನೋಡಿದರೆ, ಅವರೆದೆಯೊಳಗಿನ ಕ್ಯೂಬಾ ಹಾಡು ಮಾಯವಾದಂತಿದೆ. ಅಲ್ಲಿ ಮೆಲ್ಲ ಮೆಲ್ಲಗೆ ನಮಸ್ತೆ ಸದಾ ವತ್ಸಲೇ ಗುನುಗುನಿಸುತ್ತಿರುವಂತೆ ಕಾಣುತ್ತಿದೆ.

ಅಷ್ಟಕ್ಕೂ ಈ ರಾಜ್ಯದ ಮಾಧ್ಯಮಗಳ ವಿಶ್ಲೇಷಣೆ ಶುರುಮಾಡಬೇಕೆಂದರೆ, ಮೊದಲು ಕಟಕಟೆಗೆ ಏರಬೇಕಾಗಿದ್ದು 'ವಿಜಯಕರ್ನಾಟಕ'ವೇ. ಅದರ ರಾಜಕೀಯ ಧೋರಣೆಗಳು, ಹಿಂದುತ್ವದ ಹಿಡನ್ ಅಜೆಂಡಾ, ಪ್ರಗತಿಪರರ ವಿರುದ್ಧದ ಮಸಲತ್ತುಗಳನ್ನು ಚರ್ಚಿಸಿಯೇ ಮುಂದೆ ಹೋಗಬೇಕಾಗುತ್ತದೆ. ಆದರೆ ಪಾಪ, 'ಎಲ್ಲವೂ ಬದಲಾಗುತ್ತಿದೆ' ಎಂದು ಮತ್ತೆ ಮತ್ತೆ ಬರೆದುಕೊಂಡಿರುವ ಜಿ.ಎನ್.ಮೋಹನ್ ತಾವೇ ಬದಲಾಗುತ್ತಿರುವುದನ್ನು ಮರೆಮಾಚಲು ಯತ್ನಿಸುತ್ತಾರೆ. ಸೋನಿಯಾ ಜಾಹೀರಾತಿಗೆ ಡಿಎನ್‌ಎ ಮುಖಪುಟದಲ್ಲಿ ಮಾಡಿದ ಟ್ರಿಕ್ ಅನ್ನು ಟೀಕಿಸುವ ಮೋಹನ್‌ಗೆ ಟೈಮ್ಸ್ ಆಫ್ ಇಂಡಿಯಾ ಹಲವಾರು ಸಲ ಇಡೀ ಮುಖಪುಟವನ್ನೇ ಜಾಹೀರಾತುದಾರರಿಗೆ ಮಾರಿಕೊಂಡಿದ್ದು 'ವಿಜಯಕರ್ನಾಟಕ' ಶಾಂಪೂ ಜಾಹೀರಾತಿಗಾಗಿ ಮುಖಪುಟದ ಮಧ್ಯದಲ್ಲಿ ಜಡೆ ಇಳಿಬಿಟ್ಟಿದ್ದು ಮಾತ್ರ ನೆನಪಾಗುವುದಿಲ್ಲ.

ಕಮ್ಯೂನಿಸ್ಟ್ ಪಕ್ಷದ ಕಾರ್ಡ್ ಹೋಲ್ಡರ್ ಆಗಿರುವ ಜಿ.ಎನ್.ಮೋಹನ್ ತಮ್ಮ ಅಣ್ಣ ಕಮ್ಯೂನಿಸ್ಟ್ ನಾಯಕ ಜಿ.ಎನ್. ನಾಗರಾಜರ ದೆಸೆಯಿಂದಲೋ ಏನೋ ಪಾರ್ಟಿಯಿಂದ ಕ್ಯೂಬಾಕ್ಕೆ ಹೋಗಿಬಂದರು. ಆ ಕುರಿತು ಒಂದು ಅತ್ಯುತ್ತಮ ಒಳನೋಟಗಳ 'ನನ್ನೊಳಗಿನ ಕ್ಯೂಬಾ ಹಾಡು' ಎಂಬ ಪುಸ್ತಕವನ್ನು ಬರೆದರು. ಡಂಕೆಲ್ ಪ್ರಸ್ತಾವನೆಯ ಕುರಿತು ಅವರು ಬರೆದ ಕೈಪಿಡಿಯೂ ಜನಪರ ಧೋರಣೆಯದೇ.

ಆದರೆ ಮುಂದೆ ಅವರು 'ಈಟಿವಿ' 'ಅವಧಿ'ಗೆ ತಲುಪುವ ವೇಳೆಗೆ ವ್ಯವಸ್ಥೆಯೊಂದಿಗೆ ರಾಜಿ ಆಗತೊಡಗಿದರು. ಅಕ್ಷರ ಸಂಚಲನೆ ಮಾಡಬೇಕಿದ್ದ ಅವರ ಮೇಫ್ಲರ್ ಮೀಡಿಯಾ ಹೌಸ್ ಸರ್ಕಾರದ ಜಾಹೀರಾತುಗಳನ್ನು ವಿನ್ಯಾಸ ಮಾಡತೊಡಗಿತು. ಯಡಿಯೂರಪ್ಪನ ಅಯೋಗ್ಯ ಸರ್ಕಾರದ ಒಂದು ವರ್ಷದ ಸಾಧನೆಯ ಜಾಹೀರಾತುಗಳ ಬುಕ್‌ಲೆಟ್ ವಿನ್ಯಾಸಗೊಳಿಸಲು ಅವರಿಗೆ ಹಿಂಜರಿಕೆ ಆಗಲಿಲ್ಲ. ಏಕೆಂದರೆ ಅದು ಖಾಸ್‌ಬಾತ್ ಅಲ್ಲ ಅದು 'ಕಾಸು'ಬಾತ್, ಕಾಸಿನ ಮಾತು ಅಲ್ಲವೇ?

ಹೋಗಲಿ, ಬಿಸಿಯೂಟ ಯೋಜನೆಯನ್ನು ಖಾಸಗಿಯವರಿಗೆ ಕೊಡಬೇಡಿ ಎನ್ನುವ ಅಂಗನವಾಡಿ ಕಾರ್ಯಕರ್ತೆಯರ ನಿಲುವಿಗೆ ಮೋಹನ್ ಸಹಮತವಿದ್ದಂತಿದೆ. ವಿಶ್ವೇಶ್ವರ ಭಟ್ಟರೊಂದಿಗೆ ಇದನ್ನು ಅವರು ಚರ್ಚಿಸಿ ನೋಡಲಿ... ಮುಂದೆ ಮೋಹನರೇ ಇಸ್ಕಾನ್, ಅದಮ್ಯ ಚೇತನಗಳ ಪರ ಬರೆದರೂ ಆಶ್ಚರ್ಯವಿಲ್ಲ.

ಅವರ ಇಷ್ಟ, ಅವರಿಗೆ ಎಲ್ಲಿಯಾದರೂ ಬರೆಯುವ ಸ್ವಾತಂತ್ರ್ಯವಿದೆ. ಆದರೆ ನಮ್ಮ ಕೋರಿಕೆ ಇಷ್ಟೇ: ಅವರು ತೊಟ್ಟಿರುವ ಖಾಕಿ ಚೆಡ್ಡಿಯನ್ನು ಗಟ್ಟಿಯಾಗಿ ಹಿಡಿದಿರುವ ಆ ಕೆಂಪು ಉಡುದಾರವನ್ನು ಬೇಗ ಕಳಚಲಿ. ಅವರಿಗಿಷ್ಟವಿಲ್ಲದಿದ್ದರೇನು, ಒಂದೆರಡು ವಾರಗಳಲ್ಲಿ ಭಟ್ಟರೇ ಅದನ್ನು ಕಟ್ ಮಾಡಲಿದ್ದಾರೆ! ●



ಟೈಮ್ಸ್ OFF ಇಂಡಿಯಾ 25 ವರ್ಷದ ಫೋಟೋ 'ಫಿನಿಷ್'!

ಓದುಗರನ್ನು ಮುಠ್ಠಾಳರೆಂದು ಭಾವಿಸಿದೆ ಟೈಮ್ಸ್ ಆಫ್ ಇಂಡಿಯಾ ಎಂಬ ಸಿರಿವಂತ ಪೇಪರು. ತಾನು ಬರೆದದ್ದನ್ನೆಲ್ಲ ಓದುಗರು ಸತ್ಯವೆಂದು ನಂಬುತ್ತಾರೆ ಎಂಬ ಭ್ರಮೆಯಲ್ಲಿರುವ ಅದು ಮನಸ್ಸಿಗೆ ತೋಚಿದಂತೆ ಆಟ ಆಡುತ್ತಿದೆ.

ಇತ್ತೀಚೆಗೆ ಟೈಮ್ಸ್‌ನ ಬೆಂಗಳೂರು ಆವೃತ್ತಿ ಶುರುವಾಗಿ 25 ವರ್ಷವಾಯಿತಂತೆ. ಅದಕ್ಕೆ ಫುಲ್‌ಸ್ವಿಂಗ್‌ನಲ್ಲಿದೇ ಟೈಮ್ಸ್ ತಂಡ. 'ಸೆಲಿಬ್ರೆಟಿಂಗ್ 25 ಇಯರ್ಸ್' ಎಂಬ ವಿಶೇಷ ಪುರವಣಿಯನ್ನೇ ತಂದಿದೆ.

ಅದರಲ್ಲಿ ಬೆಂಗಳೂರು ಆವೃತ್ತಿ ಆರಂಭಗೊಂಡಾಗ ಎಂ.ಜಿ.ರೋಡ್ ಹೇಗಿತ್ತು ಈಗ ಹೇಗಿದೆ ಎಂದು ತೋರಿಸಲು ಎರಡು ಫೋಟೋಗಳನ್ನು ಮುದ್ರಿಸಿದ್ದಾರೆ. ಬೆಂಗಳೂರು ಆವೃತ್ತಿ ಆರಂಭಗೊಂಡ 1984ನೇ ಇಸವಿಯ ಫೋಟೋ ನೋಡಿದರೆ ಎಲ್ಲಿಂದ ನಗಬೇಕೋ ತಿಳಿಯುವುದಿಲ್ಲ.

ಈ 1984ರ ಫೋಟೊ ನಿಜಕ್ಕೂ 1984ರ ಎಂ.ಜಿ.ರೋಡ್ ತೋರಿಸುವುದಿಲ್ಲ! ಓದುಗರನ್ನು ಮೂರ್ಖರೆಂದು ಭಾವಿಸಿರುವ ಟೈಮ್ಸ್‌ನವರ ಅಹಂಕಾರಕ್ಕೆ ಇದು ಸಂಕೇತದಂತಿದೆ. ಆ ಫೋಟೋವನ್ನು ಗಮನಿಸಿನೋಡಿ: ಅಲ್ಲಿ ಎಲ್‌ಜಿ ಕಂಪೆನಿಯ ಜಾಹೀರಾತಿನ ಹೋರ್ಡಿಂಗ್ ಇದೆ. ಆದರೆ ಎಲ್‌ಜಿ(ಕೊರಿಯನ್ ಕಂಪೆನಿ ಲಕ್ಕಿಗೋಲ್ಡ್) ಭಾರತದಲ್ಲಿ ಆರಂಭವಾಗಿದ್ದು 1997ರಲ್ಲಿ! 1984ರ ಫೋಟೋದಲ್ಲಿ ಈ ಎಲ್‌ಜಿ ಹೋರ್ಡಿಂಗ್ ಹೇಗೆ ನುಸುಳಿತು ಎಂಬುದನ್ನು ರೆಸಿಡೆಂಟ್ ಎಡಿಟರ್ ಅಲ್ಲಲ್ಲ ಸ್ಲೀಪಿಂಗ್ ಎಡಿಟರ್ ಎಚ್.ಎಸ್. ಬಲರಾಮರೇ ಹೇಳಬೇಕು.

ಹಾಗೆಯೇ ಈ ಫೋಟೋದಲ್ಲಿ ಸ್ಯಾಂಟ್ರೋ ಕಾರಿದೆ, ಇಂಡಿಕಾದಂತಹ ಒಂದು ಕಾರಿದೆ ಮತ್ತು ಹೊಸ ಮಾಡೆಲ್‌ನ ಮಾರುತಿ 800 ಕಾರುಗಳೂ ಇವೆ. ಇವೆಲ್ಲ 1984ರಲ್ಲಿ ಬೆಂಗಳೂರಿನ ಎಂ.ಜಿ.ರೋಡಿಗೆ ಹೇಗೆ ಬಂದವು? ಬಿಲ್ಡಿಂಗ್‌ವೊಂದರ ಮೇಲೆ 'ಸೇಂಟ್ ಗೋಬೇನ್' ಲೋಗೋ ಕೂಡಾ ಇದೆ. 'ಸೇಂಟ್ ಗೊಬೇನ್' ಭಾರತಕ್ಕೆ ಬಂದಿದ್ದು 1996ರಲ್ಲಿ!

1984ರ ಎಂ.ಜಿ.ರೋಡ್ ತಮ್ಮ ಬಳಿ ಇಲ್ಲವೆಂದರೆ ತೆಪ್ಪಗೆ ಕೂಡಬೇಕಿತ್ತು. ಅದನ್ನು ಮುದ್ರಿಸದಿದ್ದರೆ ಏನೂ ಪ್ರಳಯವಾಗುತ್ತಿರಲಿಲ್ಲ. ಆದರೆ ಓದುಗರ ಬಗ್ಗೆ ಉಡಾಫೆಯ ಮನೋಭಾವ ಹೊಂದಿರುವ ಟೈಮ್ಸ್ OFF ಇಂಡಿಯಾ 1984=1997 ಎಂದು ತೋರಿಸಲು ಹೋಗಿ ಬೆತ್ತಲಾಗಿದೆ.

ಗಂಭೀರ ವಿಷಯಗಳಲ್ಲೂ ಇಂತಹ ಅಚಾತುರ್ಯವನ್ನು ಇವರು ಮಾಡುವುದಿಲ್ಲವೆಂದು ನಂಬುದು ಹೇಗೆ? ಇವರ ವರದಿಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸುವುದಾದರೂ ಹೇಗೆ?

ಇದೇ ಸಂದರ್ಭದಲ್ಲಿ ಎಚ್.ಎಸ್. ಬಲರಾಮ್ ಬರೆದಿದ್ದಾರೆ. "ಎಲ್ಲ ವರ್ಗದವರನ್ನು ಎಲ್ಲ ಬಗೆಯ 'ಟೇಸ್ಟ್'ನವರನ್ನು ತಲುಪಿದ್ದರಿಂದಲೇ ನಾವು ಬೆಂಗಳೂರಲ್ಲಿ 5 ಲಕ್ಷ ಪ್ರಸಾರ ತಲುಪಿದೆವು..."

ಇಲ್ಲಿ ಎಲ್ಲ ವರ್ಗದವರು ಎಂದರೆ ಯಾರು? ಬಲರಾಮರೇ ಬರೆದುಕೊಂಡಂತೆ "ಆಫೀಸ್‌ಗೆ ಹೋಗೋರು, ವೃತ್ತಿಪರರು, ಗೃಹಿಣಿಯರು, ಯುವಕರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಅಂದರೆ ಅವರ ಲೆಕ್ಕದಲ್ಲಿ ಕಾರ್ಮಿಕರು, ಸ್ಲಂನವರು ಇಲ್ಲವೇ ಇಲ್ಲ. ಅದಕ್ಕೆ ಅವರ ಕುರಿತೂ ಟೈಮ್ಸ್ ಬರೆಯೋದೇ ಇಲ್ಲ.

'ಡಿಫರೆಂಟ್ ವೆರೈಟಿಗಳಿರುವ ಥಾಲಿ ಇದ್ದಂತೆ ಟೈಮ್ಸ್. ಚಪಾತಿ, ಸಬ್ಜಿ ದಾಲ್, ಪಾಪಡ್, ಬಟರ್‌ಮಿಲ್ಕ್, ಐಸ್‌ಕ್ರೀಂ ಎಲ್ಲ ಇರುತ್ತೆ. ಓದುಗರು ಎಲ್ಲಾ ತಿನ್ನಬಹುದು ಅಥವಾ ಬೇಕಾದ್ದನ್ನು ತಿನ್ನಬಹುದು..." ಎಂದಿದ್ದಾರೆ ಬಲರಾಮ್.

ಸತ್ಯದ ಮಾತೇ ಬಿಡಿ. ಅದು ಥಾಲಿ, ಸಬ್ಜಿ, ದಾಲ್ ಪತ್ರಿಕೆಯೇ. ಅಲ್ಲಿ ಇಲ್ಲಿನ ನೆಲದ ವಾಸನೆ ಎಲ್ಲಿಂದ ಬರಬೇಕು? ಮುದ್ದೆ, ಸೊಪ್ಪು ಸಾರಿಗೆ ಅಲ್ಲಿ ಜಾಗ ಹೇಗೆ, ಸಿಕ್ಕೀತು?

ಇನ್ನೊಂದು ವಿಚಾರವನ್ನು ಬಲರಾಮ್ ಮರೆತಂತಿದೆ. ಅವರ ಪೇಜ್-3 'ಐಟಂ'ಗಳನ್ನು ನೋಡಿದಾಗ ಥಾಲಿ ಬದಲು ಚಿಕನ್ ಕಬಾಬ್ ನೋಡಿದಂತಾಗುತ್ತದೆ. ಅಷ್ಟೊಂದು ನಾನ್-ವೆಜ್ ಪುಟಗಳು ಅವು.....

ಟೈಮ್ಸ್ ಬೆಂಗಳೂರು ಆವೃತ್ತಿ ಸಂಪೂರ್ಣ ವರ್ಣಮಯ ಗೊಂಡಾಗ ಎದುರಾಳಿ ಪೇಪರೊಂದು ಒಂದು ಜಾಹೀರಾತಿನ ಹೋರ್ಡಿಂಗ್ ನಿಲ್ಲಿಸಿತ್ತು, ಅದರಲ್ಲಿ ಅರ್ಥಪೂರ್ಣ ವಾಕ್ಯವಿತ್ತು,

"We don't colour news,
We say it in black and white"

● ಪಿ.ಕೆ.ಮಲ್ಲನಗೌಡರ್

ಜೋಕ್ಸ್

ಒಂದು ದಿನ ನಾರದ ಬಾರಿನಲ್ಲಿ ಕೂತು ಕುಡಿಯುತ್ತಿರುತ್ತಾನೆ. ಅವನ ಗುರುತು ಹಿಡಿಯದ ವೈಟರ್ ಕೇಳುತ್ತಾನೆ: ಏನ್ ಗುರು, ಹತ್ತು ಬಾಟ್ಲಿ ಆದರೂ ನೀನಿನ್ನೂ ಟೈಟ್ ಆಗಿಲ್ವ?

ನಾರದ: ನಾನು ದೇವರು ಕಣಪ್ಪ.

ವೈಟರ್: ಮಗ ಈಗ ಟೈಟಾದ ನೋಡು!

*****

ನಿನ್ನೆ ರಾತ್ರಿ ಒಂದು ಕನಸು ಬಿತ್ತು. ಅದರಲ್ಲಿ ನಾನು ದೇವರೊಂದಿಗೆ ಮಾತನಾಡುತ್ತಿದ್ದೆ.

ದೇವರು ಕೇಳಿದ "ನಿನ್ನ ಬೆಸ್ಟ್ ಫ್ರೆಂಡ್ ಯಾರು?" ಅಂತ.

ನಾನು ನಿನ್ನ ಹೆಸರು ಹೇಳಿದೆ. ದೇವರು ನಕ್ಕು "ನೀನು ಉದ್ಧಾರ ಆಗಲ್ಲ" ಎಂದ.

*****

ಯುವಕನೊಬ್ಬ ತನ್ನ ಗುರುಗಳನ್ನು ಕೇಳಿದ: "ಮಡುಗರಿಗಿಂತ ಹುಡುಗಿಯರಿಗ ಯಾಕೆ ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿ?"

ಗುರು ಉತ್ತರಿಸಿದ: "ನೀನು ಕಿವಿಯಲ್ಲಿ ಬೆರಳಿಟ್ಟು ಅಲ್ಲಾಡಿಸಿದರೆ, ಬೆರಳಿಗೆ ಹಿತ ಅನ್ನಿಸುತ್ತೋ? ಕಿವಿಗೆ ಹಿತ ಅನ್ನಿಸುತ್ತೋ?"

*****

ಕುದುರೆಯಂತೆ ಓಡೋಡಿ
ಬಾ
ಕಳ್ಳನಂತೆ ಕೂರು
ರಾಜನಂತೆ ನಡೆದುಕೊಂಡು
ಹೋಗು


-ಶೌಚಾಲಯದ ಬಾಗಿಲ ಮೇಲೆ ಕಂಡುಬಂದದ್ದು

*****

ಒಂದು ಸಣ್ಣ ಕತೆ: ಹುಡುಗನೊಬ್ಬ ಹುಡುಗಿಯನ್ನು ಕೇಳಿದ "ನೀನು ನನ್ನನ್ನು ಮದುವೆ ಆಗುತ್ತೀಯಾ?" ಎಂದು.

"ಆಗಲ್ಲ" ಎಂದ ಹುಡುಗಿ ಸಂತೋಷವಾಗಿ ತನ್ನ ಜೀವನ ನಡೆಸಿದಳು. ಬೇಕೆಂದಾಗ ಶಾಪಿಂಗ್ ಹೋಗುತ್ತಿದ್ದಳು, ಸ್ನೇಹಿತರನ್ನು ಭೇಟಿ ಆಗುತ್ತಿದ್ದಳು. ಅವಳ ಮನೆ ಸ್ವಚ್ಛವಾಗಿರುತ್ತಿತ್ತು. ಅಡುಗೆ ಮಾಡು ತೊಂದರೆಯನ್ನು ಆಕೆ ಎಂದೂ ಎದುರಿಸಲಿಲ್ಲ. ಅವಳ ಕಪಾಟಿನ ತುಂಬ ಬೇಜಾನ್ ಬಟ್ಟೆಗಳಿದ್ದವು. ಆಕೆ ದಪ್ಪಗಾಗದೆ ಸಣ್ಣಗೇ ಉಳಿದಳು. ಎಲ್ಲಕ್ಕಿಂತ ಮಿಗಿಲಾಗಿ ಪುರುಷನ ಅಸಹ್ಯಗಳಿಂದ ತಪ್ಪಿಸಿಕೊಂಡಿದ್ದಳು!

ಜಯಕರ್ನಾಟಕ ಅಧ್ಯಕ್ಷರಾಗಿ ಜಾಣಗೆರೆ-ಕೋಣಗೆರೆ!



ಈಗ ಕುದುರಿರುವ ಡೀಲು ಜಾರಿಗೆ ಬಂದರೆ ಇದೇ ಜುಲೈ 27ರಂದು 12 ಗಂಟೆಯ ಯಮಗಂಡ ಕಾಲದಲ್ಲಿ ಜಾಣಗೆರೆ ಅಫಿಷಿಯಲ್ಲಾಗಿ ಜಯಕರ್ನಾಟಕದವರ ಗುಂಪು ಸೇರಿಕೊಂಡು ಕನ್ನಡಿಗರ ಮೇಲೆ ಆಕ್ರಮಣ ಆರಂಭಿಸಲಿ ದ್ದಾರೆ.

ಕಳೆದೆರಡು ದಶಕಗಳಿಂದ ಕನ್ನಡಕ್ಕಾಗಿ ಹೋರಾಟ ಮಾಡಿಕೊಂಡು ಬಂದಿರುವ ಜಾಣಗೆರೆ ವೆಂಕಟರಾಮಯ್ಯನವರಿಗೆ ಈಗ ಕರೆಕ್ಟಾಗಿ ಅರವತ್ತು ವಯಸ್ಸು!

ಅಂದರೆ ಅರಳು-ಮರಳು ಅನ್ನಬಹುದಾದ ಕಾಲ.

ಅದಕ್ಕೆ ತಕ್ಕಂತೆ ಜಾಣಗೆರೆ 'ಮಗ ಎಲ್ಲಾ ಬಿಟ್ಟ ಭಂಗಿ ... ಅನ್ನುವಂತೆ ಲ್ಯಾಂಡ್ ಮಾಫಿಯಾಗಳೊಂದಿಗೆ ...ಕೊಂಡು ಕನ್ನಡಕ್ಕಾಗಿ ಹೋರಾಡಲು ಹೊಸ ವೆಪನ್ ...ತ್ತಿಕೊಳ್ಳುತ್ತಿದ್ದಾರೆ.

ಅದು ಜಯಕರ್ನಾಟಕ ಸಂಘಟನೆಯ ಅಧ್ಯಕ್ಷಗಿರಿ!

ಈಗ ಕುದುರಿರುವ ಡೀಲು ಜಾರಿಗೆ ಬಂದರೆ ಇದೇ ...ಲೈ 27ರಂದು 12 ಗಂಟೆಯ ಯಮಗಂಡ ಕಾಲದಲ್ಲಿ ...ಣಗೆರೆ ಅಫಿಷಿಯಲ್ಲಾಗಿ ಜಯಕರ್ನಾಟಕದವರ ಗುಂಪು ...ಕೊಂಡು ಕನ್ನಡಿಗರ ಮೇಲೆ ಆಕ್ರಮಣ ಆರಂಭಿಸಲಿ ...

ಅಂದಹಾಗೆ ಈ ಸಮಾರಂಭ ಅರೇಂಜ್ ಆಗುತ್ತಿರು... ಬೆಂಗಳೂರಿನ ಪ್ರತಿಷ್ಠಿತ ಪಂಚತಾರಾ ಹೋಟೆಲ್ ...ಂದರಲ್ಲಿ!

...ಬಡ ಕನ್ನಡ ಚಳವಳಿಗಾರರ ಮಟ್ಟಿಗೆ ಇದೂ ಒಂದು ... ದಾಖಲೆಯೇ ಸೈ. ಏಕೆಂದರೆ ಇಲ್ಲಿಯವರೆಗೂ ...ರಾಟ ನಡೆಸಿಕೊಂಡು ಬಂದಿರುವ ಪ್ರಾಮಾಣಿಕ ...ರ್ಯಕರ್ತರು ಐನೂರು ರೂಪಾಯಿ ಖರ್ಚಿನ ಪ್ರೆಸ್‌ಕ್ಲಬ್ಬು ...ದಾ ಹೆಚ್ಚೆಂದರೆ ಸಾವಿರ ರೂಪಾಯಿ ಖರ್ಚಿನ ಕಾನಿಷ್ಕಾ ...ಟೆಲ್ ಲೆವೆಲ್‌ನಲ್ಲಿರುತ್ತಿದ್ದರು. ಅವರಿವರ ಮಾತೇಕೆ? ...ಶುದ್ಧ ಕೈಗಳ ಜಾಣಗೆರೆಯೂ ಹೀಗೇ ಇದ್ದವರು.

... ಅವರಿಗೀಗ ಫ್ಲೇವಿನ್ ಬಂಪರ್ ಲಾಟರಿ ...ಡೆದಿದೆ. ಬಡಕನ್ನಡಿಗರ, ತಬ್ಬಲಿ ಕನ್ನಡತಿ ...ಯರ, ದಲಿತ ಕನ್ನಡಿಗರ ಆಸ್ತಿ ಕಿತ್ತುಕೊಂಡು ...ಮ್ರಾಜ್ಯಾಧೀಶರಾಗಿರುವ ಮಾಫಿಯಾ ಡಾನುಗಳ ...ಮಿಂದ ಜಾಣಗೆರೆಗೆ ಈಗ ಒಳ್ಳೇ ಸುಸಜ್ಜಿತ ...ಸು. ಸ್ಕಾರ್ಪಿಯೋ ಕಾರು. ಅದಕ್ಕೊಬ್ಬ ಡ್ರೈವರ್ರೂ. ...ದ್ಯಂತ ಓಡಾಟಕ್ಕೆ ಬಸ್ ಚಾರ್ಜು... ಅಲ್ಲಲ್ಲಾ ...ವೆಲ್ ಖರ್ಚು, ಊಟ-ವಸತಿ ಖರ್ಚು ಎಲ್ಲ ...ಬರುತ್ತಿದೆ. ಕಳೆದ 25 ವರ್ಷದಿಂದ ಕನ್ನಡ, ...ಗರು ಕರ್ನಾಟಕದ ಬಗ್ಗೆ ಬಿಡುವಿರದಂತೆ ...ಡಿಕೊಂಡು ಬಂದಿದ್ದ ಜಾಣಗೆರೆಯವರು ಈಗ ...ಎ-ಡಿಎ ಫೆಸಿಲಿಟಿ ಬಳಸಿಕೊಂಡು ಕಳೆದ 15 ...ಗಳಿಂದ ಕರ್ನಾಟಕ ಟೂರ್ ಮಾಡುತ್ತಿದ್ದಾರೆ. ...ಕೇಂತಾ?' ಕೇಳಿದವರಿಗೆ 'ಕನ್ನಡಿಗರ ಸ್ಥಿತಿಗತಿ ...ಮಾಡಿಕೊಳ್ಳಲು' ಎಂಬ ಉತ್ತರ ಸಿಗುತ್ತಿದೆ! ...ದರೆ ಈ ಇಷ್ಟೂ ವರ್ಷ ಇದನ್ನೆಲ್ಲಾ ತಿಳಿದುಕೊಳ್ಳದೆ ...ಗೆರೆ ಮಾತಾಡ್ತಾ ಇದ್ದರಾ?

...ತಾಯೇ ಭುವನೇಶ್ವರಿಯೇ ಉತ್ತರಿಸಬೇಕು!


ಜೈ ಕರು'ನಾಟಕ' ಗುಂಪು

...ಸ್ತುತದ ವಿದ್ಯಮಾನ ಏನೆಂದರೆ ಅನೇಕ ರಿಯಲ್ ...ಟ್ ಸಾಹುಕಾರರಿಗೆ ಸಮಾಜಸೇವಕರ ವೇಷ ತೊಟ್ಟು ...ಲು ಕನ್ನಡ ಹೋರಾಟ ಒಂದು ವೇದಿಕೆಯಾಗುತ್ತಿದೆ. ... ಕಾಗುಣಿತ ಬಾರದವರು, ಕನ್ನಡಿಗರ ಸಮಸ್ಯೆಯ ...ಬಂದ ತಿಳಿದಿರದವರೂ ಇವತ್ತು ಚಾಂಪಿಯನ್ ...ರಾಟಗಾರರಾಗಿ ಬಿಟ್ಟಿದ್ದಾರೆ. ಹಾಗೆ ನೋಡಿದರೆ ... ಕರುನಾಟಕ ಎಂಬ ಹೆಸರಿನ ಅನೇಕ ನಾಟಕೀಯ ಗುಂಪುಗಳಿಗೆ ಹೋಲಿಸಿದರೆ ಜಾಣಗೆರೆಯವರ ವ್ಯಕ್ತಿತ್ವ ಬದ್ಧತೆ ಉತ್ತಮವಾಗಿತ್ತು.

ಜಾಣಗೆರೆ ಬೇರೆಯವರಂತೆ ಸಿಕ್ಕವರ ತಲೆ ಹೊಡೆದು ಹಣ ಸಂಪಾದಿಸಿ ಆಮೇಲೆ ಕನ್ನಡದ ಬಗ್ಗೆ ಮಾತಾಡಿದವರಲ್ಲ. ಈತ 30 ವರ್ಷಗಳ ಹಿಂದೆ ಕುಣಿಗಲ್ ಪ್ರಾಂತ್ಯದ ಜಾಣಗೆರೆಯಿಂದ ಬಡವನಾಗಿ ಬೆಂಗಳೂರಿಗೆ ಬಂದವರು. ಬಡತನ ಒಪ್ಪಿಕೊಂಡೇ ಹೋರಾಟದ ಜೀವನ ಆರಿಸಿಕೊಂಡವರು. ಆದರೆ ಈಗ ಅದೇನು ಮಂಕು ಕವಿಯಿತೋ? ಹೋಗಿಹೋಗಿ ಮಾಫಿಯಾಗಳ ಜಾಲಕ್ಕೆ ಬಿದ್ದಿದ್ದಾರೆ. ಇದುವರೆಗೂ ಜೈ ಕರ್ನಾಟಕದ ಅಧ್ಯಕ್ಷನಾಗಿದ್ದ ಚನ್ನಪಟ್ಟಣದ ರಮೇಶ್‌ಗೌಡ ಶುದ್ಧ ಘಟಿಂಗ ರೋಲ್‌ಕಾಲ್ ಪ್ರವೀಣನಾಗಿದ್ದ. ಈ ಗುಂಪಿಗೆ ವಿದ್ಯಾರ್ಥಿ ವಿಭಾಗ, ಆಟೋ ಚಾಲಕರ ವಿಭಾಗ, ಮಹಿಳಾ ವಿಭಾಗ... ಹೀಗೆ ಡಜನ್‌ಗಟ್ಟಲೆ ವಿಂಗ್‌ಗಳಿವೆ. ಆದರೆ ಭೂಕಬಳಿಕೆ ವಿಭಾಗ ಅಂತಾ ಸಪರೇಟಾಗಿ ವಿಂಗ್ ರಚಿಸಿಲ್ಲ. ಅದೇ ಈ ಗುಂಪಿನ ಬಹುತೇಕರ ಕುಲಕಸುಬಾಗಿದ್ದರೂ ಸಹ!

2008ರ ಫೆಬ್ರವರಿಯಲ್ಲಿ ಜೈ ಅಂತಾ ಶುರುವಾದ ಈ ಗುಂಪು ತಮ್ಮ ಗುರಿ ಉದ್ದೇಶಗಳ ಬಗ್ಗೆ ವಿಪರೀತವಾಗಿ ಹೇಳಿಕೊಳ್ಳುತ್ತಾರೆ. ಕನ್ನಡ-ಕನ್ನಡಿಗ-ಕರ್ನಾಟಕದಲ್ಲಿ ಹಾಗಾಗಬೇಕು... ಹೀಗಾಗಬೇಕು ಅಂತಾ ಹೇಳುತ್ತಾ... ಕೊನೆಗೆ...ಹಾಗಾಗದಿದ್ದರೆ ಅಗತ್ಯವಾದಲ್ಲಿ ಉಪವಾಸ ಮಾಡುತ್ತೇವೆ ಅಥವಾ ಕ್ರಾಂತಿ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ.

ಬಹುಶಃ ಇವರ ಕಲ್ಪನೆಯಲ್ಲಿ ಕ್ರಾಂತಿ ಅಂದರೆ ಉಪವಾಸದ ವಿರುದ್ಧ ಪದ; ಅಂದರೆ ಭೋಜನ ಅಂತಿರಬಹುದು!



ಜಯ್ ಕರ್ನಾಟಕದ ಹುಲಿವೇಷಧಾರಿಗಳು...

ಶಾಲಾ-ಕಾಲೇಜು, ಅನಾಥಾಲಯಕ್ಕೆ ನೆರವು, ಆರೋಗ್ಯ ಶಿಬಿರ, ವಿಧವೆ-ವಿಧುರರ ಮದುವೆ, ಅಂಗವಿಕಲರಿಗೆ ಸೌಲಭ್ಯ... ಹೀಗೆ ಯಾವುದನ್ನು ಬಿಡದೆ ಸಮಾಜಸೇವೆ ಮಾಡುವ ಪ್ರತಿಜ್ಞೆ ಮಾಡಿರುವ ಜೈ ಕರುನಾಟಕ ಪಾತ್ರಧಾರಿಗಳು ಆಗಾಗ್ಗೆ ಈ ಕೆಲಸಗಳನ್ನು ಮಾಡುತ್ತಿರುವುದೂ ನಿಜ.

ಆದರೆ ಇದಕ್ಕೆಲ್ಲ ದುಡ್ಡು ಯಾರು ಕೊಡುತ್ತಿದ್ದಾರೆ? ಆ ದಾನಶೂರ ಕರ್ಣನಿಗೆ ಹಣ ಎಲ್ಲಿಂದ, ಹೇಗೆ ಬರುತ್ತಿದೆ? ಜಾಣಗೆರೆಗೇನಾದರೂ ಗೊತ್ತಾ? ಅದು ಹೋಗಲಿ ಬೆಂಗಳೂರಿನಲ್ಲಿ ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಆಗಿರುವ ಮಾಫಿಯಾ ಹತ್ಯೆಗಳಿಗೂ ಈ ಜೈ ಗುಂಪಿನ ಲೀಡರ್‌ಗಳಿಗೂ ಲಿಂಕ್ ಇದೆ ಎಂಬುದಾದರೂ ಜಾಣಗೆರೆಗೆ ಗೊತ್ತಿರಲೇಬೇಕು.

ಹಾಗಿದ್ದರೂ ಜಾಣಗೆರೆ ಕೋಣಗೆರೆಯಾದರೇಕೆ?

ಇದೇನು ಸ್ವಾರ್ಥನಾ? ಗೊಂದಲವಾ? ಶುದ್ಧ ಅಜ್ಞಾನವಾ? ಇಲ್ಲ ಅವರಸರದಲ್ಲಿ ಅಜ್ಜಿ ಮೈನೆರೆತಳು ಅನ್ನುವಂತ ಎಡಬಿಡಂಗಿತನವಾ?

ಹಾಗೆ ಹೇಳಬೇಕೆಂದರೆ ಜಾಣಗೆರೆ ಜಾಯಮಾನಕ್ಕೆ ಇದು ಹೊಸದೇನೂ ಅಲ್ಲ, ಅವರು ಸೇರಿ ಬಿಟ್ಟುಬಂದಿರುವ ಕಟ್ಟಿ ಕೆಡವಿರುವ ಸಂಘಟನೆಗಳೇನು ಒಂದಾ ಎರಡಾ?

ಕನ್ನಡಿಗರ ಹೋರಾಟರಂಗ ವಿಮೋಚನಾರಂಗ ಅಂತ ಮಾಡಿದ್ದರು. ಅದು ಕೆಲಕಾಲವಿದ್ದು ಮರೆಯಾಯಿತು. ನಂತರ ಕನ್ನಡಿಗರು.... ಅಂತ ಶುರುವಾಗುವ ಅನೇಕ ಒಕ್ಕೂಟ, ವೇದಿಕೆ, ಸಂಯುಕ್ತರಂಗ, ಐಕ್ಯವೇದಿಕೆ... ಹೀಗೆ ಆಯಾಕಾಲಕ್ಕೆ ತಕ್ಕಂತೆ ಏನೇನೊ ಹೆಸರುಗಳಲ್ಲಿ ಏಕಾಂಗಿ ವೀರನಂತೆ ನಡೆಸುತ್ತಿದ್ದರು. ನಂತರ ಕಾಲಗರ್ಭದೊಳಗೆ ಅವೆಲ್ಲ ಐಕ್ಯವಾಗಿ ಹೋದವು.

ಈ ಕೆಲಸಗಳ ನಡುವೆಯೇ 'ಮಾರ್ಧನಿ' ಅಂತ ಪತ್ರಿಕೆ ಶುರುಮಾಡಿದರು. ಅದು ಅನೇಕ ಮರುಜನ್ಮ ಪಡೆಯಿತಾದರೂ ಕೊನೆಗೂ ಬದುಕುಳಿಯಲಿಲ್ಲ. ಈ ಪತ್ರಿಕೆ ಬದುಕಿಸಲು ಜಾಣಗೆರೆ ಸ್ವಲ್ಪ ಕೈಕೆಡಿಸಿಕೊಂಡರು. ಆದರೆ ನಾರಾಯಣಗೌಡ, ನಾರಾಯಣಕುಮಾರರಂತೆ ಎಂದೂ ಹಸಿ ಭ್ರಷ್ಟತೆ ಮಾಡಲಿಲ್ಲ. ಈಗಿನ ಕನ್ನಡ ಪ್ರೇಮಿ ಮಾಫಿಯಾ ಡಾನ್‌ಗಳ ಕೈಗೆ ರಕ್ತ ಮೆತ್ತಿಕೊಂಡಿದ್ದರೂ ಸಾಚಾಗಳಂತೆ ಪೋಸು ಕೊಡುತ್ತಿದ್ದಾರಲ್ಲ, ಜಾಣಗೆರೆ ಆ ರೀತಿ ಎಂದೂ ಡಬಲ್ ಆ್ಯಕ್ಟಿಂಗ್ ಮಾಡುತ್ತಿರಲಿಲ್ಲ.

ಹೀಗಿದ್ದ ಜಾಣಗೆರೆ, ಇಂತಾ ಜಾಣಗೆರೆ ಒಂದು ವಿಷಘಳಿಗೆಯಲ್ಲಿ ನಾರಾಯಣಗೌಡನನ್ನು ಕರೆದು ಪಕ್ಕ ಕೂರಿಸಿಕೊಂಡರು. ಅಷ್ಟರಲ್ಲಾಗಲೇ ಕರ್ನಾಟಕ ರಕ್ಷಣಾ ವೇದಿಕೆ ಚಾಲೂ ಆಗಿತ್ತು, ನಾಯಕ ಜಾಣಗೆರೆ ಹತ್ತಿರ ಆಗಲೂ ಹಣ ಇರಲಿಲ್ಲ, ಒಳ್ಳೇ ಮನುಷ್ಯನೆಂಬ ಹೆಸರು ಮಾತ್ರ ಇತ್ತು. ಇತ್ತ ನಾರಾಯಣಗೌಡ ಬಾಂಬೆಯಿಂದ ಬೆಂಗಳೂರಿಗೆ ಬಂದು ಚಿಕ್ಕಪೇಟೆಯಲ್ಲಿ ಲೇವಾದೇವಿ-ಚೀಟಿ ವ್ಯವಹಾರ ನಡೆಸಿ ದುಂಡಗಾಗುತ್ತಾ ಹೋದ. ರಕ್ಷಣಾ ವೇದಿಕೆಗೆ ಕೊಂಚ ಹೆಸರು ಬಂದ ಮೇಲೆ ಹಫ್ತಾ ವಸೂಲಿಗೂ ಇಳಿದ. ಇವರ ಆಟಾಟೋಪ ನೋಡಿ ಹೆದರಿಹೋದ ಜಾಣಗೆರೆ ರೋಲ್‌ಕಾಲ್ ಕೂಡದು ಅಂದರು. ಕಿಲಾಡಿ ನಾರಾಯಣಗೌಡ ರಮೇಶ್‌ಗೌಡನ ಜೊತೆ ಸೇರಿ ಜಾಣಗೆರೆಯನ್ನೇ ರಕ್ಷಣಾ ವೇದಿಕೆಯಿಂದ ಆಚೆ ತಳ್ಳಿಬಿಟ್ಟ.

ಅಂದಹಾಗೆ ಇಲ್ಲಿ ಕಾಣಿಸಿರುವ ಚನ್ನಪಟ್ಟಣದ ರಮೇಶಗೌಡ ಮೊದಮೊದಲು ನಾರಾಯಣಗೌಡನಿಗೆ ಜೈ ಅಂತಿದ್ದವನು ಕೊನೆಗೆ ಜೈ ಕರ್ನಾಟಕ ಸೇರಿ ಅದರ ಅಧ್ಯಕ್ಷನಾಗಿ ಬಿಟ್ಟ.

ಈಗ ಕಾಲನ ನಡೆ ಒಂದು ಪೂರ್ಣ ಸುತ್ತು ಬಂದಿದೆ.

ಕನ್ನಡಾಂಬೆಯ ವರಪುತ್ರರಾದ ನಾಗೌಡ ರಕ್ಷಣಾವೇದಿಕೆ ಮಡಗಿಕೊಂಡಿದ್ದಾನೆ. ಜಾಣಗೆರೆ ಪೆದ್ದುಪೆದ್ದಾಗಿ ಜೈ ಕರ್ನಾಟಕ ಬಸ್ ಹತ್ತುತ್ತಿದ್ದಾರೆ. ಆ ಕಾರಣದಿಂದಾಗಿಯೇ ಜಾಣಗೆರೆಯ ವಿರೋಧಿ ರಮೇಶಗೌಡನಿಗೆ ಅವನ ಗೂಂಡಾಗುರುಗಳು ಗೇಟ್‌ಪಾಸ್ ಕೊಟ್ಟು ಸಾಗಹಾಕಿದ್ದಾರೆ. ಅವನೀಗ ಚನ್ನಪಟ್ಟಣ ಬೈ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟು ಆಗಲು ಹೊರಟುನಿಂತಿದ್ದಾನೆ.

ಕೊನೆಯದಾಗಿ ಒಂದು ಮಾತು.

ಈ ಜೈ ಕರು'ನಾಟಕ'ದವರು ಜನರಿಗೆ ನೂರು ಬೋರ್‌ವೆಲ್ ತೆಗೆಸಿಕೊಡುತ್ತೇವೆ ಅಂತಲೂ ಎಲ್ಲೋ ಒಂದು ಕಡೆ ಹೇಳಿಕೊಂಡಿದ್ದಾರೆ.

ಜಾಣಗೆರೆ ಈಗ ಹೋಗಿಬೀಳುತ್ತಿರುವುದು ಅಂತಾದ್ದೇ ಒಂದು ಹಾಳು ಬೋರ್‌ವೆಲ್ ಒಳಗೆ ಅಂತ ಕನ್ನಡ ಹುಡುಗರು ಜೋಕ್ ಮಾಡುತ್ತಿದ್ದಾರೆ.

ನಿಷ್ಪಾಪಿ ಜಾಣಗೆರೆ...!


● ವರದಿಗಾರ

...ಮೇಶ್‌ಗೌಡನ ಎಲೆಕ್ಷನ್ ಖಯಾಲಿ



"ಇದುವರೆಗೂ ಜೈಕರ್ನಾಟಕ ಗುಂಪಿನ ಅಧ್ಯಕ್ಷನಾಗಿದ್ದ ಚನ್ನಪಟ್ಟಣ ರಮೇಶ್‌ಗೌಡ ... ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಸರ್ಕಸ್ ನಡೆಸುತ್ತಿದ್ದಾನೆ. ...ಕೆಲವೇ ವರ್ಷಗಳ ಹಿಂದೆ ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡು ...ಬಾಂಬೆಗೆ ಓಡಿಹೋಗಲು ರೆಡಿಯಾಗಿದ್ದ ರಮೇಶ್‌ಗೌಡ ಆಮೇಲೆ ... ಬದಲು ಜೈ ಕರ್ನಾಟಕ ಸೇರಿಕೊಂಡು ಈಗ ಅಸೆಂಬ್ಲಿ ಎಲೆಕ್ಷನ್‌ಗೆ ನಿಲ್ಲುವ ...ತ್ತಿದ್ದಾನೆಂದರೆ ಇವನು 'ಕನ್ನಡ ಸೇವೆ' ಮಾಡಿ ಎಷ್ಟು ದುಡ್ಡು ದೋಚಿರಬಹುದು ...

ಶಾಂತವೇರಿ ಗೋಪಾಲಗೌಡ ಪ್ರಶಸ್ತಿಯೂ ಮಾಫಿಯಾಗಳ ನೆಂಟಸ್ತಿಕೆಯೂ



ಶಾಂತವೇರಿ ಗೋಪಾಲಗೌಡರ ಬಗ್ಗೆ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ?

ಅಂತ ಮಹಾನ್ ಸಮಾಜವಾದಿ ನಾಯಕನ ಹೆಸರಿನಲ್ಲೇ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಎಂಬುದಿದೆ. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಕೆ. ರಾಮೇಗೌಡ ಈ ಪ್ರಶಸ್ತಿ ಸ್ಥಾಪಕರು.

ಜಾಣಗೆರೆಗೆ ಮೊನ್ನೆ ತಾನೆ ಅಂದರೆ ಮೇ ತಿಂಗಳ 14ರಂದು ಗೋಪಾಲಗೌಡ ಪ್ರಶಸ್ತಿ ಕೊಡಲಾಗಿತ್ತು. ನಯನ ಸಭಾಂಗಣದಲ್ಲಿ ನಡೆದ ಈ ಸನ್ಮಾನ ಸಭೆಯಲ್ಲಿ ಬರಗೂರು, ಬಂಜಗೆರೆ ಮುಂತಾದವರು ಭಾಗವಹಿಸಿ ಜಾಣಗೆರೆ ಬಗ್ಗೆ ಮಾತಾಡಿದ್ದರು. ಆದರೆ ಅವತ್ತು ಸಮಾಜವಾದಿ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಎತ್ತಿಕೊಂಡು ಹೋದ ಜಾಣಗೆರೆ ಎರಡೇ ತಿಂಗಳಲ್ಲಿ ಮಾಫಿಯಾ ನೆಂಟಸ್ತಿಕೆ ಮಾಡುತ್ತಾರೆಂದು ಯಾರೂ ಊಹಿಸಿರಲಿಲ್ಲ.

ಎಲ್ಲಿಯ ಗೋಪಾಲಗೌಡ!

ಎಲ್ಲಿಯ ಮಾಫಿಯಾ ಅಖಾಡ!!

ಜಾಣಗೆರೆಗೆ ನಿಜಕ್ಕೂ ಕನ್ನಡಕ್ಕಾಗಿ ಕೆಲಸ ಮಾಡಲೇಬೇಕೆಂಬುದಿದ್ದರೆ ಮಾಫಿಯಾ ನೆಂಟಸ್ತಿಕೆಯೇ ಬೇಕಿತ್ತಾ?

ಅವರಿಗೆ ಒಳ್ಳೆ ಹೆಸರಿತ್ತು. ಗೌರವಿಸುವ ಕನ್ನಡ ಕಾರ್ಯಕರ್ತರಿದ್ದರು. ಹೋರಾಡಲು ಅನೇಕ ವಿಚಾರಗಳೂ ಇದ್ದವು. ಆದರೀಗ ಎಲ್ಲಾ ಬಣ್ಣ ಮಸಿ ನುಂಗಿತು ಎನ್ನುವಂತೆ, ಕೊಲೆ ಆರೋಪ, ನಕಲಿ ಪಾಸ್‌ಪೋರ್ಟ್ ಹಗರಣ, ಅಕ್ರಮ ಆಸ್ತಿಗಳಿಕೆ ಗೂಂಡಾ ಗ್ಯಾಂಗ್ ಸಾಕಿಕೊಂಡಿರುವವರ ಜೊತೆ ಸೇರುತ್ತಿದ್ದಾರೆ.

ಜನ ಇದನ್ನು ಒಪ್ಪುತ್ತಾರಾ?


ತೀರಾ ನಿನ್ನೆ ಮೊನ್ನೆಯವರೆಗೂ ಯಾರಾದರೂ ಕನ್ನಡ ಕಾರ್ಯಕರ್ತರು ಹೋಗಿ ಕರೆದರೆ ಕನ್ನಡಿಗರನ್ನು ನಂಬಿ ನಾನು ಬೀದಿಪಾಲಾದೆ ಎಂದು ರೇಗುತ್ತಿದ್ದ ಇದೇ ಜಾಣಗೆರೆ ಈಗ ರಾತ್ರೋರಾತ್ರಿ ಸಮಾಜ ವಿರೋಧಿಗಳನ್ನು ನಂಬುತ್ತಿದ್ದಾರಲ್ಲ...


ಇದಲ್ಲವಾ ಪವಾಡ?


ಅನನ್ಯ ಸಂಗೀತ ಸ್ವರವೂ... ಒಂದು ಅಪಸ್ವರವೂ...



[illegible] ಬಾಳಪ್ಪರೊಂದಿಗೆ.


ಬಾಲಮುರಳಿಕೃಷ್ಣರೊಂದಿಗೆ..


ಭೀಮಸೇನ್ ಜೋಷಿ...


ಪಂ.ರಾಜಗುರುರವರೊಂದಿಗೆ....


ದ.ರಾ.ಬೇಂದ್ರೆಯವರೊಂದಿಗೆ....


ಗಂಗೂಬಾಯಿ

"ತುಂಬಿದ ಮನ್ಯಾಗ ತೊಟ್ಟಿಲು ಕಟ್ಟಿರತಾರ, ಅದರೊಳಗ ಕೂಸು ಮಕ್ಕೊಂದಿರ್ತದ. ಆದರ್ಸ ಯಾರೂ ತೊಟ್ಟಿಲ ಸಮೀಪ ನಿಂತು ತೊಟ್ಟಿಲ ತೂಗಂಗಿಲ್ಲ, ಅಡ್ಡಾಡ ಮಂದಿ ಹಂಗ್ಸ ಸುಮ್ಮನ ತೂಗಿ ಹೋಗ್ತಾರ. ಅದು ನಿಲ್ಲೋದರೊಳಗ ಇನ್ಯಾರೋ ಬಂದು ಕೈಹಚ್ಚತಾರ. ತೊಟ್ಟಿಲು ನಿಲ್ಲೋದಿಲ್ಲ, ಕೂಸಿನ ನಿದ್ದಿಗೂ ಭಂಗ ಇಲ್ಲ, ಹಂಗಸ್ಸ ಈ ಸಂಗೀತ. ಯಾರೊ ಕೈ ಹಚ್ತಾರ, ನಡಕೊಂಡು ಹೋಗ್ತದ...."

ಸಂದರ್ಶನವೊಂದರಲ್ಲಿ, ದೃಶ್ಯಮಾಧ್ಯಮಗಳ ಅಬ್ಬರದಲ್ಲಿ ಹಿಂದೂಸ್ಥಾನಿ ಸಂಗೀತಕ್ಕೆ ಆದ್ಯತೆ ಕಡಿಮೆಯಾಗುತ್ತಿದೆಯೆ ಎಂಬ ಪ್ರಶ್ನೆಗೆ ಉತ್ತರಿಸುತ್ತ ಮೇಲಿನ ರೂಪಕವನ್ನು ಹೇಳಿದ್ದರು ಗಂಗೂಬಾಯಿ ಹಾನಗಲ್. ಈಗ ಸಂಗೀತದ ತೊಟ್ಟಿಲು ತೂಗುವ ಅವರ ಕೈ ಶಾಶ್ವತ ವಿಶ್ರಾಂತಿಗೆ ಜಾರಿದೆ. ಆದರೆ ಅವರ ಅಪಾರ ಶಿಷ್ಯರು, ಅವರ ಸ್ಫೂರ್ತಿಯಿಂದ ಹಿಂದೂಸ್ಥಾನಿ ಸಂಗೀತವನ್ನು ಆರಾಧಿಸುವವರು ತೊಟ್ಟಿಲನ್ನು ತೂಗುತ್ತಲೇ ಇರುತ್ತಾರೆ. "ತೊಟ್ಟಿಲು ನಿಲ್ಲೋದಿಲ್ಲ, ಕೂಸಿನ ನಿದ್ದಿಗೂ ಭಂಗ ಇಲ್ಲ...." ಹಿಂದೂಸ್ಥಾನಿ ಸಂಗೀತದಂತೆ ಗಂಗೂಬಾಯಿಯವರಿಗೂ ಸಾವಿಲ್ಲ...


ಬಿಸ್ಮಿಲ್ಲಾ ಖಾನ್ ಜೊತೆ.....

ಹಿಂದೂಸ್ಥಾನಿ ಸಂಗೀತಕ್ಕೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿ ತಂದುಕೊಟ್ಟ ಶ್ರೇಯಸ್ಸು ಧಾರವಾಡ ನೆಲದ್ದು. ಭೀಮಸೇನ್ ಜೋಷಿ, ಪಂಡಿತ್ ಮಲ್ಲಿಕಾರ್ಜುನ್ ಮನ್ಸೂರ್, ಗಂಗೂಬಾಯಿ ಹಾನಗಲ್ ಇವರೆಲ್ಲ ಧಾರವಾಡ ನೆಲದಲ್ಲಿ ಅರಳಿ ಜಗತ್ತಿನಾದ್ಯಂತ ಹಿಂದೂಸ್ಥಾನಿ ಸಂಗೀತದ ಕಂಪನ್ನು ಹರಡಿದವರು.

ಪದ್ಮವಿಭೂಷಣ, ಪದ್ಮಭೂಷಣ ಮತ್ತು ಸಂಗೀತದ ಎಲ್ಲ ಪ್ರತಿಷ್ಠಿತ ಪ್ರಶಸ್ತಿಗಳನ್ನು ಗಳಿಸಿದ ಗಂಗೂಬಾಯಿಯವರಿಗೆ ಭಾರತರತ್ನ ಸಿಗಲಿಲ್ಲ, ಆದರೆ ಭೀಮಸೇನ ಜೋಷಿಯವರಿಗೆ ಭಾರತರತ್ನ ಪ್ರಶಸ್ತಿ ಬಂದಾಗ ಸಂಭ್ರಮಪಟ್ಟರು. 'ಯಾರ್‍ಯಾರ ನಶೀಬದಾಗ ಏನ್ ಇರತದ ಅದು ಬರ್ತದ....' ಎನ್ನುತ್ತಿದ್ದ ಗಂಗೂಬಾಯಿ ಹಾಸ್ಯಪ್ರಜ್ಞೆ ಉಳ್ಳವರೂ ಆಗಿದ್ದರು. 'ನನಗ ಯುನಿವರ್ಸಿಟಿಯೋರು ಡಾಕ್ಟರೇಟ್ ಕೊಟ್ಟಾಗ, ನನ್ನ ಮೊಮ್ಮಗ ಹೊರಬಾಗಿಲ ಮ್ಯಾಲ ಡಾ. ಗಂಗೂಬಾಯಿ ಹಾನಗಲ್ ಅಂತಾ ಬರ್ದ, ಮಂದಿ ಔಷಧಕ್ಕಂತ ನನ್ನತ್ರ ಬರಾಕ ಶುರು ಮಾಡಿದ್ರು. ಆಗ ನಾನು ಅಂತಾ ಡಾಕ್ಟರು ಅಲ್ಲ ಅಂದಾಗ ಅವ್ರು ನೀವ್ರೂ ರಾಜಕುಮಾರನಂತಹ ಡಾಕ್ಟರ್ ಏನು ಅಂದ್ರು.... ಎಷ್ಟು ಟೈಟಲ್ ಸಿಕ್ರೂ ಸಂಗೀತ ಕಾರ್ಯಕ್ರಮ ಸರಿ ನಡದ್ರ ನಮ್ಮ ಉದ್ದೇಶ ಸಫಲ ಆದಂಗ...." ಎಂದು ಇತ್ತೀಚೆಗೆ 'ವಿಕ್ರಾಂತ'ಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಅವರು ಭಾರತರತ್ನವನ್ನು ಮೀರಿದ ಎತ್ತರ ತಲುಪಿದ್ದರು.

ಅಬ್ದುಲ್ ಕರೀಮಖಾನ್‌ರಿಂದ ಪ್ರಭಾವಿತರಾಗಿದ್ದ ಗಂಗೂಬಾಯಿ, ಕರೀಮ್‌ಖಾನ್‌ರ ಶಿಷ್ಯ ಸವಾಯಿ ಗಂಧರ್ವರಲ್ಲಿ ಸಂಗೀತ ಕಲಿತರು. ತಿರಸ್ಕೃತ ಸಮುದಾಯಗಳಲ್ಲಿ ಒಂದಾದ ಬೆಸ್ತರ ಕುಟುಂಬದಲ್ಲಿ ಜನಿಸಿದ ಗಂಗೂಬಾಯಿಗೆ ತಾಯಿ ಅಂಬಾಬಾಯಿಯೇ ಸಂಗೀತದ ಮೊದಲ ಗುರು. ಮುಂದೆ ಕುಂದಗೋಳದಲ್ಲಿ ಕಿರಾನ-ಘರಾನ ಪ್ರಕಾರದಲ್ಲಿ ಖ್ಯಾತರಾಗಿದ್ದ ಸವಾಯಿ ಗಂಧರ್ವರ ಬಳಿ ಸಂಗೀತ ಕಲಿತು ಪರಿಪಕ್ವವಾದರು. ಆರಂಭದಲ್ಲಿ ಆಕಾಶವಾಣಿ ಕಲಾವಿದೆಯಾಗಿದ್ದ ಅವರು ತಮ್ಮ ಪ್ರತಿಭೆಯಿಂದಾಗಿ ದೇಶದೆಲ್ಲೆಡೆ ಕಾಯಕ್ರಮ ನೀಡಿದರಲ್ಲದೇ, ಒಂಭತ್ತು ದೇಶಗಳಲ್ಲಿ ಕಾರ್ಯಕ್ರಮ ನೀಡಿದ ಹೆಗ್ಗಳಿಕೆ ಪಡೆದರು.

ಇಂತಹ ಮೇರುಪ್ರತಿಭೆ ಸದ್ಯ ಸ್ವರ ನಿಲ್ಲಿಸಿದೆ. ಆದರೆ ಅವರ ಕೊಡುಗೆಯಿಂದಾಗಿ ಅವರು ಸದಾ ಗಂಗಾಲಹರಿಯಾಗಿ ನಮ್ಮೊಂದಿಗಿರುತ್ತಾರೆ.

ಆದರೆ ಬೇಸರದಿಂದಲೇ ಇಲ್ಲೊಂದು ವಿಷಯವನ್ನು ಪ್ರಸ್ತಾಪಿಸಬೇಕಿದೆ. ಅದನ್ನು ಬೇಕಾದರೆ ಅಪಸ್ವರ ಎನ್ನಿ. ಆದರೂ ಅದನ್ನು ಈ ಹೊತ್ತಲ್ಲಿ ದಾಖಲಿಸಬೇಕಿದೆ.

ಈ ದೇಶದ ಸಂಗೀತ ಕಲಾವಿದರನ್ನೊಳಗೊಂಡಂತೆ ಎಲ್ಲ ಕಲಾವಿದರು ಜಾತಿ, ಧರ್ಮ, ಭಾಷೆಗಳ ಗಡಿ ದಾಟಿ ಬೆಳೆದವರು. ಗಂಗೂಬಾಯಿಯೂ ಹಾಗೇ ಇದ್ದರು. ಈ ನೆಲದಲ್ಲಿ ಹಿಂದೂ ಸಂಗೀತಗಾರರ ಬಳಿ ಮುಸ್ಲಿಮರು, ಮುಸ್ಲಿಮ್ ವಿದ್ವಾಂಸರ ಬಳಿ ಹಿಂದೂ ಶಿಷ್ಯರು ಸಂಗೀತ ಕಲಿತ ಸೌಹಾರ್ದಮಯ ಗುರು-ಶಿಷ್ಯ ಪರಂಪರೆಯಿದೆ. ಗಂಗೂಬಾಯಿ, ಬಿಸ್ಮಿಲ್ಲಾಖಾನ್ ಅಪ್ಪಿಗೊಂಡು ಸಂಭ್ರಮಿಸುವ ಚಿತ್ರ ನೋಡುವುದೇ ಚೆಂದ. ಅದು ಸೌಹಾರ್ದ ಸಂಗೀತದ ಸಂಕೇತ.

ಆದರೆ ಕಳೆದ ಎರಡು ದಶಕಗಳಿಂದ ಗಂಗೂಬಾಯಿ ಹಿಂದೂತ್ವ ವಾದಿಗಳ ಕಡೆ ವಾಲಿದರೆ ಎಂಬ ಸಂಶಯ ಉಂಟಾಗುತ್ತದೆ. ಹುಬ್ಬಳ್ಳಿಗೆ ಬಂದು ಈದ್ಗಾ ಮೈದಾನ ವಿವಾದವನ್ನು ಕೆದಕಿ ಇಡೀ ಹುಬ್ಬಳ್ಳಿಗೆ ಬೆಂಕಿ ಹಚ್ಚಿ ಅಮಾಯಕರ ಬಲಿ ತೆಗೆದುಕೊಂಡ ಮನುಷ್ಯ ದ್ವೇಷಿ ಉಮಾಭಾರತಿ ಮತ್ತು ಇತರ ಆರ್.ಎಸ್.ಎಸ್. ನಾಯಕರು ಆ ಹೊತ್ತಲ್ಲಿ ತಂಗಿದ್ದು ಗಂಗೂಬಾಯಿಯವರ ಮನೆಯಲ್ಲಿ, ಇದನ್ನು ಗಂಗೂಬಾಯಿಯವರ ಮುಗ್ಧತೆ ಎನ್ನುವುದೋ? ಅಥವಾ ಪಕ್ಕಾ ಮತಾಂಧನಾಗಿರುವ, ಹುಬ್ಬಳ್ಳಿ-ಧಾರವಾಡದಲ್ಲಿ ಹಿಂದೂ ವಕೀಲರ ಸಂಘ ಕಟ್ಟಿದ ದುಷ್ಟ ಮೊಮ್ಮಗ ಮನೋಜ್ ಹಾನಗಲ್ ಅಜ್ಜಿಯ ಹಾದಿ ತಪ್ಪಿಸಿದ ಎಂದು ತರ್ಕಿಸುವುದೋ? ಸಂಗೀತ, ಸಾಹಿತ್ಯ ಕಲೆಗಳು ಸರ್ವಜನರ ಹಿತ ಬಯಸುವಂತವು. ಅವು ಜನರನ್ನು ಒಗ್ಗೂಡಿಸುವ ಜೀವಸೆಲೆಗಳು. ಆದರೂ ಆಗಾಗ ಈ ಪ್ರಕಾರಗಳನ್ನು ಬಳಸಿಕೊಂಡು ಜನರನ್ನು ಒಡೆಯುವ ಕೆಲಸವನ್ನು ಕೆಲವರು ಮಾಡುತ್ತಾರೆ ಎಂಬುದು ವಿಷಾದದ ವಿಷಯ. ಗಂಗೂಬಾಯಿಯವರೇನೂ ಸಾರ್ವಜನಿಕವಾಗಿ ಹಿಂದೂತ್ವದ ಪರ ನಿಲ್ಲಲಿಲ್ಲ, ಆದರೆ ಆಳದಲ್ಲೆಲ್ಲೋ ಅದಕ್ಕೆ ಸಹಮತವಿತ್ತು.

ಹಿಂದೊಮ್ಮೆ ಭಾರತದ ಒಬ್ಬ ಮುಸ್ಲಿಂ ಸರೋದ್ ವಾದಕ ಪಾಕಿಸ್ತಾನಕ್ಕೆ ಹೋಗಿ ನೆಲಸಿ, "ಭಾರತದಲ್ಲಿ ಮುಸ್ಲಿಂ ಕಲಾವಿದರನ್ನು ಶೋಷಣೆ ಮಾಡಲಾಗುತ್ತಿದೆ" ಎಂದಾಗ, ಸಂಗೀತದ ದೈತ್ಯ ಪ್ರತಿಭೆ ಅಮ್ಜದ್ ಅಲಿಖಾನ್ ಸೇರಿದಂತೆ ಭಾರತದ ಹಿಂದೂ ಮತ್ತು ಮುಸ್ಲಿಂ ಕಲಾವಿದರೆಲ್ಲ ಆ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. "ಈ ದೇಶದಲ್ಲಿ ಕಲೆಗೆ ಜಾತಿ, ಧರ್ಮವಿಲ್ಲ, ಇಲ್ಲಾರೂ ನಮ್ಮ ಧರ್ಮದ ಕಾರಣಕ್ಕೆ ನಮ್ಮನ್ನು ಕೀಳಾಗಿ ಕಂಡಿಲ್ಲ, ಜಾತಿ, ಧರ್ಮ ಮರೆತು ನಮ್ಮನ್ನೆಲ್ಲ ಅಪ್ಪಿಗೊಂಡಿದ್ದಾರೆ" ಎಂದು ಹೇಳಿದ್ದರು. ಬೇರೆ ಯಾವ ಸಂಗೀತ ಕಲಾವಿದರೂ ಸಂಕುಚಿತ ಕೋಮುವಾದಿಗಳತ್ತ ವಾಲಲಿಲ್ಲ, ಆದರೆ ಗಂಗೂಬಾಯಿಯವರಿಗೆ ಈ ಸಂಕುಚಿತತೆಯನ್ನು ಮೀರಿ ನಿಲ್ಲಲಾಗಲಿಲ್ಲವೆ ಎಂಬ ಪ್ರಶ್ನೆ ಕಾಡುತ್ತದೆ.

ಬ್ರಾಹ್ಮಣ, ಲಿಂಗಾಯತ ಜಾತಿಯ ಪ್ರಾಬಲ್ಯವಿದ್ದ ಜಾತಿ ಹಾಗೂ ಶ್ರೇಣಿಕೃತ ಸಮಾಜದಲ್ಲಿ ಬಾಲ್ಯದಲ್ಲಿ ಜಾತಿಯ ಕಾರಣಕ್ಕೆ ಗಂಗೂಬಾಯಿಯವರೇ ತಿರಸ್ಕೃತರಾಗಿದ್ದರು. ಆದರೆ ಅವನ್ನೆಲ್ಲ ಮೀರಿ ಅವರು ಬೆಳೆದು ನಿಂತರು. ಆದರೆ ಅಂತಿಮದಿನಗಳಲ್ಲಿ ಅವರು ಅವೇ ಶಕ್ತಿಗಳಿಗೆ ಶರಣಾಗಿಬಿಟ್ಟರಾ ಎಂಬ ಪ್ರಶ್ನೆಯೊಂದಿಗೇ, ಅವರ ಮಹಾನ್ ಪ್ರತಿಭೆಗೆ ಶ್ರದ್ಧಾಂಜಲಿ ಅರ್ಪಿಸೋಣ.

● ಮಲ್ಲಿ

ಒಂದು ಪತ್ರ

ಪಟ್ಟಾಭಿ ಕುರಿತ ಸುರೇಶ್ ಪತ್ರ: ಪ್ರತಿಕ್ರಿಯೆ

ಕೆ.ಪಿ. ಸುರೇಶ್ ಅವರು ಪ್ರೊ. ಪಟ್ಟಾಭಿ ಸೋಮಯಾಜಿಯವರ ಮೇಲೆ ಮಂಗಳೂರು ವಿಶ್ವವಿದ್ಯಾಲಯವು ಕೈಗೆತ್ತಿಕೊಂಡಿರುವ ವಿಚಾರಣೆಯ ಬಗ್ಗೆ ಉಲ್ಲೇಖಿಸುತ್ತಾ ಈ ಕುರಿತು ನಿರ್ಲಿಪ್ತವಾಗಿರುವ ಅಧ್ಯಾಪಕ ಸಮುದಾಯದ ಬಗ್ಗೆ ಬರೆದಿದ್ದಾರೆ. ಇದನ್ನು ತಮ್ಮ ಸಂಗಾತಿಯನ್ನು ಮಾಂಸಾಹಾರಿ ಪ್ರಾಣಿಯೊಂದು ಎಳೆದೊಯ್ಯುವಾಗ, ಮೂಕವಾಗಿ ನೋಡುವ ಸಸ್ಯಾಹಾರಿ ಪ್ರಾಣಿಗಳ ರೂಪಕದಲ್ಲಿ ವಿವರಿಸಿದ್ದಾರೆ. ಇದೇನು ಸರಿಯಾದ ರೂಪಕವಲ್ಲ, ಯಾಕೆಂದರೆ, ಅನೇಕ ಸಲ, ಹುಲ್ಲುಮೇಯುವ ಈ ಪ್ರಾಣಿಗಳು ತಮಗೆ ಮಾಂಸಾಹಾರಿ ಪ್ರಾಣಿಯನ್ನು ಎದುರಿಸಿ ಸೋಲಿಸಲು ಅಥವಾ ಅದರ ಬಾಯಿಯಿಂದ ಬೇಟೆಯನ್ನು ಬಿಡಿಸಲು ಆಗದೆ ಇದ್ದರೂ, ಮೈಮೇಲೆ ಬಿದ್ದು ಪ್ರತಿರೋಧ ಮಾಡುತ್ತವೆ. ಕೆಲವೊಮ್ಮೆ ಹಾಗೆ ಹಿಮ್ಮೆಟ್ಟಿಸಿಯೂ ಇವೆ. ಆದರೆ ಅಧ್ಯಾಪಕ ಸಮುದಾಯವಾಗಿ ನಮಗೆ ಅದನ್ನೂ ಮಾಡಲು ಆಗುತ್ತಿಲ್ಲವಲ್ಲ, ಪಟ್ಟಾಭಿಯವರ ಮೇಲೆ ಒತ್ತಡಗಳಿಂದ ವಿಶ್ವವಿದ್ಯಾಲಯವು ಕೈಗೆತ್ತಿಕೊಂಡಿರುವ ಈ ವಿಚಾರಣೆ ಬಗ್ಗೆ ಕಳವಳಗೊಂಡಿರುವ ಅನೇಕರು ವೈಯಕ್ತಿಕ ನೆಲೆಯಲ್ಲಿ ಪಟ್ಟಾಭಿಯವರಿಗೆ ನೈತಿಕ ಬೆಂಬಲವನ್ನೂ ಕೊಡುತ್ತಿರಬಹುದು; ಆದರೆ ಒಂದು ಸಮುದಾಯವಾಗಿ ಅಧ್ಯಾಪಕರು ಸಾರ್ವಜನಿಕ ಪ್ರತಿಕ್ರಿಯೆ ನೀಡಲು ಸಾಧ್ಯವಾಗಿಲ್ಲದಿರುವುದು ನಿಜ.

ಅಧ್ಯಾಪಕ ಸಮುದಾಯ ಎನ್ನುವುದು ಚಹರೆಯಿಲ್ಲದ ಒಂದು ಅಮೂರ್ತ ಕಲ್ಪನೆ. ಈ ಸಮುದಾಯದಲ್ಲಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿರುವವರೂ, ಸೋಮಾರಿಗಳೂ ಇರಬಹುದಾದಂತೆ, ತಮ್ಮ ಬದ್ಧತೆಯಿಂದ ವಿದ್ಯಾರ್ಥಿಗಳ ಮನಸ್ಸನ್ನು ರೂಪಿಸುವಲ್ಲಿ ತೊಡಗಿರುವ ಆದರ್ಶವಾದಿಗಳೂ ಇದ್ದಾರೆ. ಸಮಾಜದ ಸಮಸ್ಯೆಗಳಿಗೆ ತರಗತಿಗಳ ಆಚೆಕೂಡ ತುಡಿಯುತ್ತ ಬಂದಿರುವ ಅಧ್ಯಾಪಕರ ಪರಂಪರೆಯೇ ಕರ್ನಾಟಕದಲ್ಲಿದೆ. ಇದು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಭಾಷಣ ಮಾಡಿ ವಿವಿಯ ವಿಚಾರಣೆಗೆ ಒಳಗಾದ ಕುವೆಂಪು ಅವರಿಂದ ಆರಂಭವಾಗುತ್ತದೆ. ಸಮಾಜವನ್ನು ಆರೋಗ್ಯಕರವಾಗಿ ಕಟ್ಟುವ ದಿಸೆಯಲ್ಲಿ ತಮ್ಮ ಪ್ರತಿಕ್ರಿಯೆ ಮಾಡುತ್ತ, ವ್ಯವಸ್ಥೆಯನ್ನು ವಿಮರ್ಶೆ ಮಾಡುತ್ತ ಕ್ರಿಯಾಶೀಲವಾಗಿರುವ ಇಂತಹ ಅಧ್ಯಾಪಕರು ಯಾವ ಕಾಲದಲ್ಲೂ ಅಲ್ಪಸಂಖ್ಯೆಯಲ್ಲಷ್ಟೇ ಇರುತ್ತಾರೆ. ಮೈಸೂರಿನ ಕೆ. ರಾಮದಾಸ್ ಈ ಕ್ರಿಯಾಶೀಲತೆಯ ದೊಡ್ಡ ಸಂಕೇತವಾಗಿದ್ದರು. ಆದರೆ ಈಚೆಗೆ ಈ ಬಗೆಯ ಕ್ರಿಯಾಶೀಲತೆ ತೀವ್ರವಾಗಿ ಕ್ಷೀಣವಾಗುತ್ತಿದೆ. ಎಷ್ಟೆಂದರೆ, ತಮ್ಮ ಸಮುದಾಯದ ಬಗ್ಗೆ ಯಾರಾದರೂ ಕೆಟ್ಟದಾಗಿ ಆಡಿಕೊಂಡಾಗಲೂ ಪ್ರತಿಕ್ರಿಯಿಸದಷ್ಟು. ಉದಾಹರಣೆಗೆ, ಈಚೆಗೆ ಅಧ್ಯಾಪಕರು ಡ್ರಗ್ ಅಡಿಕ್ಟ್‌ಗಳಾಗಿದ್ದಾರೆ ಎಂದು ಒಬ್ಬ ಮಂತ್ರಿಗಳು ಸಾರ್ವಜನಿಕ ಹೇಳಿಕೆ ಮಾಡಿದರು. ಅದೊಂದು ಸ್ವೀಪಿಂಗ್ ಹೇಳಿಕೆಯಾಗಿತ್ತು, ಸಮುದಾಯವಾಗಿ ಅಧ್ಯಾಪಕರು ಪ್ರತಿಕ್ರಿಯಿಸಲಿಲ್ಲ, ನನಗೆ ತಿಳಿದಮಟ್ಟಿಗೆ ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದವರಲ್ಲಿ ಡಾ. ಆರ್.ಇಂದಿರಾ ಅವರು ಒಬ್ಬರು.

ಇಂತಹ ಸನ್ನಿವೇಶದಲ್ಲಿ ಸಮಾಜದ ರೈತರ, ಬಡವರ, ಬುಡಕಟ್ಟು ಜನರ, ಮಹಿಳೆಯರ ಜ್ವಲಂತ ಸಮಸ್ಯೆಗಳಿಗೆ ತುಡಿಯಲಾರದವರಿಗೆ, ಪಟ್ಟಾಭಿ ಪ್ರಕರಣ ಸಹಜವಾಗಿ ಒಂದು ನಾನ್‌ಇಶ್ಯೂ ಆಗಿದೆ. ನಿಜವಾಗಿಯೂ ಆಗಬೇಕಾದ್ದು ಒಬ್ಬ ಅಧ್ಯಾಪಕನನ್ನು ಅವನು ದಮನಿತ ಸಮುದಾಯದ ಪರವಾಗಿ ಇರುವ ಕಾರಣದಿಂದಲೇ ವ್ಯವಸ್ಥೆ ಬೇಟೆಯಾಡುವಾಗ, ಅಧ್ಯಾಪಕರು ಅದಕ್ಕೆ ಮಾತ್ರವಲ್ಲದೆ ತಮ್ಮ ಸುತ್ತಮುತ್ತಲಿನ ಎಲ್ಲ ಅನ್ಯಾಯಗಳಿಗೂ ಜೀವಂತಿಕೆಯಿಂದ ಪ್ರತಿಕ್ರಿಯಿಸುವುದಾಗಬೇಕು; ಹಾಗೆಯೇ ಸಾರ್ವಜನಿಕ ಬದುಕಿನ ಕಾಳಜಿಯುಳ್ಳ ಎಲ್ಲರಿಗೂ ಒಬ್ಬ ಅಧ್ಯಾಪಕನಿಗೆ ಕೊಡುವ ಕಿರುಕುಳವು, ಒಂದು ಸಾರ್ವಜನಿಕ ಹಿಂಸೆಯ ಸಂಗತಿ ಅನಿಸಬೇಕು. ಆದರೆ ಇವೆರಡೂ ಬಗೆಯ ಪ್ರತಿಕ್ರಿಯೆಗಳು ನಮ್ಮ ಸಮಾಜದಲ್ಲಿ ಕ್ಷೀಣಿಸುತ್ತಿವೆ. ಕೆಲವು ವರ್ಷಗಳ ಹಿಂದೆ ಮಧ್ಯಪ್ರದೇಶದ ಕಾಲೇಜಿನಲ್ಲಿ ಪ್ರೊ. ಸಭರವಾಲ್ ಅವರನ್ನು, ಎಬಿವಿಪಿಯವರು ಪ್ರಾಣಹೋಗುವಂತೆ ಚಚ್ಚಿಹಾಕಿದರು. ಅದರಲ್ಲಿ ಭಾಗಿಯಾದವರನ್ನು ಕೋರ್ಟು ಈಚೆಗೆ ನಿರಪರಾಧಿಗಳೆಂದು ಬಿಡುಗಡೆ ಮಾಡಿತು. ಇಂತಹದು ಕರ್ನಾಟಕದಲ್ಲಿಯೂ ಆಗುತ್ತಿದೆ. ಒಂದು ಸಮುದಾಯವಾಗಿ ನಾವೆಲ್ಲ ಇದನ್ನು ನಮ್ಮ ನಿರ್ಲಿಪ್ತತೆಯಿಂದ ಆಗಗೊಟ್ಟಿದ್ದೇವೆ.

ಸದ್ಯಕ್ಕೆ ಕರ್ನಾಟಕದಲ್ಲಿ ಎರಡು ಬಗೆಯ ಬೆಳವಣಿಗೆಗಳು ನಡೆದಿವೆ. 1. ಅನ್ಯಾಯದ ವಿರುದ್ಧ ದನಿಯೆತ್ತುವ ರೈತರ, ಚಳವಳಿಗಾರರ, ಅಧ್ಯಾಪಕರ, ಚಿಂತಕರ ಮೇಲೆ ವಿಚಾರಣೆ. 2. ನಾಡಿನ ಸಂಪತ್ತನ್ನು ದೋಚುವವರ, ಧರ್ಮದ ಹೆಸರಲ್ಲಿ ಕ್ರೌರ್ಯ ಸೃಷ್ಟಿಸುವವರ ಮೇಲಿದ್ದ ಕೇಸುಗಳನ್ನು ವಾಪಸ್ ತೆಗೆದುಕೊಳ್ಳುವಿಕೆ.

ಇವು ಕರ್ನಾಟಕದ ಮುಂದಿನ ದಿನಗಳು ಕರಾಳವಾಗಬಹುದಾದ ಸೂಚನೆಗಳು.


● ರಹಮತ್ ತರೀಕೆರೆ

ಕಾಕನ ಮದುವೆ!

ಚಿತ್ರವಿಚಿತ್ರ ಏಡವಟ್ಟುಗಳಿಗೆ ಸಿಲುಕಿ ಸುದ್ದಿಯಾದ ಪತ್ರಕರ್ತ ಾಲಕೃಷ್ಣ ಕಾಕತ್ಕರ್ ಮತ್ತೊಮ್ಮೆ ಮದುವೆಯಾಗುತ್ತಿದ್ದಾರೆ!

ಇದೇ ಜುಲೈ 26 ಕ್ಕೆ ಚಾಮರಾಜಪೇಟೆಯ ಚಂದ್ರಶೇಖರ ಾರತಿ ಕಲ್ಯಾಣ ಮಂಟಪದಲ್ಲಿ ಅವರ ಕೈ ಹಿಡಿಯಲಿರುವ ದೃಷ್ಟವಂತೆ(!) ಮಾಜಿ ಪತ್ರಕರ್ತೆ ಶಮಂತ.

ಬೆಂಗಳೂರಿನ ಪತ್ರಕರ್ತರ ವಲಯದಲ್ಲಿ ಕಾಕಾ ಎಂದೇ ರುದಾಂಕಿತ ಕಾಕತ್ಕರ್‌ಗೀಗ ಐವತ್ತೈದರ ಇಳಿವಯಸ್ಸು. ಅವರ ೈಹಿಡಿಯುವ ಶಮಂತರಿಗೂ ಐವತ್ತು ಮೀರಿದೆ. ಒಂದಲ್ಲಾ ಂದು ಪತ್ರಿಕೆಯಲ್ಲಿ ಅಪರೂಪಕ್ಕೊಂಬಂತೆ ಸಿನಿಮಾ ಚುಟುಕುಗಳನ್ನು ರೆಯುತ್ತಿದ್ದ ಹಳೇ ಲೆಮಾರಿನ ಪತ್ರಕರ್ತೆ ಮಂತ ಯಾವುದೋ ಕಾಲಕ್ಕೆ ಾಕತ್ಕರ್ ಹೋದ್ಯೋಗಿಯಾಗಿದ್ದರಂತೆ. ತ್ನಿ ರಶ್ಮಿ ವಿಷ ಕುಡಿದು ತ್ಮಹತ್ಯೆ ಮಾಡಿಕೊಂಡ ಂತರ ಕೆಲಕಾಲ ಂಟಿಯಾಗಿದ್ದ ಕಾಕತ್ಕರ್ ಮ್ಮ ಹಳೇ ಗೆಳತಿಯನ್ನು ಳಿವಯಸ್ಸಿನಲ್ಲಿ ುದುವೆಯಾಗುತ್ತಿದ್ದಾರೆ. ಪ್ರೆಸ್ ಬ್, ಸಿನಿಮಾ ಪತ್ರಕರ್ತರ ಲಯಕ್ಕಿದು ನಿಜಕ್ಕೂ ಂಬಲಾಗದ ವಿಚಿತ್ರ ಸುದ್ದಿ. ರ ಇತ್ತೀಚಿನ ತನಕ ಾಕತ್ಕರ್‌ರನ್ನು ಬಲ್ಲ ತಿಯೊಬ್ಬರಿಗೂ ಇದು ಅಚ್ಚರಿಯೇ ಹೊರತು ಅರ್ಥ ೋಚರಿಸುತ್ತಿಲ್ಲ.


ಕಾಕತ್ಕರ್

ಕಾಕತ್ಕರ್ ಎಂಬ ಪತ್ರಕರ್ತ ಮೊದಲ ಬಾರಿಗೆ ಹೊರಜಗತ್ತಿಗೆ ಬೆಳಕಿಗೆ ಬಂದಿದ್ದು ಉದಯ ಟಿವಿಯ ಕ್ರೈಂ ಸ್ಟೋರಿಯಿಂದ. ತಮ್ಮ ವಿಶಿಷ್ಟ ಕಂಠದಲ್ಲಿ ಕಾಕತ್ಕರ್ ಹೊಡೆಯುತ್ತಿದ್ದ ಡೈಲಾಗೇ ಕ್ರೈಂ ಸ್ಟೋರಿಯನ್ನು ಜನಪ್ರಿಯಗೊಳಿಸಿತ್ತು. ಕೇವಲ ಕಂಠದಿಂದ ಯಾವುದೇ ಟಿವಿ ಕಾರ್ಯಕ್ರಮ ಹೆಚ್ಚು ಬಾಳಿಕೆ ಬಾರದು ಎಂಬ ಸತ್ಯ ಅರ್ಥವಾಗುವ ಹೊತ್ತಿಗೆ ಸ್ವತಃ ಕಾಕತ್ಕರ್ ಸುದ್ದಿಯಾಗತೊಡಗಿದ್ದರು.

ಒಮ್ಮೆ ಬೆಳ್ಳಂಬೆಳಿಗ್ಗೆಯೇ ಕಂಠಮಟ್ಟ ಕುಡಿದು ಕಾಕತ್ಕರ್ ತಮ್ಮ ಡ್ರೈವರ್ ಮತ್ತು ಮನೆಕೆಲಸದವನ ಮೇಲೆ ಗುಂಡು ಹಾರಿಸಿ ಜೈಲುಪಾಲಾದರು. ಅದು ತಣ್ಣಗಾಗುವ ಹೊತ್ತಿಗೆ ಅವರ ಪತ್ನಿ ರಶ್ಮಿಯೇ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡರು. ಕಾಕತ್ಕರ್ ಈ ಎರಡೂ ದುರಂತಗಳಿಂದ ಹೇಗೋ ಪಾರಾದರಾದರೂ ಬದಲಾಗಲಿಲ್ಲ. ಬೆಳ್ಳಂಬೆಳಿಗ್ಗೆ ಕುಡಿದು ಕಂಡಕಂಡವರ ಮೇಲೆ ಕುಸ್ತಿಗೆ ಬೀಳುವ ಚಾಳಿ ಬಿಡಲೇ ಇಲ್ಲ. ಹೀಗೆ ಕುಡಿತ ವಿಪರೀತಕ್ಕೆ ಹೋಗಿ ದೇಹ ಮತ್ತು ಮನಸ್ಸಿನ ಆರೋಗ್ಯವನ್ನೆಲ್ಲ ಹಾಳು ಮಾಡಿಕೊಂಡ ಕಾಕತ್ಕರ್ ಅವರ ಕ್ರೈಂ ಸ್ಟೋರಿಗೆ ಪ್ರೇಕ್ಷಕರೆ ಇಲ್ಲದಂತಾಯ್ತು. ವಿಧಿಯಿಲ್ಲದೇ ಕ್ರೈಂ ಸ್ಟೋರಿಯನ್ನು ನಿಲ್ಲಿಸಿದ ಉದಯ ಟಿವಿ ಮಾಲೀಕರು 'ಅಯ್ಯೋಪಾಪ' ಎಂದು ಕಾಕನಿಗೆ ಮತ್ತೊಂದು ಛಾನ್ಸ್ ಕೊಟ್ಟಿದ್ದು 'ಅಗೋಚರ' ಎಂಬ ಮತ್ತೊಂದು ಧಾರಾವಾಹಿಗೆ ಕಾರಣವಾಯ್ತು.

'ವಾಮಾಚಾರ' ಕುರಿತ ಕಪೋಲಕಲ್ಪಿತ ಅಗೋಚರ ಎಂಬ ಧಾರಾವಾಹಿ ಶುರುವಾಗುವುದರೊಂದಿಗೆ ಕಾಕನ್ ಬದುಕಿನ ದಿಕ್ಕೇ ಬದಲಾಯ್ತು. ಕಾಕತ್ಕರ್ ತಮಿಳುನಾಡಿನ ಯಾವುದೋ ಊರೊಂದರ ಮಂತ್ರವಾದಿಯ ಸಂಗಕ್ಕೆ ಬಿದ್ದರು. ಆತ ಮಂತ್ರಿಸಿ ಕೊಟ್ಟ ಮೂಳೆಯನ್ನು ತಂದು ತಮ್ಮ ಮಂಚಕ್ಕೆ ಕಟ್ಟಿಕೊಂಡರು. ತಲೆದಿಂಬಿನ ಕೆಳಗೆ ಮಂತ್ರಿಸಿದ ತಾಯಿತ ಇಟ್ಟುಕೊಂಡು ಮಲಗುತ್ತಿದ್ದರು.


ಶಮಂತ


ಅದು ಪ್ರೇತಭ್ರಾಂತಿ. ಮನೆ ಕೆಲಸದಾಕೆ ಅನ್ನ ಮಾಡಿಟ್ಟಿದ್ದರೆ ಪಾತ್ರೆ ಎತ್ತಿ ಗೋಡೆಗೆ ಕುಕ್ಕುವುದು ಸಾರಿನ ಪಾತ್ರೆ ತೆಗೆದು ಬಿಸಾಕುವುದು, ನಡುರಾತ್ರಿ ಇದ್ದಕ್ಕಿದ್ದಂತೆ ಎದ್ದು ಕಿರುಚುವುದು, ಅರೆನಿದ್ದೆಯಲ್ಲೇ ಎದ್ದು 'ಅಯ್ಯೋ ಕಾಪಾಡಿ' ಎಂದು ರಸ್ತೆಗೆ ಓಡುವುದು, ಇದ್ದಕ್ಕಿದ್ದಂತೆ ವಾಚ್‌ಮನ್‌ನ ಬಂದೂಕು ಕಿತ್ತುಕೊಂಡು ಗೋಡೆಗೆ ಗುಂಡು ಹಾರಿಸುವುದು, ಕೆಲವೊಮ್ಮೆ ರಾತ್ರಿಯಿಡೀ ರಸ್ತೆಯಲ್ಲೇ ಕಾರು ನಿಲ್ಲಿಸಿಕೊಂಡು ನಿದ್ದೆ ಮಾಡುವುದು;

ಕಾಕನ ಇತ್ತೀಚಿನ ಮನಸ್ಥಿತಿಯ ಪ್ರತೀಕದಂತಿತ್ತು. ಇಂಥಾ ಸ್ಥಿತಿಯಲ್ಲಿ ಕಾಕತ್ಕರ್ ಮತ್ತೆ ಮದುವೆಯಾಗುತ್ತಿದ್ದಾರೆ.

ಏನೇ ಆಗಲಿ, ನವದಂಪತಿಗಳಿಗೆ ಶುಭವಾಗಲಿ.


ಕೆಎಂಎಫ್‌ಗೆ ರಾಮಲಿಂಗೇಗೌಡನ ದೋಖಾ

ನಾಡಿನ ಲಕ್ಷಾಂತರ ಹಾಲು ಉತ್ಪಾದಕರು ಕಟ್ಟಿ ದ ಹೆಮ್ಮೆಯ ಸಂಸ್ಥೆಯಾದ ಕೆಎಂಎಫ್ ಮುಂದಿನ ಳಲ್ಲಿ ದಗಾಕೋರರ, ತಲೆಹಿಡುಕರ ಆಸ್ತಿಯಾಗಿ ಗುವುದರಲ್ಲಿ ಯಾವ ಅನುಮಾನಗಳೂ ಇರಬೇಕಿಲ್ಲ. ಟ್ಟನಲ್ಲಿ ಬಳ್ಳಾರಿಯ ಗಣಿ ರೆಡ್ಡಿಗಳು ಭೂಮಿಕೆ ಡಿಸುತ್ತಿದ್ದರೆ, ಕೆಎಂಎಫ್‌ನೊಳಗೇ ಇದ್ದುಕೊಂಡು ು ವರ್ಷಗಳ ಹಿಂದೆ ಅದರ ಎಂ.ಡಿ.ಯಾಗಿರುವ ್. ರಾಮಲಿಂಗೇಗೌಡನೆಂಬ ಮಹಾ ಖದೀಮ ಗಲೇ ಮುನ್ನುಡಿ ಬರೆದಾಗಿದೆ. ದೇಶದ ಮೂರನೇ ೊಡ್ಡ ಡೈರಿ ಸಹಕಾರಿ ಎನ್ನಿಸಿಕೊಂಡಿರುವ ಕೆಎಂಎಫ್‌ನ ತಿ 2007 ರ ಏಪ್ರಿಲ್ 30 ರಂದು, ಯಾವ ಯಲ್ಲಿ ಈ ರಾಮಲಿಂಗೇಗೌಡನೆಂಬ ಬಕಾಸುರ ಶಕ ಸ್ಥಾನ ವಹಿಸಿಕೊಂಡನೋ ಅಂದೇ ಶುರುವಾಗಿ ಗಿದೆ. ಈ ಕಳೆದೆರಡು ವರ್ಷಗಳಲ್ಲಿ ಕೆಎಂಎಫ್‌ನಲ್ಲಿ ಲಿಂಗೇಗೌಡ ನಡೆಸಿರುವ ಭ್ರಷ್ಟಾಚಾರ, ಅವ್ಯವಹಾರ, ಗಳು ಅದಕ್ಕೆ ಸಾಕ್ಷಿಯಾಗಿವೆ.


ರಾಮಲಿಂಗೇಗೌಡ

ಗೌಡ-ರೆಡ್ಡಿ, ಖದೀಮ ಜೋಡಿ

ಕೆಎಂಎಫ್ ವರ್ಷಂಪ್ರತಿ ಏನಿಲ್ಲವೆಂದರೂ ಐದೂವರೆ ಮೆಟ್ರಿಕ್ ಟನ್‌ಗಳಷ್ಟು ಹಾಲಿನ ಪುಡಿಯನ್ನು, ಸಾವಿರ ಮೆಟ್ರಿಕ್ ಟನ್‌ಗಳಷ್ಟು ಬೆಣ್ಣೆ ಮತ್ತು ನ್ನು ಉತ್ಪಾದಿಸುತ್ತದೆ. ಇವುಗಳ ಮಾರಾಟದಿಂದ ದ ಆದಾಯವೂ ಬೃಹತ್ತಾಗಿದೆ. 2007-08 ರಲ್ಲಿ ಫ್ 5400 ಮೆಟ್ರಿಕ್ ಟನ್‌ಗಳಷ್ಟು ಹಾಲಿನ ಯನ್ನು ಮಾರಿದ್ದರೆ, 2008 ರ ಏಪ್ರಿಲ್‌ನಿಂದ ಬರ್ ಒಳಗೆ ಎರಡೂವರೆ ಸಾವಿರ ಕ್‌ಟನ್ ಹಾಲಿನಪುಡಿಯನ್ನು ತ್ತು, ಆದರೆ ಈ ಮಾರಾಟ ಾಟದಲ್ಲಿ ರಾಮಲಿಂಗೇಗೌಡ ಬಾಚಿ ುವುದು ಕೋಟ್ಯಂತರ ರೂಪಾಯಿ ತನ್ನ ಹರಾಮಿ ಕೆಲಸಗಳಿಗೆ ೂಲವಾಗಲಿ ಎಂದೇ ಹಾಸು ಅಧಿ ಬಂದಕೂಡಲೇ ಅವನು ಮಾಡಿದ ಲ ಕೆಲಸ ಏನು ಗೊತ್ತೆ? ಅದ್ವೂ , ಹಾಲುತ್ಪನ್ನಗಳ ಬೆಲೆ ನಿರ್ಧಾರಿ ಅಸ್ತಿತ್ವದಲ್ಲಿದ್ದ ಒಂದು ವಿಶೇಷ ಯ ವಿಸರ್ಜನೆ. ಈ ಸಮಿತಿಯಲ್ಲಿ ಫ್ ಕೇಂದ್ರ ಕಚೇರಿಯ ಮೂವರು ಅಧಿಕಾರಿಗಳು, ಒಕ್ಕೂಟಗಳ ನಾಲ್ಕು ಎಂಡಿಗಳೂ ಇದ್ದು ಇದೀ ಟ ಪ್ರಕ್ರಿಯೆ ಬಹುಮಟ್ಟಿಗೆ ಪಾರದರ್ಶಕವಾಗಿ ುತ್ತಿತ್ತು, ಅದನ್ನು ರದ್ದುಪಡಿಸಿದ ಮೇಲೆ ಆನೆ ನಡೆದಿದ್ದೇ ಹಾದಿ ಎಂಬಂತಾಗಿ ಪ್ರತಿಯೊಂದನ್ನೂ ತಾನೇ ನಿಯಂತ್ರಿಸತೊಡಗಿದ ರಾಮಲಿಂಗೇಗೌಡ ಹಣಕಾಸು ನಿರ್ದೇಶಕ ನರಸಿಂಹರೆಡ್ಡಿಯನ್ನೂ ತನ್ನ ಹಲ್ಕಟ್ ಕೆಲಸಗಳಿಗೆ ಜೊತೆಗಾರನಾಗಿಟ್ಟುಕೊಂಡ. ಹಾಲುತ್ಪನ್ನಗಳಿಗೆ ಏನು ಬೆಲೆ ನಿಗದಿ ಮಾಡಬೇಕು, ಯಾರಿಗೆ ಮಾರಬೇಕು ಮುಂತಾದ ಎಲ್ಲವನ್ನೂ ಈ ಜೋಡಿ ಖದೀಮರೇ ನಿರ್ಧರಿಸಲಾರಂಭಿಸಿದರು.



ಖಾಸಗಿಯವರೊಂದಿಗೆ ಡೀಲು

ಕೆಎಂಎಫ್‌ನ ಹಾಲುತ್ಪನ್ನಗಳನ್ನು ದೇಶದ ಬೇರೆ ಬೇರೆ ರಾಜ್ಯಗಳ ಕೆಲ ಡೈರಿ ಸಹಕಾರಿಗಳಿಗೂ, ಖಾಸಗಿ ಡೈರಿಗಳಿಗೂ ಮಾರಲಾಗುತ್ತದೆ. ಹೀಗೆ ಮಾರುವಾಗ ಸಾಮಾನ್ಯರಿಗೂ ಇರುವ ಕಾಮನ್‌ಸೆನ್ಸ್ ಏನೆಂದರೆ, ಹಾಲುತ್ಪನ್ನಗಳನ್ನು ಖಾಸಗಿಯವರಿಗೆ ಮಾರುವಾಗ ಸಹಕಾರಿಗಳಿಗೆ ಮಾರಿದ ಬೆಲೆಗಿಂತಲೂ ತುಸು ಹೆಚ್ಚು ಬೆಲೆಗೆ ಮಾರುವುದು. ಅದಿಲ್ಲದಿದ್ದಲ್ಲಿ ಅದೇ ಬೆಲೆಗೆ ಮಾರುವುದು ಆದರೆ, ರಾಮಲಿಂಗೇಗೌಡ ಮಾಡಿರುವುದು ಇದಕ್ಕೆ ತದ್ವಿರುದ್ಧ ಉದಾಹರಣೆಗೆ 2008 ರ ಜನವರಿಯಿಂದ ಸೆಪ್ಟೆಂಬರ್ ಒಳಗೆ ದೆಹಲಿಯ ಮೆಸರ್ಸ್ ಓಲಂ ಎಕ್ಸ್‌ಪೋರ್ಟ್ ಪ್ರೈವೇಟ್ ಲಿ. ಹಾಗೂ ಮೆಸರ್ಸ್ ಎಸ್ ಪ್ರೈ.ಲಿ.ಗಳಿಗೆ 955 ಮೆಟ್ರಿಕ್‌ಟನ್ ಹಾಲುತ್ಪನ್ನಗಳನ್ನು ಮಾರಲಾಗಿದೆ. ಅದಕ್ಕೆ ಕೆಜಿ ಒಂದಕ್ಕೆ 120 ರಿಂದ 140 ರೂ.ಗಳಿಗೆ ಮಾರಲಾಗಿದೆ. ಇದೇ ಅವಧಿಯಲ್ಲಿ ಇತರೆ ಸಹಕಾರಿ ಡೈರಿಗಳಿಗೆ ಮಾರಲಾದ ಹಾಲುತ್ಪನ್ನಗಳಿಗೇ ಖಾಸಗಿಯವರಿಗಿಂತಲೂ ನಾಲ್ಕೈದು ರೂ.ಗಳಷ್ಟು ಹೆಚ್ಚು ಬೆಲೆಗೆ ಮಾರಲಾಗಿದೆ. ಇದರಿಂದ ಕೆಎಂಎಫ್‌ಗೆ ಹತ್ತಾರು ಲಕ್ಷ ರೂ.ಗಳ ನಷ್ಟವಾಗುತ್ತದೆ. ಹೀಗೆ ಕೆಎಂಎಫ್‌ಗೆ ಆ ಮೂಲಕ ಹಾಲುತ್ಪಾದಕರಿಗೆ ದೋಖಾ ಬಗೆಯುತ್ತಿರುವ ರಾಮಲಿಂಗೇಗೌಡ ಖಾಸಗಿಯವರಿಂದ ಪಡೆದ ಕಿಕ್‌ಬ್ಯಾಕ್ ಎಷ್ಟು ಎಂದು ತನಿಖೆಯಾಗಬೇಕಿದೆ.

ಈ ರೀತಿ ನೇರವಾಗಿ ಕೆಎಂಎಫ್ ಹಾಲುತ್ಪನ್ನ ವಹಿವಾಟಿನಲ್ಲಿ ಲೂಟಿ ಹೊಡೆಯುತ್ತಿರುವುದರ ಜೊತೆಗೆ, ಕೆಎಂಎಫ್‌ನ ನೇರ ಅಧೀನದಲ್ಲಿರದೇ ಖಾಸಗಿ ಪದ್ಧತಿಯಲ್ಲಿ ಕಾರ್ಯ ನಿರ್ವಹಿಸುವ ಡೆಂಪೋ ಡೈರಿ ಎಂಬ ಘಟಕಕ್ಕೂ ಇವನೇ ಅಧ್ಯಕ್ಷನಾಗಿದ್ದಾನೆ. ಅದರಲ್ಲೂ ಇದೇ ರಾಮಲಿಂಗೇಗೌಡ, ನರಸಿಂಹರೆಡ್ಡಿ ವಂಚಕ ಜೋಡಿಗಳು ಸೇರಿಕೊಂಡು ಹಾಲು ಸ್ವೀಕರಣೆ, ಮಾರಾಟ ಹಾಗೂ ಹಾಲುತ್ಪನ್ನ ವಹಿವಾಟಿನಲ್ಲಿ ಭಾರಿ ಗೋಲ್‌ಮಾಲ್ ನಡೆಸುತ್ತ ಲಕ್ಷಾಂತರ ರೂಪಾಯಿ ಮೇಯುತ್ತಿದ್ದಾರೆ. ಕೆಎಂಎಫ್ ಒಕ್ಕೂಟಗಳಿಗೆ ಹಾಲಿನ ಪುಡಿ ಪರಿವರ್ತನೆಗೆ ಲೀಟರಿಗೆ 20 ರೂ. ವಿಧಿಸಿದರೆ ಖಾಸಗಿ ಸಿದ್ಧಾರ್ಥ ಡೈರಿ ಗೋವಾಕ್ಕೆ ಅಕ್ರಮವಾಗಿ 2 ರೂ. ವಿಶೇಷ ರಿಯಾಯ್ತಿ ನೀಡಲಾಗುತ್ತಿದೆ. ಹಾಗೆಯೇ ಕೆಎಂಎಫ್ ಒಕ್ಕೂಟಗಳಿಗೆ ಹಾಲಿನ ಪುಡಿಯಲ್ಲಿ ಶೇ. 5ರಷ್ಟು ನಷ್ಟ ತೋರಿಸಿದರೆ, ಖಾಸಗಿ ಡೈರಿಗೆ ಕೇವಲ ಶೇ. 2 ರಷ್ಟು ತೋರಿಸುತ್ತಾರೆಂದರೆ ಇವರ ತಲೆಹಿಡುಕ ಎಷ್ಟಿರಬೇಕು ನೋಡಿ.


ಎಸಿ ಕಾರು, ಫೈವ್ ಸ್ಟಾರು

ಅತ್ತ ರಾಜ್ಯದ ಹಳ್ಳಿ ಮೂಲೆಗಳಲ್ಲಿ ನಮ್ಮ ರೈತರು, ಹಾಲುತ್ಪಾದಕರು ರಾಸುಗಳ ಸಗಣಿ ಬಳಿದು, ಹಾಲು ಕರೆದು ಕೆಎಂಎಫ್‌ನ್ನು ಬೆಳೆಸಲು ಶ್ರಮಿಸುತ್ತಿದ್ದರೆ. ಕೆಎಂಎಫ್‌ನ ಕೇಂದ್ರ ಕಚೇರಿಯಲ್ಲಿ ಈ ಎಂಡಿ ಸಾಹೇಬರ ಶೋಕಿ ಮಾತ್ರ ಹೇಳುವಂತಿಲ್ಲ. ಈ ಖದೀಮ ಇಲ್ಲಿ ನಡೆಸುತ್ತಿರುವ ಐಷಾರಾಮಿತನವನ್ನು ರೈತರು ನೋಡಿದರೆ ಯಾತರಲ್ಲಿ ಹೊಡೀತಾರೋ ಗೊತ್ತಿಲ್ಲ. ಈ ರಾಮಲಿಂಗೇಗೌಡ 'ಮಿತವ್ಯಯದ' ಬಗ್ಗೆ ಗಂಟೆಗಟ್ಟಲೆ ಮಾತಾಡುವುದು ನೋಡಿದರೆ ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತಾಗುತ್ತದೆ. ರಾಮಲಿಂಗೇಗೌಡನಿಗೆ ಕೇಂದ್ರ ಕಚೇರಿಯಲ್ಲಿ ಹವಾನಿಯಂತ್ರಿತ ಕೊಠಡಿಗಳು, 40 ಇಂಚು ಪ್ಲಾಸ್ಮಾ, ಎಲ್‌ಎಸ್‌ಡಿಟಿವಿ ಇಲ್ಲದಿದ್ದರೆ ಒಳಬಂದು ಕೂರಲು ಆಗುವುದಿಲ್ಲವೆಂದು ಈ ವ್ಯವಸ್ಥೆ ಮಾಡಿಸಿಕೊಂಡಿದ್ದಾನೆ. ಕಾರುಗಳೇ ಓಡಾಡಲು ಹವಾನಿಯಂತ್ರಿತ ಕಾರುಗಳು. ಅದೂ ಇದೂ ನೆಪವೊಡ್ಡಿ ವಾರಕ್ಕೊಮ್ಮೆಯಾದರೂ ದುಬಾರಿ ವಿಮಾನ ಪ್ರಯಾಣ. ಹೋದಲ್ಲೆಲ್ಲಾ ಸಾಹೇಬರಿಗೆ ಫೈವ್‌ಸ್ಟಾರ್ ಹೋಟೆಲ್‌ಗಳಲ್ಲೇ ವಾಸ್ತವ್ಯ. ಪಾಪ ಬಿಳಿ ಪಂಚೆಯುಟ್ಟು ರಾಗಿಮುದ್ದೆ ಸೊಪ್ಪು ಸಾರು ತಿಂದು ತೃಪ್ತರಾಗುವ ಕೆಎಂಎಫ್ ಅಧ್ಯಕ್ಷ ರೇವಣ್ಣನವರಿಗೆ ಇವೆಲ್ಲಾ ತಿಳಿಯಲೇ ಇಲ್ಲ.



ವಂಚಕ ರಾಮಲಿಂಗೇಗೌಡ, ಕೆಎಂಎಫ್‌ನ ಹಲವಾರು ಸಿವಿಲ್ ಕಾಮಗಾರಿಗಳಲ್ಲಿ, ಮಾರುಕಟ್ಟೆ ಸರ್ವೆ ನೆಪದಲ್ಲಿ, ಪೌಚ್ ಫಿಲಂ ಪ್ಲಾಂಟ್ ಅಭಿವೃದ್ಧಿ ಹೆಸರಲ್ಲಿ, ಕೆಎಂಎಫ್‌ನ ಖರೀದಿ ವ್ಯವಹಾರದಲ್ಲಿ, ಡೀಲರ್‌ಗಳ ನೇಮಕಾತಿಯಲ್ಲಿ... ಹೀಗೆ ಎಲ್ಲೆಲ್ಲಿ ಸಾಧ್ಯವೋ, ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಬಾಚಿ ದೋಚುತ್ತಲೇ ಬಂದಿದ್ದಾನೆ. ಈ ಹಲಾಲುಕೋರನ ವಂಚಕ ಅವ್ಯವಹಾರಗಳು, ಅಕ್ರಮಗಳು, ರೇವಣ್ಣನಿಗೆ ತಡವಾಗಿ ಅರಿವಾಗಿ, ಇವನು ತನ್ನ ಹೆಸರಿಗೂ ಮಸಿಬಳಿಯುವುದನ್ನರಿತು ಕೂಡಲೇ ತನಿಖೆಗೆ ಸರ್ಕಾರವನ್ನು ರೇವಣ್ಣ ಒತ್ತಾಯಿಸುವಷ್ಟರಲ್ಲಿ ರಾಮಲಿಂಗೇಗೌಡ ಸರ್ಕಾರದಲ್ಲಿರುವ ಚೆಡ್ಡಿ ಯಡ್ಡಿ ರೆಡ್ಡಿಗಳಿಗಳೊಂದಿಗೆ ವ್ಯವಹಾರ ಕುದುರಿಸಿಕೊಂಡಿರುವುದರಿಂದ ಯಾವ ತನಿಖೆಯ ಭಯವೂ ಇಲ್ಲದೆ ಹಾಯಾಗಿದ್ದು ಮೇಯುವುದನ್ನು ಮುಂದುವರಿಸಿದ್ದಾನೆ.

ಕೂಡಲೇ ಕೆಎಂಎಫ್‌ನ ಒಳಿತನ್ನು ಬಯಸುವವರು, ಲೋಕಾಯುಕ್ತಾಧಿಕಾರಿಗಳು, ಕೆಎಂಎಫ್‌ನ್ನು ಕಟ್ಟಿ ಬೆಳೆಸಿದ ಜನರು ಎಚ್ಚೆತ್ತುಕೊಂಡರೆ ಸರಿ. ಇಲ್ಲದಿದ್ದಲ್ಲಿ ಈ ರಾಮಲಿಂಗೇಗೌಡ, ನರಸಿಂಹರೆಡ್ಡಿ ಕೆಎಂಎಫ್‌ನ್ನು ಹೂಳಲು ಗುಂಡಿ ತೋಡಿದರೆ, ರೆಡ್ಡಿಗಳು ಅದರ ಕತ್ತುಹಿಸುಕಿ ಅನಾಮತ್ತಾಗಿ ಎತ್ತಿ ಹಾಕಿ ಮಗ್ಗುಮುಚ್ಚಲು ಬಹಳ ಸಮಯ ಹಿಡಿಯಲಿಕ್ಕಿಲ್ಲ.



ಹೌಸಿಂಗ್ ಬೋರ್ಡ್– ಸಾವಿರ ಕೋಟಿಯ ಗೋಲ್‌ಮಾಲ್!

ಯಡ್ಡಿಯೇ ಸೂತ್ರಧಾರ

ಕೃಷ್ಣಯ್ಯ ಶೆಟ್ಟಿಯಂಥ ಸೈಟು ಬ್ರೋಕರನ ಕೈಗೆ ವಸತಿ ಖಾತೆ ಕೊಟ್ಟ ಮುಖ್ಯಮಂತ್ರಿ ಯಡ್ಡಿಯ ಮೂಲೋದ್ದೇಶ ಈಗ ರಟ್ಟಾಗುತ್ತಿದೆ.

ಮೈಸೂರಿನಲ್ಲಿ ಜೀಟ ದೇವೇಗೌಡನೆಂಬ ಹೌಸಿಂಗ್ ಬೋರ್ಡ್ ಅಧ್ಯಕ್ಷನ ಮುನ್ನೂರೈವತ್ತು ಕೋಟಿಯ ಭೂಖರೀದಿ ಕರ್ಮಕಾಂಡ, ಶಿಡ್ಲಘಟ್ಟದಲ್ಲಿ ಮಂತ್ರಿ ಕೃಷ್ಣಯ್ಯ ಶೆಟ್ಟಿಯ ಅಣ್ಣ ಶ್ರೀನಿವಾಸ ಶೆಟ್ಟಿಯ ಐನೂರು ಕೋಟಿ ರೂಪಾಯಿಗಳ ಬ್ರೋಕರಿಕೆ ಹಗರಣ ಮತ್ತು ಡೆನಿಸ್ ಪಿಂಟೋ ಎಂಬ ಮತ್ತೊಬ್ಬ ಭೂಕಂಟಕ ಹುಟ್ಟುಹಾಕಿದ ನೂರೈವತ್ತು ಕೋಟಿಯ ಜಮೀನು ಖರೀದಿ ಮೋಸದ ಒಟ್ಟು ಮೊತ್ತವೇ ಸಾವಿರ ಕೋಟಿಯ ಅವ್ಯವಹಾರವಾಗುತ್ತದೆ.

ಸದ್ಯ ವಿರೋಧಿ ಜೆಡಿಎಸ್ ಮತ್ತು ಕಾಂಗ್ರೆಸ್‌ಗಳೆರಡೂ ಈ ಬಗ್ಗೆ ವಿಧಾನ ಮಂಡಲದಲ್ಲಿ ಕೂಗೆಬ್ಬಿಸುತ್ತಲೇ ಇವೆ. 'ನಾನು ಜಾತಿಯಲ್ಲಿ ವೈಶ್ಯನಾಗಿದ್ದರಿಂದ ಬ್ರೋಕರಿಕೆ ಮತ್ತು ವ್ಯಾಪಾರವೇ ನನ್ನ ಕುಲಕಸುಬು. ಇಂಥಾದ್ದರಲ್ಲಿ ನನ್ನ ಅಣ್ಣ ಗೃಹಮಂಡಳಿಗೆಂದು ರೈತರ ಭೂಮಿ ಖರೀದಿಸಿ ಅದನ್ನು ಲಾಭಕ್ಕೆ ಮಾರಿದ್ದರಲ್ಲಿ ತಪ್ಪೇನಿದೆ?

ಕೃಷ್ಣಯ್ಯ ಶೆಟ್ಟಿ–ಜೀಟಿ ಜಂಟಿ ದಕಾಯಿತಿ


ಇದು ಹೌಸಿಂಗ್ ಬೋರ್ಡ್ ಭೂಖರೀದಿ ಹಗರಣಕ್ಕೆ ಸಂಬಂಧಪಟ್ಟಂತೆ ಕೃಷ್ಣಯ್ಯ ಶೆಟ್ಟಿ ಸದನದಲ್ಲಿ ಕೊಟ್ಟ ಹೇಳಿಕೆ. ಅದನ್ನು ಮುಖ್ಯಮಂತ್ರಿ ಯಡ್ಡಿ ಸಮರ್ಥಿಸುತ್ತಾರೆ. ಮುಖ್ಯಕಾರ್ಯದರ್ಶಿಯಿಂದ ತನಿಖೆಗೂ ಆದೇಶಿಸಿದ್ದಾರೆ. ಜೆಡಿಎಸ್ ಮತ್ತು ಕಾಂಗ್ರೆಸ್ ಒಟ್ಟೊಟ್ಟಾಗಿ ಈ ಹಗರಣದ ವಿರುದ್ಧ ಸೆಣಸುತ್ತಿರುವುದರಿಂದ ಅದನ್ನು ಇಡೀ ಸಚಿವ ಸಂಪುಟವೇ ನಿಂತು ಎದುರಿಸಬೇಕೆಂದು ತಮ್ಮ ಸಹೋದ್ಯೋಗಿಗಳಿಗೆ ಗಂಟು ಬೀಳುತ್ತಾರೆ ಮುಖ್ಯಮಂತ್ರಿ ಯಡ್ಡಿ.

ಇದು ಇಡೀ ದುರಾಚಾರದಲ್ಲಿ ಹೇಗೆ ಮುಖ್ಯಮಂತ್ರಿ ಯಡ್ಡಿ ಪಾಲು ಪಡೆದಿದ್ದಾರೆಂಬುದಕ್ಕೆ ಸಣ್ಣ ಸುಳಿವಷ್ಟೆ. ಕೃಷ್ಣಯ್ಯ ಶೆಟ್ಟಿಯಂಥ ಪಕ್ಕಾ ಲ್ಯಾಂಡ್ ಬ್ರೋಕರ್‌ನನ್ನು ಕರೆತಂದು ಮುಜರಾಯಿ ಖಾತೆಯ ಜೊತೆ ವಸತಿ ಖಾತೆಯನ್ನೂ ಗಂಟು ಹಾಕಿದ ಮುಖ್ಯಮಂತ್ರಿ ಯಡ್ಡಿಗೆ ದೊಡ್ಡಮಟ್ಟದ ದರೋಡೆಯೊಂದರ ಹೊರತು ಬೇರೆ ಯಾವ ಉದ್ದೇಶವಿದ್ದೀತು?

ಕೃಷ್ಣಯ್ಯ ಶೆಟ್ಟಿ ಹೇಳಿಕೇಳಿ ಬೆಂಗಳೂರು ಕಂಡ ಪರಮ ಖದೀಮ ಲ್ಯಾಂಡ್ ಡೀಲರ್. ಉತ್ತರಹಳ್ಳಿ ಸುತ್ತಮುತ್ತ ಹತ್ತಾರು ಎಕರೆ ಸರ್ಕಾರಿ ಭೂಮಿ ಕದ್ದೇ ಮಾಲೂರಿಗೆ ಎಮ್ಮೆಲ್ಲೆಯಾಗಿದ್ದ, ಸೈಟು ಕೊಡುತ್ತೇನೆಂದು ನೂರಾರು ಜನಕ್ಕೆ ಟೋಪಿ ಹಾಕಿದ ಅನುಭವವೂ ಇತ್ತು. ಇದು ಪ್ರಯೋಜನಕ್ಕೆ ಬಂದಿದ್ದು ಹೌಸಿಂಗ್ ಬೋರ್ಡ್ ಕೊಳ್ಳೆಯಲ್ಲಿ. ಮಂತ್ರಿಯಾದ ಶುರುವಿನಲ್ಲೇ ಭಾರೀ ದರೋಡೆಯೊಂದರ ಮಾಸ್ಟರ್ ಪ್ಲಾನ್ ರೂಪಿಸಿದ ಕೃಷ್ಣಯ್ಯ ಶೆಟ್ಟಿ ಅದಕ್ಕೆಂದು ಮುಂದೆ ಬಿಟ್ಟಿದ್ದು ತನ್ನ ಖಾಸಾ ಅಣ್ಣ ಶ್ರೀನಿವಾಸ್ ಶೆಟ್ಟಿಯನ್ನು. ಈತ ಕೂಡ ತಮ್ಮನಂತೆ ಪಕ್ಕಾ ನೆಲಹಿಂಡುಕ. ಈತನ ಮೂಲಕವೇ ಸಾವಿರ ಮನೆಗಳ ವಸತಿ ಯೋಜನೆಯೊಂದನ್ನು ಹೌಸಿಂಗ್ ಬೋರ್ಡ್ ಮೂಲಕವೇ ಕೃಷ್ಣಯ್ಯ ಶೆಟ್ಟಿ ತೇಲಿಬಿಡುತ್ತಾನೆ. ಅದು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ವೆಂಕಟಾಪುರ, ಸುಗಟೂರು, ಹೊಸಪೇಟೆ ಮತ್ತು ಬಳವನಹಳ್ಳಿಗಳೆಂಬ ನಾಲ್ಕು ಗ್ರಾಮಗಳ ಸುತ್ತ ತಲೆ ಎತ್ತಲಿರುವ ಹೌಸಿಂಗ್ ಬೋರ್ಡ್‌ನ ಮಿನಿ ಟೌನ್‌ಶಿಪ್.

■ ಡಾ. ಸೋಮನಾಥ್

ಈ ನಾಲ್ಕು ಗ್ರಾಮಗಳ 959 ಎಕರೆ ರೈತರ ಭೂಮಿಯನ್ನು ಗೃಹ ಮಂಡಳಿಯ ವತಿಯಿಂದ ಖರೀದಿಸುವುದು. ಅಲ್ಲಿ ಸಾವಿರಕ್ಕೂ ಅಧಿಕ ಮನೆಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ವಿತರಿಸುವುದು ಯೋಜನೆಯ ಉದ್ದೇಶವಂತೆ. ಅದಕ್ಕೆಂದೇ 2008 ರ ಅಕ್ಟೋಬರ್ ಹದಿನೆಂಟರಂದು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಸುಬೋಧ್ ಯಾದವ್ ಅಧ್ಯಕ್ಷತೆಯಲ್ಲಿ ವಿವಿಧ ಅಧಿಕಾರಿಗಳು ಮತ್ತು ರೈತರ ಸಭೆ ನಡೆಯುತ್ತದೆ. ರೈತರಿಂದ ಜಮೀನು ಖರೀದಿಸುವ ಗೊತ್ತುವಳಿಯೂ ಆಗುತ್ತದೆ. ಆ ಪ್ರಕಾರವೇ ಲೆಕ್ಕ ಹಾಕಿದರೆ ಜಂಗಮ ಕೋಟೆ ಹೋಬಳಿಯ ಈ ನಾಲ್ಕು ಗ್ರಾಮಗಳ ಕೃಷಿ ಭೂಮಿಯ ಬೆಲೆ ಎಕರೆಗೆ ಎರಡರಿಂದ ಮೂರೂವರೆ ಲಕ್ಷ ಮಾತ್ರ.



ವಿಚಿತ್ರವೆಂದರೆ ಆಗ ಹೌಸಿಂಗ್ ಬೋರ್ಡ್ ಕಮೀಷನರ್ ಆಗಿದ್ದ ಲಕ್ಷ್ಮೀನಾರಾಯಣ ಎಂಬ ಖದೀಮ ಐಎಎಸ್ ಅಧಿಕಾರಿ ರೈತರು ಎಕರೆಗೆ ಐವತ್ತೈದು ಲಕ್ಷ ಕೇಳುತ್ತಿದ್ದಾರೆ ಎಂಬ ಹಸೀ ಸುಳ್ಳಿನ ಪ್ರಸ್ತಾವನೆಯೊಂದನ್ನು ಮಂಡಿಸಿಬಿಟ್ಟ!

ಹೀಗೆ ಎಕರೆಗೆ ಎರಡರಿಂದ ಮೂರೂವರೆ ಲಕ್ಷದಷ್ಟಿರುವದ್ದದ್ದನ್ನು ಮುಚ್ಚಿಟ್ಟು 55 ಲಕ್ಷ ಕೇಳುತ್ತಿದ್ದಾರೆಂಬ ಸುಳ್ಳಿನ ಪ್ರಸ್ತಾವನೆಯೊಂದನ್ನು ಹುಟ್ಟುಹಾಕಿದ್ದೇ ಮಂತ್ರಿ ಕೃಷ್ಣಯ್ಯ ಶೆಟ್ಟಿ!

ಹಕೀಕತ್ತೆಂದರೆ ಜಂಗಮಕೋಟೆ ಹೋಬ ಳಿಯ ಈ ನಾಲ್ಕೂ ಗ್ರಾಮಗಳ ಅಷ್ಟೂ ಜಮೀನನ್ನು 2007 ರ ಹೊತ್ತಿಗೇ ಕೃಷ್ಣಯ್ಯ ಶೆಟ್ಟಿಯ ಅಣ್ಣ ಶ್ರೀನಿವಾಸ ಶೆಟ್ಟಿ ಖರೀದಿಸಿಟ್ಟುಕೊಂಡಿದ್ದ. ಎಕರೆಗೆ ಐದು ಲಕ್ಷದಂತೆ ಅಗ್ರಿಮೆಂಟ್ ಮಾಡಿಕೊಂಡು ಅಡ್ವಾನ್ಸಾಗಿ ಇಪ್ಪತ್ತೋ ಮುವತ್ತೋ ಸಾವಿರ ಮಾತ್ರ ಕೊಟ್ಟು ಕೂಡಿಹಾಕಿದ್ದ ಈ ಭೂಮಿಯನ್ನು ಕೆಐಎಡಿಬಿಗೆ ದುಬಾರಿ ರೇಟಿಗೆ ಮಾರಿಕೊಳ್ಳುವುದು ಕೃಷ್ಣಯ್ಯ ಶೆಟ್ಟಿಯ ಉದ್ದೇಶವಾಗಿತ್ತು. ತಾನೇ ವಸತಿ ಮಂತ್ರಿಯಾದ ಮೇಲೆ ಕೇಳಬೇಕೆ?

ಹೀಗೆ ಐದು ಲಕ್ಷದ ಬಂಡವಾಳದಲ್ಲಿ ಎಕರೆಯೊಂದಕ್ಕೆ ಐವತ್ತು ಲಕ್ಷದಂತೆ ಸರ್ಕಾರಿ ದುಡ್ಡು ದೋಚಬೇಕಲ್ಲ?

ಅದಕ್ಕೆಂದು ಅಲ್ಲೇ ಸಾವಿರಕ್ಕೂ ಅಧಿಕ ಮನೆಗಳ ಹೌಸಿಂಗ್ ಬೋರ್ಡ್ ಕಾಲೋನಿ ಸ್ಥಾಪಿಸುತ್ತೇನೆಂದು ಕೃಷ್ಣಯ್ಯ ಶೆಟ್ಟಿ ಘೋಷಿಸಿಬಿಟ್ಟ. ಇಲ್ಲಿ ಗಮನಾರ್ಹ ಸಂಗತಿಯೆಂದರೆ ಇದಿರುವುದು ಬೆಂಗಳೂರಿಗೆ ಅರವತ್ತು ಕಿಲೋಮೀಟರ್ ದೂರದಲ್ಲಿ, ದೇವನಹಳ್ಳಿ ಏರ್‌ಪೋರ್ಟಿಗೂ ಇದು ತುಂಬಾ ದೂರದಲ್ಲಿದೆ. ಇಲ್ಲಿ ಮನೆಗಳನ್ನು ಕಟ್ಟಿಸಿದರೆ ಬಂದು ವಾಸ ಮಾಡುವವರಾದರೂ ಯಾರು? ಅಷ್ಟಕ್ಕೂ ಈ ಸುತ್ತಮುತ್ತ ಹೌಸಿಂಗ್ ಬೋರ್ಡ್ ಮನೆಗಳು ಬೇಕೆಂದು ಬೇಡಿಕೆಯಿಟ್ಟವರಾದರೂ ಯಾರು?

ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಸ್ಥಳಾಂತರಿಸಿದಷ್ಟೇ ಹುಚ್ಚುತನದ ಇಂಥ ಹೌಸಿಂಗ್ ಯೋಜನೆಯನ್ನು ಆಗ ಚಿಕ್ಕಬಳ್ಳಾಪುರಕ್ಕೆ ಜಿಲ್ಲಾಧಿಕಾರಿ ಯಾಗಿದ್ದ ಸುಬೋಧ್ ಯಾದವ್ ವಿರೋಧಿಸುತ್ತಾರೆ. ಇದೊಂದೇ ಕಾರಣಕ್ಕೆ ಯಡ್ಡಿಗೆ ಹೇಳಿಸಿ ಸುಬೋಧ್ ಯಾದವ್‌ರನ್ನು ಎತ್ತಂಗಡಿ ಮಾಡಿಸಿದ ಶೆಟ್ಟಿ ಆ ಜಾಗಕ್ಕೆ ತನಗೆ ಬೇಕಾದ ಐಎಎಸ್ ಅಧಿಕಾರಿ ಅನ್ವರ್ ಪಾಷಾನನ್ನು ತರುತ್ತಾನೆ.

ಬಂದುಬಂದದ್ದೇ ಹೌಸಿಂಗ್ ಬೋರ್ಡ್ ಭೂಖರೀದಿಯ ಸಭೆ ಕರೆದ ಜಿಲ್ಲಾಧಿಕಾರಿ ಅನ್ವರ್ ಪಾಷಾ 2009 ರ ಜನವರಿ 23 ರ ಸಭೆಯಲ್ಲಿ ಎಕರೆಗೆ 43 ಲಕ್ಷ ರೂಪಾಯಿ ನಿಗದಿಪಡಿಸುತ್ತಾನೆ. ಹಾಗೇ ನಿಗದಿಪಡಿಸಿದ್ದನ್ನು ಇದಾಗಿ ಇಪ್ಪತ್ತಮೂರನೇ ದಿನಕ್ಕೆ ರದ್ದುಗೊಳಿಸಿ ಎಕರೆಗೆ 50 ಲಕ್ಷದಂತೆ ಅದೇ ಅನ್ವರ್ ಪಾಷಾ ನಿಗದಿಪಡಿಸುತ್ತಾನೆ. ಅದನ್ನು ಸರ್ಕಾರದ ಅನುಮೋದನೆಗೂ ಕಳಿಸುತ್ತಾನೆ. ಇದನ್ನೇ ದೈವೇಚ್ಛೆಯೆಂಬಂತೆ ಸರ್ಕಾರಿ ಅನುಮೋದನೆ ಸಮೇತ ಆದೇಶ ಹೊರಡಿಸಿದ್ದು ವಸತಿ ಖಾತೆಯ ಪ್ರಿನ್ಸಿಪಲ್ ಕಾರ್ಯದರ್ಶಿ ಕೊಂಗುವಾಡ್ ಎಂಬ ಮತ್ತೊಬ್ಬ ಐಎಎಸ್ ಅಧಿಕಾರಿ!


ಹೌಸಿಂಗ್ ಬೋರ್ಡ್ ಆಯುಕ್ತ ಲಕ್ಷ್ಮೀನಾರಾಯಣ ಮತ್ತು ವಸತಿ ಖಾತೆಯ ಕಾರ್ಯದರ್ಶಿ ಕೊಂಗುವಾಡ್ ಪಾಲುದಾರಿಕೆಯೊಂದಿಗೆ ರೂಪುಗೊಂಡ ಸದರಿ ಕೊಳ್ಳೆಯ ಪ್ರತಿಫಲವೆಂಬಂತೆ 2009 ರ ಮಾರ್ಚ್ ಮೂರರಂದು ಗೃಹ ಮಂಡಳಿ ಶ್ರೀನಿವಾಸ ಶೆಟ್ಟಿಯಿಂದ ಒಟ್ಟು 959 ಎಕರೆ ಭೂಮಿ ಖರೀದಿಸಲು ಆದೇಶ ಹೊರಡಿಸುತ್ತದೆ. ಇದರ ಮೊದಲ ಕಂತಾಗಿ ಎಂಟು ಕೋಟಿ ತೊಂಬತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಶ್ರೀನಿವಾಸ ಶೆಟ್ಟಿಗೆ ಚೆಕ್ ಮೂಲಕ ಪಾವತಿಸಿ ಹದಿನೇಳು ಎಕರೆಗಳಷ್ಟನ್ನು ಖರೀದಿಸುತ್ತದೆ. ಬಹುಶಃ ಆವತ್ತೇ ಚುನಾವಣೆ ಘೋಷಣೆಯಾಗದೇ ಹೋಗಿದ್ದರೆ ಈ ಹೊತ್ತಿಗಾಗಲೇ ಉಳಿಕೆ 942 ಎಕರೆಗಳಿಗೆ ತಲಾ ಐವತ್ತು ಲಕ್ಷದಂತೆ ಒಟ್ಟು ನಾನೂರ ಎಪ್ಪತ್ತೊಂದು ಕೋಟಿ ರೂಪಾಯಿಗಳಷ್ಟು ಸರ್ಕಾರಿ ದುಡ್ಡು ಕೃಷ್ಣಯ್ಯ ಶೆಟ್ಟಿಯ ಅಣ್ಣ ಶ್ರೀನಿವಾಸ ಶೆಟ್ಟಿಯ ತಿಜೋರಿಯ ಪಾಲಾಗುತ್ತಿತ್ತು.

2009 ರ ಮಾರ್ಚ್ ಮೂರರಂದೇ ಲೋಕಸಭಾ ಚುನಾವಣೆ ಘೋಷಣೆಯಾಗಿತ್ತಾದ್ದರಿಂದ ಕೇವಲ ಎಂಟು ಕೋಟಿ ತೊಂಭತ್ತೇಳೂವರೆ ಲಕ್ಷ ರೂಪಾಯಿಗಷ್ಟೇ ಗೃಹಮಂಡಳಿಯ ಖರೀದಿ ಸೀಮಿತಗೊಂಡಿತ್ತು. ಯಾವತ್ತು ಚುನಾವಣೆ ಮುಗಿದು ಇನ್ನೇನು ನಾನೂರೆಪ್ಪತ್ತೊಂದು ಕೋಟಿ ರೂಪಾಯಿಗಳಷ್ಟು ಭಾರೀ ಮೊತ್ತದ ಖರೀದಿಗೆ ಕೃಷ್ಣಯ್ಯ ಶೆಟ್ಟಿ ಅಣಿಯಾಗುತ್ತಿದ್ದಾನೆನ್ನುವ ಹೊತ್ತಿಗೆ ಇಡೀ ಹಗರಣ ವಿರೋಧ ಪಕ್ಷಗಳ ಕಣ್ಣಿಗೆ ಬಿದ್ದಾಗಿತ್ತು.

ಸದ್ಯ ಉಳಿಕೆ ಖರೀದಿ ಸ್ಥಗಿತಗೊಂಡಿದೆ ನಿಜ. ಹಾಗಂತ ಇಲ್ಲಿಗೇ ಇದು ನಿಲ್ಲುತ್ತದೆ ಎಂದಲ್ಲ. ಪೂರ್ತಿ ನಾನೂರೆಂಬತ್ತು ಕೋಟಿ ದೋಚಲು ಏನೇನು ಬೇಕೋ ಎಲ್ಲಾ ಆದೇಶ ದಾಖಲಾತಿಗಳನ್ನೆಲ್ಲ ಕೃಷ್ಣಯ್ಯ ಶೆಟ್ಟಿ ಪೂರೈಸಿದ್ದಾನೆ. ಮೇಲುನೋಟಕ್ಕೆ ಐವತ್ತು ಸಾವಿರ ಕಮ್ಮಿ ಒಂಭತ್ತು ಕೋಟಿಯಷ್ಟು ದುಡ್ಡು ಅಣ್ಣ ಶ್ರೀನಿವಾಸಶೆಟ್ಟಿಯ ಕೈಸೇರಿದೆಯಾದರೂ ಇದು ಕೃಷ್ಣಯ್ಯ ಶೆಟ್ಟಿಯ ಮೂಲಕ ಮುಖ್ಯಮಂತ್ರಿ ಯಡ್ಡಿ ಮಾಡಿದ ದಕಾಯಿತಿಯೇ. ಯಡ್ಡಿಯ ಮರ್ಜಿಯಿಲ್ಲದೇ ಐನೂರು ಕೋಟಿ ಮೊತ್ತದ ಭಾರೀ ಹಗರಣವೊಂದನ್ನು ನಡೆಸುವಷ್ಟು ತಾಕತ್ತು ಕೃಷ್ಣಯ್ಯಶೆಟ್ಟಿಯಂಥ ಕೈಗೊಂಬೆ ಮಂತ್ರಿಗೆ ಹೇಗೆ ತಾನೇ ಸಾಧ್ಯ?



▶▶▶


SALE DEED

Karnataka Housing Board,

"PURCHASER"

SECOND PARTY


ತ್ಯಯ ಅಣ್ಣನ ಹೆಸರಿಗೆ ಹೌಸಿಂಗ್‌ಬೋರ್ಡ್ ಸೇಲ್‌ಡೀಡ್...

ಹೆಸರಿಗಷ್ಟೇ ರೈತರು ಎಂಬ ಪದ ಬಳಕೆಯಾಗಿದ್ದು ...ತರ ಹೆಸರಲ್ಲಿ ದೋಚಿದ್ದು ಕೃಷ್ಣಯ್ಯ ಶೆಟ್ಟಿ ಮತ್ತು ...! ಯಾವ ಜಂಗಮಕೋಟೆ ಹೋಬಳಿಯ ಭೂಮಿಗೆ ...50 ಲಕ್ಷದಂತೆ ಗೃಹಮಂಡಳಿ ಶ್ರೀನಿವಾಸ ಶೆಟ್ಟಿಗೆ ... ಪಾವತಿಸಿದೆಯೋ ಅದೇ ಜಂಗಮಕೋಟೆ ...ಯಲ್ಲಿನ ಎಕರೆ ಭೂಮಿಗೆ ಮೂವತ್ತು ಲಕ್ಷದಂತೆ ...ಟರ್‌ಪ್ರೈಸಸ್ ಮಾಲೀಕ ಡೆನಿಸ್ ಪಿಂಟೋ ಎಂಬ ... ರೆಲಗಳನಿಂದ ಹೌಸಿಂಗ್ ಬೋರ್ಡ್ ಜಮೀನು ...ಸುತ್ತದೆ!

...ದೇ ಪ್ರದೇಶದ ಒಂದೇ ದೂರದ ಭೂಮಿಗೆ ಎರಡೆರಡು ... ಬೆಲೆ ಹೇಗೆ ಸಾಧ್ಯ? ಇನ್ನೂ ವಿಚಿತ್ರವೆಂದರೆ ...ರಿನಿಂದ 25 ಕಿ.ಮೀ. ದೂರದ ಎಕರೆ ಭೂಮಿಗೆ ...ನೈದು ಲಕ್ಷದಂತೆ ದರ ಪಾವತಿಸುವ ಇದೇ ಹೌಸಿಂಗ್ ...ರ್ಡ್ ಕೊಟ್ಟದ್ದು ಐವತ್ತು ಲಕ್ಷ!

...ಥ ದುರಾಚಾರವನ್ನು ಕಂಡೇ 2009 ರ ಮಾರ್ಚ್ ...ಪ ಗೃಹಮಂಡಳಿ ನೌಕರರ ಸಂಘ ಆಯುಕ್ತರಿಗೆ ...ಸಲ್ಲಿಸಿ ಇದರಿಂದ ಮಂಡಳಿಗೆ ವಿಪರೀತ ಆರ್ಥಿಕ ...ನುತ್ತದೆಯೆಂದೂ, ನಿವೇಶನ ಮತ್ತು ಮನೆಗಳಿಗೆ ...ಡೇ ಇಲ್ಲದೆ ಯೋಜನೆ ಕಾರ್ಯಗತಗೊಂಡಲ್ಲಿ ಸರ್ಕಾರಿ ...ಕ್ಕೆ ಲುಕ್ಸಾನಾಗುತ್ತದೆಯೆಂದೂ ಸಲ್ಲಿಸಿದ ಮನವಿಯನ್ನು ... ಕೃಷ್ಣಯ್ಯ ಶೆಟ್ಟಿಯಾಗಲಿ ಆಯುಕ್ತರಾಗಲಿ ಲೆಕ್ಕಕ್ಕೇ ...

...ತ್ಯವಿಲ್ಲದೆ, ಯಾರೂ ಕೇಳದೆ, ಮನುಷ್ಯರ್‍ಯಾರೂ ವಾಸಿಸಲು ... ಇಲ್ಲದ, ನಿರುಪಯೋಗಿ ಲೇಔಟ್ ಮಾಡಿ; ಎಕರೆಗೆ ...ೇ ಐದೋ ಲಕ್ಷದ ಬದಲಿಗೆ ಐವತ್ತು ಲಕ್ಷದ ಲೆಕ್ಕ ...ಟ್ಟು, ರೈತನ ಹೆಸರಲ್ಲಿ ತನ್ನದೇ ಅಣ್ಣನಿಗೆ ದುಡ್ಡು ...ದ್ದು, ನೌಕರರ ಸಂಘವೇ ಪ್ರತಿಭಟಿಸಿದಾಗಲೂ ಅದನ್ನು ...


...959-00 ಎಕರೆ ಜಮೀನನ್ನು ...

... 56-00 ...

... ಎಕರೆ 1ಕ್ಕೆ ರೂ.50,00,000/- ...

... 25 ಕಿ.ಮೀ ದೂರದಲ್ಲಿ ಎಕರೆ 1ಕ್ಕೆ ರೂ.35,00,000/- ...


...ದ ವಿರುದ್ಧ ಗೃಹಮಂಡಳಿ ನೌಕರರ ದೂರು...

...ಖರೀದಿಸಿದ್ದು ಹಗಲು ದರೋಡೆಯಲ್ಲದೇ ಮತ್ತೇನು? ...ಪುಶಃ ವಿಧಾನಮಂಡಲದಲ್ಲಿ ವಿರೋಧ ಪಕ್ಷ ಗಳೆರಡೂ ...ಸದೇ ಹೋಗಿದ್ದರೆ ಈ ಹೊತ್ತಿಗಾಗಲೇ ಸಾವಿರ ...ದ ಹೌಸಿಂಗ್ ಬೋರ್ಡ್ ಡಕಾಯಿತಿ ನಡೆದಾಗಿರುತ್ತಿತ್ತು. ...ಲಕಟುಬೇ ವ್ಯಾಪಾರವಾಗಿದ್ದರಿಂದ ರೈತರಿಂದ ಖರೀದಿಸಿ ...ಮಾರಿದ್ದೇವೆನ್ನುವ ಮಾಜಿ ವಸತಿ ಮಂತ್ರಿ, ಹೆಜ್ಜೆಹೆಜ್ಜೆಗೂ ...ಳ ದಾಖಲೆ ಕೊಟ್ಟರೂ ಅದನ್ನು ಸಮರ್ಥಿಸಿಕೊಳ್ಳುವ, ...ಗಲುದರೋಡೆಯೊಂದನ್ನು ಸಿಬಿಐ ತನಿಖೆಗೆ ವಹಿಸುವ ... ತನ್ನ ಅಪ್ಪಾಪ್ರಾರ್ಟ ಮುಖ್ಯ ಕಾರ್ಯದರ್ಶಿ ಯಿಂದಲೇ ... ಆದೇಶಿಸುವ, ನಿನ್ನೆಮೊನ್ನೆಯ ತನಕ ಈ ಥರದ ...ವೆ ಖರೀದಿ ನಡೆಯುತ್ತಿದ್ದರೂ ಅದನ್ನು ಮುಚ್ಚಿಟ್ಟು ... ತಿಂಗಳಿಂದಲೇ ಖರೀದಿ ಪ್ರಕ್ರಿಯೆ ...ಲ್ಲಿಸಿದೆಯೆಂದು ಸುಳ್ಳು ಹೇಳಿ ಸದನವನ್ನೇ ದಿಕ್ಕುತಪ್ಪಿಸುವ ...ಖ್ಯಮಂತ್ರಿ, ಯಡ್ಡಿಯೋ ಈ ಕರ್ಮಕಾಂಡದ ...ಪಾಲುದಾರರೆಂಬುದಕ್ಕೆ ಇದಕ್ಕಿಂತ ಇನ್ಯಾವ ಪುರಾವೆ ಬೇಕು? ...ಐ ಮಾಡಿಸುತ್ತೇನೆಂದು ಅದನ್ನು ಸಿಬಿಐಗೊಪ್ಪಿಸದೇ ... ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಒಪ್ಪಿಸಿದ ...ಮಂತ್ರಿ, ಯಡ್ಡಿಯು ನಾಟಕಕಾರ, ಯಾವ ಪುಸ್ತಿ... ...?

... ಕಳ್ಳ ಪರದಾಮ್ಮ ಸಂಬಂಧವುಂಟಾ?

ಎಕರೆಗೆ 5 ಲಕ್ಷದ ಬದಲು 36.5 ಲಕ್ಷ?

ಮೈಸೂರಿನಲ್ಲಿ ಜೇಟಿ ಡಕಾಯಿತಿ



ಇತ್ತ ವಸತಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಚಿಕ್ಕಬಳ್ಳಾಪುರದಲ್ಲಿ ದೋಚಲಾರಂಭಿಸಿದ್ದೇ ಮೈಸೂರಿನಲ್ಲಿ ಉಣ್ಣಲು ಕೂತವನು ಹಾಲಿ ಹೌಸಿಂಗ್ ಬೋರ್ಡ್ ಅಧ್ಯಕ್ಷ ಜೇಟಿ ದೇವೇಗೌಡ. ಮೈಸೂರಿಗೆ ಕೇವಲ 8 ಕಿ.ಮೀ. ದೂರದಲ್ಲಿದ್ದ ಮಾನಂದ ವಾಡಿ ರಸ್ತೆಯ ಕೆಂಚಲಗೂಡು ಗ್ರಾಮದ ಐನೂರು ಎಕರೆಯನ್ನು ಖರೀದಿಸಿ ಲೇಔಟ್ ನಿರ್ಮಿಸುವ ಯೋಜನೆಯನ್ನು 2007 ರಲ್ಲೇ ಹೌಸಿಂಗ್ ಬೋರ್ಡ್ ಘೋಷಿಸಿತ್ತು, ಐನೂರು ಎಕರೆ ರೈತರ ಭೂಮಿಯನ್ನು ಆವತ್ತೇ ನೋಟಿಫೈ ಮಾಡಿತ್ತು. ಎಕರೆಗೆ 16 ಲಕ್ಷದಂತೆ ಮಾರಲು ರೈತರು ಒಪ್ಪಿಕೊಂಡಾಗಿತ್ತು.

ಯಡ್ಡಿ ಸರ್ಕಾರ ಬಂದಿದ್ದೇ ಹೌಸಿಂಗ್ ಬೋರ್ಡ್ ಅಧ್ಯಕ್ಷನಾದ ಜೇಟಿ ಇದನ್ನೇ ಮುಂದುವರಿಸಬೇಕಿತ್ತಲ್ಲವೆ? ಹಾಗಾಗಿದ್ದೇ ಆದಲ್ಲಿ ದುಡ್ಡು ದೋಚುವುದೆಲ್ಲಿಂದ? ಅದಕ್ಕೆಂದು ಜೇಟಿ ತನ್ನ ಖತರ್‌ನಾಕ್ ಬುದ್ಧಿ ಪ್ರಯೋಗಿಸಿ ಹುಣಸೂರು ರಸ್ತೆಯಲ್ಲಿ ಮೈಸೂರಿನಿಂದ 15 ಕಿ.ಮೀ. ದೂರದಲ್ಲಿದ್ದ ಮೈದನಹಳ್ಳಿಗೆ ವಕ್ಕರಿಸಿದ. ಅಲ್ಲಿ ಐನೂರೆಕರೆ ಯಲ್ಲಿ ಹೌಸಿಂಗ್ ಬೋರ್ಡ್ ಲೇಔಟ್ ನಿರ್ಮಿಸ್ತೇನಿ ಎಂದು ಹೇಳಿಕೆಯನ್ನೂ ಕೊಟ್ಟ. ಮೈದನಹಳ್ಳಿಯ ರೈತರ ಸಂತೋಷಕ್ಕೆ ಪಾರವೆಲ್ಲಿತ್ತು?


ಜೇಟಿಯ ಹೇಳಿಕೆ ಹೊರಬದ್ದಿದ್ದೇ ತಡ, ಮೈಸೂರಿನ ಬಿಜೆಪಿ ಶಾಸಕ ರಾಮದಾಸ್ ತನ್ನ ತಮ್ಮ ಶ್ರೀಕಾಂತನ ಹೆಸರಲ್ಲಿ ಎಕರೆಗೆ ಇಪ್ಪತ್ತು ಲಕ್ಷದಂತೆ ಕೊಟ್ಟು ಮೈದನಹಳ್ಳಿ ಸುತ್ತಮುತ್ತಲ ಬಹುತೇಕ ಜಮೀನನ್ನು ಖರೀದಿಸಿಬಿಟ್ಟ. ಎಮ್ಮೆಲ್ಲೇ ರಾಮದಾಸ್ ಮೈದನಹಳ್ಳಿಗೆ ಕಾಲಿಟ್ಟದ್ದು ಗೊತ್ತಾಗಿದ್ದೇ ಮೈಸೂರು-ಬೆಂಗಳೂರಿನ ಅನೇಕ ಲ್ಯಾಂಡ್ ಡೀಲರುಗಳು ಮೈದನಹಳ್ಳಿ ಸುತ್ತಮುತ್ತಲಿನ ಅಳಿದುಳಿದ ಜಮೀನನ್ನೂ ದುಬಾರಿ ರೇಟು ಕೊಟ್ಟು ಖರೀದಿಸಲಾರಂಭಿಸಿದ್ದರು. ಮೈದನಹಳ್ಳಿಗೆ ಹೌಸಿಂಗ್ ಬೋರ್ಡ್ ಲೇಔಟ್ ಬಂದರೆ ಅದರ ಅಕ್ಕಪಕ್ಕದ ಭೂಮಿಗೂ ವಿಪರೀತ ಬೆಲೆ ಗಿಟ್ಟುತ್ತದೆಯೆಂಬ ನೆಲಕಂಟಕರ ಲೆಕ್ಕಾಚಾರ ಆರೇ ತಿಂಗಳಿಗೆ ಉಲ್ಟಾ ಹೊಡೆದಿತ್ತು. ಎಕರೆಗೆ ಹದಿನಾರೂವರೆ ಲಕ್ಷದಂತೆ ಕಮೀಷನ್ ಕೊಟ್ಟ ರಷ್ಟೇ ಅಲ್ಲಿಗೆ ಲೇಔಟ್ ತರುತ್ತೇನೆಂಬ ಜೇಟಿಯ ಹುನ್ನಾರ ರೈತರಿಗೆ ಅರ್ಥವಾಗಲು ಹೆಚ್ಚು ದಿನ ಹಿಡಿಯಲಿಲ್ಲ.

ಮಿಕ್ಕೆಲ್ಲ ಡೆವಲಪರ್‌ಗಳು ಈಗಾಗಲೇ ಎಕರೆಗೆ ಇಪ್ಪತ್ತು ಲಕ್ಷ ಕೊಡುತ್ತಿರುವುದರಿಂದ ಹೌಸಿಂಗ್ ಬೋರ್ಡ್ ಎಕರೆಗೆ ಇಪ್ಪತ್ತಾರೂವರೆ ಲಕ್ಷ ಕೊಟ್ಟರಷ್ಟೇ ಜಮೀನು ಬಿಟ್ಟು ಕೊಡ್ತೀವಿ ಎಂದ ಮೈದನಹಳ್ಳಿಯ ರೈತರಿಗೆ ಜೇಟಿ ಸರಿಯಾದ ಬರೆ ಎಳೆದಿದ್ದ. ಆಯ್ತು ಇಪ್ಪತ್ತಾ ರೂವರೆ ಲಕ್ಷಾನೇ ಕೊಡ್ತೀನಿ. ಆದರೆ ನೀವು ಅದರಲ್ಲಿ ಹತ್ತು ಲಕ್ಷ ಮಾತ್ರಾನೇ ಇಟ್ಟುಕೊಂಡು ಉಳಿಕೆ ಹದಿನಾರೂವರೆ ಲಕ್ಷವನ್ನ ನನಗೆ ಕೊಡ್ಬೇಕು. ಅದೂ ನನಗೆ ಕೊಡೋ ದುಡ್ಡಲ್ಲ, ಅದನ್ನೆಲ್ಲ ಒಟ್ಟುಗೂಡಿಸಿ ನಾನು ಸಿಎಂಗೆ ಕೊಡ್ಬೇಕು ಗೊತ್ತಾ? ನೀವೆಲ್ಲ ಒಬ್ಬನಿಗೇ ಜಿಪಿಎ ಮಾಡಿಕೊಡಬೇಕು. ಅವನಿಂದ ಹೌಸಿಂಗ್ ಬೋರ್ಡ್ ಸಾರಾಸಗಟಾಗಿ ಭೂಮಿ ಕೊಂಡಂತೆ ರೆಕಾರ್ಡ್ ಬಿಲ್ಡಪ್ ಮಾಡ್ತೀನಿ. ಎಷ್ಟೆಂದರೂ ನಿಮ್ಮ ಭೂಮಿಗೆ ಯಾರೂ ಎಕರೆಗೆ ಐದು ಲಕ್ಷಕ್ಕಿಂತ ಹೆಚ್ಚಿಗೆ ಕೊಡಲ್ಲ, ಇಂಥಾದ್ದರಲ್ಲಿ ಎಕರೆಗೆ ಹತ್ತು ಲಕ್ಷ ನೀವು ಇಟ್ಟುಕೊಂಡು ಉಳಿಕೆ ಹದಿನಾರೂವರೆ ಲಕ್ಷವನ್ನು ನನಗೆ ಕೊಡೋದಕ್ಕೆ ಏನು ಕಷ್ಟ?

ಹೀಗೆಂದು ಲಜ್ಜೆಗೆಟ್ಟೇ ರೈತರಿಗೆ ದುಂಬಾಲು ಬಿದ್ದ ಜೇಟಿ ದೇವೇಗೌಡನ ಮುಖಕ್ಕೆ ಹೊಡೆದಂತೆ ರೈತರೆಲ್ಲ ಕ್ಯಾಕರಿಸಿ ಉಗಿದುಬಿಟ್ಟರು. 'ಅಲ್ಲಯ್ಯಾ ಜಮೀನು ನಮ್ಮದು ತಿನ್ನೋದು ನೀನಾ? ಯಾವ ಸೀಮೆ ಲೀಡ್ರಯ್ಯಾ ನೀನು? ಈ ಪುರುಷಾರ್ಥಕ್ಕೆ ನಾವೆಲ್ಲ ಭೂಮಿ ಕಳ್ಕೋಬೇಕಾ?' ಎಂದದ್ದೇ ಜೇಟಿಯ ಕಳ್ಳ ಲೆಕ್ಕಕ್ಕೆ ಭೂಮಿ ಕೊಡಲು ನಿರಾಕರಿಸಿಬಿಟ್ಟರು.

ದೋಚಲು ಸಾಧ್ಯವಿಲ್ಲ ಎಂದಮೇಲೆ ಇನ್ನೆಲ್ಲಿಯ ಲೇಔಟು? ಮೇಗಳಪುರದ 41 ಮಂದಿ ಮತ್ತು ಮೈದನಹಳ್ಳಿಯ 114 ಮಂದಿ ರೈತರು ತಾವು ಜಮೀನು ಕೊಡಲು ಸಿದ್ಧ ಎಂದು ಗೃಹಮಂಡಳಿಗೆ ಅರ್ಜಿ ಕೊಟ್ಟಾಗಲೂ ಅದನ್ನು ಕಸದಬುಟ್ಟಿಗೆ ಎಸೆದ ಜೇಟಿ ಏಕಾಏಕಿ ಮೈದನಹಳ್ಳಿ ಲೇಔಟು ಕ್ಯಾನ್ಸಲ್ಲಾಗಿದೆ ಎಂದುಬಿಟ್ಟ!


ಈ ಬಾರಿ ಮೈದನಹಳ್ಳಿಯಿಂದ ಇನ್ನೂ ಹದಿನೈದು ಕಿ.ಮೀ. ಮುಂದಕ್ಕಿದ್ದ ತನ್ನ ಹುಟ್ಟೂರು ಗುಂಗ್ರಾಲ್ ಛತ್ರವನ್ನು ಆಯ್ದುಕೊಂಡ. ಅಕ್ಕಪಕ್ಕದ ಎಲಚಹಳ್ಳಿ, ಕಲ್ಲೂರುನಾಗನಹಳ್ಳಿ, ಎರಹಳ್ಳಿಗಳನ್ನು ಸೇರಿಸಿ ಅಲ್ಲಿನ ಐನೂರು ಎಕರೆಯಲ್ಲಿ ಹೊಸ



ಲೇಔಟ್ ನಿರ್ಮಿಸುತ್ತೇ ವೆಂದು ಘೋಷಿಸಿಬಿಟ್ಟ. ಅಲ್ಲಿಗೆ ಮೈದನಹಳ್ಳಿ ಲೇಔಟ್ ನಂಬಿ ಕೋಟಿಗಟ್ಟಲೇ ಸುರಿದು ರೈತರ ಭೂಮಿ ಖರೀದಿಸಿದ್ದ ಬಿಲ್ಡರುಗಳೆಲ್ಲ ಎದೆಬಡಿದುಕೊಂಡು ಗೋಳಿಟ್ಟರು.

ಮೈದನಹಳ್ಳಿಯಿರುವುದು ಮೈಸೂರಿನಿಂದ 15 ಕಿಮೀ ದೂರದಲ್ಲಿ, ಈಗ ಗುಂಗ್ರಾಲ್ ಛತ್ರ ಮತ್ತು ಕಲ್ಲೂರು ನಾಗನಹಳ್ಳಿ ಇನ್ನೂ ಹದಿನೈದು ಕಿ.ಮೀ. ಮುಂದಕ್ಕೆ ಅಂದರೆ ಮೈಸೂರಿನಿಂದ ಒಟ್ಟು 30 ಕಿ.ಮೀ. ದೂರಕ್ಕೆ ಬಂದಂತಾಯ್ತು. ಮೈಸೂರಿನ 30 ಕಿ.ಮೀ. ಆಚೆಗೆ ಇರುವ ಲೇಔಟಗೆ ಬಂದು ಯಾರು ತಾನೇ ವಾಸ ಮಾಡಲು ಸಾಧ್ಯ? ಪಕ್ಕದ ಹುಣಸೂರು, ಕೆ.ಆರ್. ನಗರ, ಮಂಡ್ಯ ಜಿಲ್ಲೆಗೂ ಇದು ಗಡಿಭಾಗವೇ ಹೊರತು ಯಾವೊಂದು ಊರಿಗೂ ಹತ್ತಿರವಲ್ಲ, ಪಕ್ಕದಲ್ಲೇ ಕಾವೇರಿ ನದಿ. ಮಳೆ ಬಂದರೆ ನದಿ ನೀರು ನುಗ್ಗುವ, ಬಂಡೆಕಲ್ಲುಗಳಿಂದಾವೃತ. ಇಂಥ ಪ್ರದೇಶದಲ್ಲಿ ಯಾರಾದರೂ ಯಾಕಾದರೂ ಲೇಔಟ್ ಮಾಡುತ್ತಾರೆ?

ಆದರೆ ಜೇಟಿಯ ಲೆಕ್ಕಾಚಾರವೇ ಬೇರೆಯಿತ್ತಲ್ಲ. ಪುಗಸಟ್ಟೆಗೆ ಕೊಟ್ಟರೂ ಯಾರೂ ಕೊಂಡುಕೊಳ್ಳದ ಇಂಥ ಎಕರೆ ಭೂಮಿಗೆ ಜೇಟಿ ಮೂವತ್ತಾರೂವರೆ ಲಕ್ಷದ ಬೆಲೆಕಟ್ಟಿದ್ದ. ಮೈಸೂರಿನಿಂದ 15 ಕಿ.ಮೀ. ದೂರದ ಮೈದನಹಳ್ಳಿಯ ಭೂಮಿಗೇ ಇಪ್ಪತ್ತಾರೂವರೆ ಲಕ್ಷ ನಿಗದಿ ಮಾಡಿರುವಾಗ 30 ಕಿ.ಮೀ. ದೂರದ ಗುಂಗ್ರಾಲ್ ಛತ್ರದ ಭೂಮಿಗೆ ಹತ್ತು ಲಕ್ಷ ಕೂಡ ಹೆಚ್ಚೇ. ಹಾಗಿರುವಾಗ ಜೇಟಿ ಎಕರೆಗೆ ಮೂವತ್ತಾರೂವರೆ ಲಕ್ಷ ನಿಗದಿಪಡಿಸಿದ್ದು ಸುಮ್ಮನೇನಲ್ಲ, ಪ್ರತಿ ರೈತನೂ ಎಕರೆಗೆ ಹತ್ತು ಲಕ್ಷ ಮಾತ್ರ ಪಡೆದು ಉಳಿಕೆ ಇಪ್ಪತ್ತಾರೂವರೆ ಲಕ್ಷವನ್ನು ತನಗೊಪ್ಪಿಸಬೇಕು. ಅದೂ ತನ್ನ ಅಳಿಯ ವಿಶ್ವೇಶ್ವರ ಬಾಲು, ಯಡ್ಡಿ ಮಗ ವಿಜಯೇಂದ್ರನ ಏಜೆಂಟ ಶಿವಶಂಕರ ಪುಲಸೆ, ಮೈದನಹಳ್ಳಿಯ ಖದೀಮ ವಿಷಕಂಠನಂಥ ಬ್ರೋಕರುಗಳ ಹೆಸರಿಗೆ ಜಿಪಿ.. ಮಾಡಿಸಿಕೊಡಬೇಕು. ಇಂಥ ಬ್ರೋಕರುಗಳಿಂದ



ಹೌಸಿಂಗ್ ಬೋರ್ಡ್ ಖರೀದಿ ಸುತ್ತದೆ. ಬಂದ ದುಡ್ಡಲ್ಲಿ ಎಕರೆಗೆ ಹದಿನೈದು ಲಕ್ಷದಂತೆ ಮುಖ್ಯಮಂತ್ರಿಗೆ ಕೊಟ್ಟು ಉಳಿದದ್ದಷ್ಟೇ ತನಗೆ...' ಎಂದು ಜೇಟಿ ಬಹಿರಂಗವಾಗೇ ರೈತರೆದುರು ಅಲವತ್ತುಕೊಂಡ.

ಈ ಹೊತ್ತಿಗಾಗಲೇ ಮುಖ್ಯಮಂತ್ರಿ ಯಡ್ಡಿ ಹೌಸಿಂಗ್ ಬೋರ್ಡ್ ಭೂಖರೀದಿ ನಿಂತಿದೆಯೆಂದು ಹೇಳಿಕೆ ಬೇರೆ ಕೊಟ್ಟಿದ್ದರಲ್ಲ; ಆದರೆ ಜೇಟಿ ಜುಲೈ 14 ರವರೆಗೂ ಗುಂಗ್ರಾಲ್ ಛತ್ರ, ಎರಹಳ್ಳಿ, ಕಲ್ಲೂರು ನಾಗನಹಳ್ಳಿಯ ಭೂಮಿಯನ್ನು ಖರೀದಿಸುತ್ತಲೇ ಇದ್ದ. ಜುಲೈ 13 ರ ವಿಧಾನಮಂಡಲದಲ್ಲಿ ಮುಖ್ಯಮಂತ್ರಿ ಯಡ್ಡಿ ಮಾರ್ಚ್ 2 ರ ನಂತರ ಹೌಸಿಂಗ್ ಬೋರ್ಡ್ ಯಾವುದೇ ಭೂಮಿ ಖರೀದಿಸಿಲ್ಲ ಎಂದು ಕೊಟ್ಟ ಹೇಳಿಕೆಯನ್ನೇ ಹೀಯಾಳಿಸಿ ದಂತೆ ಜೇಟಿ ಖರೀದಿ ಮುಂದುವರೆಸಿದ್ದ. ಐನೂರು ಎಕರೆಯ ಪೈಕಿ ಈಗಾಗಲೇ 60 ಎಕರೆ ಖರೀದಿಸಿಬಿಟ್ಟಿದ್ದ. ಈ ಅರವತ್ತು ಎಕರೆಯಲ್ಲಿ ರೈತನಿಗೆ ಎಕರೆಗೆ ಹತ್ತು ಲಕ್ಷದಂತೆ ಸಿಕ್ಕಿದ್ದು ಬಿಟ್ಟರೆ ಉಳಿಕೆ ಹದಿನೈದೂವರೆ ಕೋಟಿ ರೂಪಾಯಿಯನ್ನು ಯಡ್ಡಿ ಮತ್ತು ಜೇಟಿ ಹಂಚಿಕೊಂಡಾಗಿತ್ತು.

ಈಗ ಜೆಡಿಎಸ್-ಕಾಂಗ್ರೆಸ್ ಪ್ರತಿಭಟಿಸಿದ ಫಲವಾಗಿ ಖರೀದಿ ನಿಂತಿದೆ ನಿಜ. "ಅದಕ್ಕೆಲ್ಲ ವಿರೋಧಿ ನಾಯಕ ಸಿದ್ಧರಾಮಯ್ಯನವರೇ ಕಾರಣ. ನಾನು ಮೈಸೂರಿನ ಬಡಬಗ್ಗರಿಗೆ ಮನೆ ಕಟ್ಟಿಸಿ ಕೊಡುತ್ತಿದ್ದೆ. ಅದಕ್ಕೆ ರೇವಣ್ಣ ಮತ್ತು ಸಿದ್ಧರಾಮಯ್ಯ ಕಲ್ಲು ಹಾಕಿದ್ದಾರೆ" ಎಂದೆಲ್ಲ ಜೇಟಿ ಬೊಬ್ಬೆ ಹೊಡೆಯುತ್ತಿದ್ದಾನೆ.

ಓಕೆ, ಜೇಟಿಯ ಮಾತಲ್ಲಾದರೂ ಸತ್ಯವುಂಟೆ? ಮೈಸೂರಿನಿಂದ 30 ಕಿ.ಮೀ. ದೂರದಲ್ಲಿ ಲೇಔಟ್ ಮಾಡಿದರೆ ಬಂದು ಇರುವವರ್‍ಯಾರು? ಎಕರೆಗೆ ಮೂವತ್ತಾರೂವರೆ ಲಕ್ಷ ಕೊಟ್ಟು ಜಮೀನು ಖರೀದಿಸಿದರೆ, ಅದರ ಕನ್ವರ್ಷನ್, ವಿದ್ಯುತ್ತು, ರಸ್ತೆ ಒಳಚರಂಡಿ ಎಲ್ಲಾ ಸೇರಿದರೆ ಎಕರೆಗೆ ಒಂದು ಕೋಟಿಯಾಯ್ತು. ಸೀಎ ಸೈಟು, ಆಟದಗ್ರೌಂಡು, ಪಾರ್ಕು, ದೇವಸ್ಥಾನ, ಪೊಲೀಸ್ ಠಾಣೆ ಇತ್ಯಾದಿ ಎಲ್ಲಾ ಜಮೀನು ಕಳೆದರೂ ಎಕರೆಗೆ ಬರುವುದು ಕೇವಲ ಹದಿನೈದು ಸೈಟು ಮಾತ್ರ ಅಂದರೆ ಸೈಟೊಂದಕ್ಕೆ ಏಳು ಲಕ್ಷದ ರೇಟು ನಿಗದಿಪಡಿಸಿದರಷ್ಟೇ ಗೃಹಮಂಡ ಳಿಗೆ ಗಿಟ್ಟುತ್ತದೆ. ತಮಾಷೆಯೆಂದರೆ ಮೈಸೂರು ನಗರದೊಳಗಿನ ಮೂಡಾ ಸೈಟಗೆ ಇಷ್ಟೊಂದು ದುಬಾರಿ ಬೆಲೆಯಿಲ್ಲ. ಇನ್ನೂ ಮೈಸೂರಿನಿಂದ 30 ಕಿ.ಮೀ. ದೂರಕ್ಕೆ ಏಳು ಲಕ್ಷ ಕೊಟ್ಟು ಸೈಟು ಕೊಳ್ಳುವ ಶಕ್ತಿ ಮೈಸೂರಿನ ಆಟೋ ಚಾಲಕರಿಗಾಗಲಿ, ಕೂಲಿಗಳಿಗಾಗಲಿ, ಕಾರ್ಮಿಕರಿಗಾಗಲಿ ಇದೆಯಾ?

ಜೇಟಿಯ ದುಡ್ಡಿನ ದಾಹಕ್ಕೆ ಅಶನ ದುರಾಚಾರಕ್ಕೆ ಸೈಟು ಕೊಳ್ಳುವವರು ದಂಡ ಕಟ್ಟಬೇಕಾ?

ಇನ್ನೂರು ಕೋಟಿ ದೋಚಲು ಇದು ಜೇಟಿ ಮತ್ತು ಯಡ್ಡಿ ಸೇರಿ ನಡೆಸಿದ ಜಂಟಿ ಡಕಾಯಿತಿಯಲ್ಲದೇ ಮತ್ತೇನಲ್ಲ. ಸಿಬಿಐ ತನಿಖೆ ನಡೆದಲ್ಲಿ ಖದೀಮ ಜೇಟಿ ಜೈಲಿಗೆ ಹೋಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಭೂಗಳ್ಳ ಬಚ್ಚೇಗೌಡ


ಹೊಸಕೋಟೆಯ ಗೂಂಡಾಗುರು, ಹಾಲಿ ಕಾರ್ಮಿಕ ಸಚಿವ ಬಿ.ಎನ್. ಬಚ್ಚೇಗೌಡನ ನೆಂಟರು ಹಾಗೂ ಭಂಟರು ನಡೆಸುತ್ತಿರುವ ಭೂಗಳ್ಳತನದ ವರದಿ ಇದು.

ಬಿಜೆಪಿ ಸರ್ಕಾರ ಬಂದಮೇಲೆ ಬೆಳಕಿಗೆ ಬರುತ್ತಿರುವ ಭೂಹಗರಣಗಳ ಪೈಕಿ ಕೃಷ್ಣಯ್ಯ ಶೆಟ್ಟಿಯ ಕಳ್ಳತನ ಒಂದು ರೀತಿಯದಾದರೆ ಈ ಬಚ್ಚೇಗೌಡ ಗ್ಯಾಂಗ್‌ನ ಭೂಗಳ್ಳತನ ಬೇರೆ ರೀತಿಯದು.

ಸರ್ಕಾರಿ ಗೋಮಾಳ, ಅರಣ್ಯ ಇಲಾಖೆಗೆ ಸೇರಿದ ನೂರಾರು ಎಕರೆ ಜಮೀನಿಗೆ ನುಗ್ಗಿ ರಾತ್ರೋರಾತ್ರಿ ಬೇಲಿ ಹಾಕಿಸಿ ವಿರೋಧಿಸುವವರಿಗೆ ಜೀವ ಬೆದರಿಕೆ ಹಾಕಿ ಪುಂಡಾಟಿಕೆ ನಡೆಸುತ್ತಿದೆ ಈ ಗ್ಯಾಂಗ್.


ಸಚಿವ ಬಚ್ಚೇಗೌಡನ ಚಿಕ್ಕಪ್ಪನ ಮಕ್ಕಳಾದ ಚಿಕ್ಕವೆಂಕಟೇಗೌಡ, ರಾಮೇಗೌಡ, ಅಣ್ಣನ ಮಕ್ಕಳಾದ ಶೇಕರ್ ಗೌಡ, ಸತೀಶ್ ಗೌಡ ಹೀಗೆ ಎರಡು ಡಜನ್‌ಗೂ ಹೆಚ್ಚಿರುವ ಈ ಭೂಗಳ್ಳರ ಗುಂಪು ತನಿಯೂರು ಹಾಗೂ ಚೊಕ್ಕಸಂದ್ರ ಗ್ರಾಮಗಳಿಲ್ಲಿನ ನೂರಾರು ಎಕರೆ ಸರ್ಕಾರಿ ಜಾಗವನ್ನು ನುಂಗಿ ಹಾಕುತ್ತಿದೆ.

ಈ ಜಮೀನಿನ ಇವತ್ತಿನ ಮಾರುಕಟ್ಟೆ ಬೆಲೆ ನೂರು ಕೋಟಿಗೂ ಹೆಚ್ಚು!



ತನಿಯೂರು ಅರಣ್ಯ ಭೂಮಿ ಕಳ್ಳತನ

ಹೊಸಕೋಟೆ ತಾಲ್ಲೂಕು ನಂದಗುಡಿ ಹೋಬಳಿಯ ತನಿಯೂರು-ಭೈರಸಂದ್ರ ಗ್ರಾಮಕ್ಕೆ ತಾಗಿಕೊಂಡಂತೆ ಸರ್ವೆ ನಂಬರ್ 17 ರಲ್ಲಿ 316 ಎಕರೆಯಷ್ಟು ಅರಣ್ಯ ಇಲಾಖೆಗೆ ಸೇರಿರುವ ಭೂಮಿ ಇದೆ. ಇದರ ಪೈಕಿ 143.69 ಎಕರೆಯಷ್ಟನ್ನು ಅರಣ್ಯ ಇಲಾಖೆಯ 1.7.1976 ರಲ್ಲಿ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮಕ್ಕೆ ನೀಲಗಿರಿ ಬೆಳೆಯಲು ಗುತ್ತಿಗೆ ನೀಡಿತ್ತು. ನಂತರ 15.1.95 ರಲ್ಲಿ ಈ ಜಾಗದ ಸ್ವಾಧೀನ ಪಡೆದ ನಿಗಮವು 62.5 ಎಕರೆಯಷ್ಟು ಜಾಗದಲ್ಲಿ ಹುಣಸೇ ಸಸಿಗಳನ್ನು



ಮಾರ್ವಾಡಿಗಳಿಗೆ ಸಾಗುವಳಿ ಚೀಟಿ ನೀಡಿರುವ ಪಹಣಿ

ನೆಟ್ಟು ಒಂದು ದೊಡ್ಡ ನೆಡುತೋಪನ್ನು ಬೆಳೆಸಿತ್ತು. ಈಗಾಗಲೇ 12 ರಿಂದ 14 ವರ್ಷದ ಹುಣಸೆ ಫಸಲನ್ನು ಪ್ರತಿ ವರ್ಷ ಹರಾಜು ಹಾಕಲಾಗುತ್ತಿತ್ತು. ಈ ನಡುವೆ 2007 ನೇ ಇಸವಿ ಡಿಸೆಂಬರ್ 24 ರ ರಾತ್ರಿ ಬಚ್ಚೇಗೌಡನ ನೆಂಟರಿಷ್ಟರು ಹಾಗೂ ಸ್ಥಳೀಯ ತನಿಯೂರಿನ ಕೆಲವು ಬೆಂಬಲಿಗರು ಈ ನೆಡುತೋಪಿಗೆ ನುಗ್ಗಿ 540 ರಷ್ಟು ಹುಣಸೆ ಮರಗಳನ್ನು ಕಡಿದುರುಳಿಸಿಬಿಟ್ಟರು. ಕಾರಣ ಕೇಳಿದವರಿಗೆ ಈ ಜಾಗ ತಮ್ಮದೆಂತಲೂ ತಹಶೀಲ್ದಾರನಿಂದ ದರಖಾಸ್ತಿನಲ್ಲಿ ಈ ಜಮೀನು ತಮಗೆ ಮಂಜೂರಾಗಿದೆಯೆಂತಲೂ ಹೇಳಿಬಿಟ್ಟರು.

ಬಚ್ಚೇಗೌಡನ ಹುಟ್ಟೂರಾದ ಬೆಂಡಿಗಾನಹಳ್ಳಿಯ ರಾಜಶೇಖರಗೌಡ ಮತ್ತು ಗ್ಯಾಂಗ್ ಈ ಅತಿಕ್ರಮಣ ನಡೆಸಿತ್ತು. ಈ ಬಗ್ಗೆ ತನಿಖೆ ನಡೆಸಿದ ಅರಣ್ಯ ಇಲಾಖಾ ಸಿಬ್ಬಂದಿ ಮಹಜರ್ ವರದಿ ತಯಾರಿಸಿ, ಜಮೀನು ಅರಣ್ಯ ನಿಗಮಕ್ಕೆ ಸೇರಿದ್ದೆಂದು ದಾಖಲೆ ಸಹಿತ ಪ್ರತಿಪಾದಿಸಿದರೂ ಬಚ್ಚೇಗೌಡನ ಗ್ಯಾಂಗ್ ಕಿವಿಗೊಡಲಿಲ್ಲ. ಅದರ ಬದಲಾಗಿ ತಾವು ಲಪಟಾಯಿಸಿರುವ ಸರ್ಕಾರಿ ಜಮೀನಿಂದ ಲಾಭ ಮಾಡಿಕೊಳ್ಳಲು ಮುಂಬೈನ Itha developers ಎಂಬ ಮಾರ್ವಾಡಿಗಳ ಜೊತೆ ಡೀಲು ಕುದುರಿಸಿಕೊಂಡು ಅಕ್ರಮವಾಗಿ ಮಾರಾಟ ಮಾಡಿದ್ದಾರೆ.

ಅರಣ್ಯ ನಿಗಮದ ಶ್ರೀನಿವಾಸಪುರ ರೇಂಜಿನ ಅಧಿಕಾರಿಗಳು ಈ ಬಗ್ಗೆ ನಂದಗುಡಿ ಪೊಲೀಸರಿಗೆ ದೂರು ಕೊಟ್ಟರು. ಆದರೇನು ಬಚ್ಚೇಗೌಡನ ಬೆದರಿಕೆಯಿಂದಾಗಿ ಆರೋಪಿಗಳನ್ನು ಪೊಲೀಸರು ಹಿಡಿಯಲಿಲ್ಲ. ಹೊಸಕೋಟೆ-ಜಂಗಮಕೋಟೆ ರಸ್ತೆಯಲ್ಲಿರುವ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೇವಲ 15 ಕಿ.ಮೀ. ದೂರ ದಲ್ಲಿರುವ ಈ ಸರ್ಕಾರಿ ಜಮೀನಿಗೆ ಇವತ್ತು ಕೋಟಿಗಟ್ಟಲೆ ಬೆಲೆ ಇದೆ.


ಈ ಭೂಗಳ್ಳತನದ ಅಸಲಿ ವಂಚನೆ ಏನೆಂದರೆ ಅರಣ್ಯ ನಿಗಮಕ್ಕೆ ಹಸ್ತಾಂತರಿಸಲಾಗಿದ್ದ ಹಾಗೂ ಹುಣಸೆತೋಪು ಬೆಳೆಸಿದ್ದ 62.5 ಎಕರೆ ಜಾಗ ಹೊರತುಪಡಿಸಿದರೂ ಅದೇ ತನಿಯೂರಿನ ಸರ್ವೆ ನಂಬರ್ 17 ರಲ್ಲಿ ಇನ್ನೂ 170 ಎಕರೆಯಷ್ಟು ಸರ್ಕಾರಿ ಗೋಮಾಳ ಇದೆ. ಈಗ ಜಾಗದಲ್ಲಿ ಕೆಲವು ರೈತರು ಸಾಗುವಳಿ ಚೀಟಿ ಪಡೆದು ವ್ಯವಸಾಯ ಮಾಡಿಕೊಂಡಿದ್ದಾರೆ. ಆದರೆ ಈ ನೋಡಿದರೆ ಅದೇ ಗೋಮಾಳ ಜಮೀನು ಗೌರವ್ ಮಿತ್ತಲ್, ಅನಿಲ್ ಗುಪ್ತಾ, ರೋಷನ್ ಜಿಂದಾಲ್.... ಎಂಬ ಮಾರ್ವಾಡಿಗಳಿಗೆ ಮಂಜೂರಾಗಿಬಿಟ್ಟಿದೆ. ಅಸಲಿಗೆ ಇವರ್ಯಾರೂ ರೈತರಲ್ಲ, ಕರ್ನಾಟಕದವರಂತೂ ಮೊದಲೇ ಅಲ್ಲ! ಬದಲಾಗಿ ಮುಂಬೈನ ಈ ಖದೀಮರು ರಿಯಲ್ ಎಸ್ಟೇಟ್ ಕಳ್ಳರಾಗಿದ್ದು ಹಿತ ಡವಲಪರ್ಸ್‌ನವರಾಗಿದ್ದಾರೆ.

ಹೊಸಕೋಟೆಯವರೂ ಅಲ್ಲದ, ರೈತರೂ ಆಗಿರದ ಈ ಮಾರ್ವಾಡಿಗಳಿಗೆ ಬಗರ್ ಹುಕುಂನಡಿ ಸರ್ಕಾರಿ ಗೋಮಾಳ ಭೂಮಿಯನ್ನು ತಹಸೀಲ್ದಾರ್ ಹೇಗೆ ಮತ್ತು ಯಾಕೆ ಮಂಜೂರು ಮಾಡಿದನೆಂದು ಯಾರೂ ಕೇಳುತ್ತಿಲ್ಲ.

ಚೊಕ್ಕಸಂದ್ರದಲ್ಲೂ ಭೂಗಳ್ಳತನ

ಅತ್ತ ತನಿಯೂರು ಅರಣ್ಯ ಭೂಮಿ ಕಬಳಿಸುವ ತಂತ್ರ ಮಾಡಿ ಸಿಕ್ಕಿಬಿದ್ದಿರುವ ಬಚ್ಚೇಗೌಡನ ಗ್ಯಾಂಗ್ ಮತ್ತೊಂದೆಡೆ ಅದೇ ನಂದಗುಡಿ ಹೋಬಳಿಯ ಚೊಕ್ಕಸಂದ್ರದ ಮೇಲೂ ದಂಡೆತ್ತಿ ಹೋಗಿದ್ದಾರೆ. ಸರ್ವೆ ನಂಬರ್ 77 ರಲ್ಲಿರುವ ಸರ್ಕಾರಿ ಗೋಮಾಳದ ಮೇಲೂ ಇವರ ಕಾಕದೃಷ್ಟಿ ಬಿದ್ದಿದೆ.

ಬಚ್ಚೇಗೌಡನ ರಕ್ತ ಸಂಬಂಧಿಗಳಾದ ಚಿಕ್ಕವೆಂಕಟೇಗೌಡ, ರಾಮೇಗೌಡ, ಚಂದ್ರೇಗೌಡ, ಭೈರೇಗೌಡ, ಬಿ.ವಿ. ಪ್ರಕಾಶ್, ಗೌರಮ್ಮ ಕೋ ಹುಚ್ಚೇಗೌಡ, ಮೀನಮ್ಮ ಕೋಂ ರಾಮಾಂಜಿನಪ್ಪ ಇನ್ನೂ ಮುಂತಾದವರು ತಾವು ಭೂರಹಿತ ಬಡರೈತರೆಂತಲೂ, ತಮಗೆ ದರಖಾಸ್ತಿನಲ್ಲಿ ಚೊಕ್ಕಸಂದ್ರದ ಗೋಮಾಳ ಜಮೀನು ಮಂಜೂರು ಮಾಡುವಂತೆ ಅರ್ಜಿ ಕೊಟ್ಟು ಭೂಮಿ ಕಬಳಿಸಿದ್ದಾರೆ. ಅಂದಹಾಗೆ ಇವರು ಮೂನ್ನೂರು ಎಕರೆಗೂ ಹೆಚ್ಚು ಆಸ್ತಿಯಿರುವ ಜಮೀನ್ದಾರರು!



ರಾಜಶೇಖರಗೌಡನ ವಿರುದ್ಧ ಅರಣ್ಯ ಇಲಾಖೆ ವರದಿ.....

ಅಕ್ರಮ ಸಾಗುವಳಿ ಚೀಟಿ ಪಡೆದಿರುವ ಇವರೆಲ್ಲಾ ಈಗ ಹೊಸಕೋಟೆ ತಹಶೀಲ್ದಾರ್‌ಗೆ ಅರ್ಜಿ ಕೊಟ್ಟು ಜಮೀನು ಸರ್ವೆ ಮಾಡಿಸಿ ಪೋಡಿ ಮಾಡಿ ಕೊಡುವಂತೆ ಒತ್ತಡ ಹಾಕುತ್ತಿದ್ದಾರೆ.


ಬಚ್ಚೇಗೌಡನ ನೆಂಟರು ಹಾಗೂ ಭಂಟರು ಹೀಗೆ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಗೆ ಸೇರಿರುವ ನೂರಾರು ಎಕರೆ ಜಮೀನು ಕಬಳಿಸುತ್ತಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ತನಿಯೂರಿನ ಸರ್ವೆ ನಂ 17 ರಲ್ಲಿನ 62 ಎಕರೆ ಹುಣಸೆತೋಪನ್ನು ಬಚ್ಚೇಗೌಡನ ನೆಂಟರು ಕಡಿದುರುಳಿಸಿ ಲೇಔಟ್ ಮಾಡಿ ಸೈಟು ಮಾಡುವ ಪ್ರಯತ್ನಕ್ಕೆ ಈಗ ತಾತ್ಕಾಲಿಕ ತಡೆಯಾಜ್ಞೆ ಸಿಕ್ಕಿದೆ. ಅರಣ್ಯ ಅಭಿವೃದ್ಧಿ ನಿಗಮದ ಅಧಿಕಾರಿಗಳು ಈ ಕೆಲಸ ಮಾಡಿದ್ದಾರೆ. ಆದರೆ ಈ ಅತಿಕ್ರಮಣ ನಡೆದು ವರ್ಷವಾಗುತ್ತಾ ಬಂದಿದ್ದರೂ, ವಿಧಾನಸಭಾ ಅಧಿವೇಶನದಲ್ಲೂ ಚರ್ಚೆ ಯಾದರೂ ಅರಣ್ಯ ಇಲಾಖೆಯೂ ಯಾವೊಬ್ಬ ಹಿರಿಯ ಅಧಿಕಾರಿಯೂ ಸ್ಥಳ ಪರಿಶೀಲನೆಗೆ ಬಂದಿಲ್ಲ.



ಮರಕಡಿದುರುಳಿಸಿರುವುದು...

ಮತ್ತೊಂದೆಡೆ ಚೊಕ್ಕಸಂದ್ರದ ಗೋಮಾಳ ಜಮೀನನ್ನು ಬಚ್ಚೇಗೌಡನ ಬಂಧುಗಳಿಗೆ ಅಕ್ರಮವಾಗಿ ಮಂಜೂರು ಮಾಡುತ್ತಿರುವ ತಹಶೀಲ್ದಾರನ ಬಗ್ಗೆಯೂ ರೆವಿನ್ಯೂ ಇಲಾಖೆ ಕ್ರಮ ವಹಿಸುತ್ತಿಲ್ಲ, ಏನಿದರ ಅರ್ಥ? ●

ಕೊಳ್ಳೇಗಾಲ: ನಂಜುಂಡ ಎಮ್ಮೆಲ್ಲೆ ಆಗ್ಬೇಕಂತೆ




ಚಾಮರಾಜನಗರದ ಜಿಲ್ಲಾ ಪಂಚಾಯ್ತಿಯ ಹಂಗಾಮಿ ಅಧ್ಯಕ್ಷೆ ವಸಂ... ನಂಜುಂಡಸ್ವಾಮಿ ಅವರ ಪತಿರಾಯ ಮಾಂಬಳ್ಳಿ ನಂಜುಂಡಸ್ವಾಮಿ ಅರ್ಜೆಂಟಾ... ಎಮ್ಮೆಲ್ಲೆ ಆಗಬೇಕಂತೆ. ಹಾಗಂತ ಅವನೇ ಕಂಡಕಂಡಲ್ಲಿ ಹೇಳಿಕೊಂಡ... ತಿರುಗಾಡುತ್ತಿದ್ದಾನೆ. ಮೊನ್ನೆ ಕೊಳ್ಳೇಗಾಲಕ್ಕೆ ವೀಕ್ಷಕರಾಗಿ ಬಂದಿದ್ದ ಕಾಂಗ್ರೆ... ನಾಯಕರ ಮುಂದೆಯೂ ಈತ ಟಿಕೆಟಿಗಾಗಿ ಅಲವತ್ತುಕೊಂಡಿದ್ದಾನೆ. ಈ... ಸುದ್ದಿ ಕೇಳಿ ನಂಜುಂಡಸ್ವಾಮಿಯ ದಗಲ್ಬಾಜಿತನವನ್ನು ಕಂಡಿರುವವರು ಹೌಹಾರಿ... ದ್ದಾರೆ. ಯಾಕೆ ಗೊತ್ತೆ? ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯ ಗಂಡನಾಗಿರುವ ಒಂದೇ... ಕಾರಣಕ್ಕೆ ಈ ನಂಜುಂಡಸ್ವಾಮಿ ಮಾಡುತ್ತಿರುವ ಭಾನಗಡಿಗಳು ಆ ಮಟ್ಟಕ್ಕಿವೆ...

ಸಜ್ಜನ ರಾಜಕಾರಣಿ ಎಂದೆನಿಸಿಕೊಂಡಿರುವ ವಿ. ಶ್ರೀನಿವಾಸ್ ಪ್ರಸಾದ್... ರಾಜಕೀಯದಲ್ಲಿ ಮುಂದೆ ಬಂದ ಕಾಲದಿಂದಲೂ ಅವರ ಹಿಂದೆ ಬಾಲದಂತೆ... ಸುತ್ತುತ್ತಿದ್ದ ಈ ನಂಜುಂಡಸ್ವಾಮಿ ಅವರ ಹೆಸರು ಹೇಳಿಕೊಂಡೇ ಇನ್ನಿಲ್ಲದ... ಅವಾಂತರಗಳನ್ನು ನಡೆಸಿರುವುದನ್ನು ಕಂಡು ಸ್ವತಃ ತನ್ನ ಹುಟ್ಟೂರು ಮಾಂಬಳ್ಳಿಯ... ಜನರಿಂದಲೇ ಕ್ಯಾಕರಿಸಿ ಉಗಿಸಿಕೊಳ್ಳುವ ದಿನ ದೂರವಿಲ್ಲ.

ಸೋಗಲಾಡಿ ನಂಜುಂಡಸ್ವಾಮಿ

ಹಿಂದೊಮ್ಮೆ ವಿ.ಶ್ರೀನಿವಾಸ್‌ಪ್ರಸಾದ್ ಅವರು ಕೇಂದ್ರ ಸಚಿವರಾಗಿದ್ದಾ... ಗುತ್ತಿಗೆದಾರನಾದ ಈ ನಂಜುಂಡಸ್ವಾಮಿ ಎಂಬ ಸೋಗಲಾಡಿ ಮನುಷ್ಯ...





ಕಾಮಗಾರಿಯ ಹೆಸರಲ್ಲಿ ಸಾರ್ವಜನಿಕರಿಗೆ ಮುಂಡಾ... ಮೋಚತೊಡಗಿದ್ದೇ ಅಲ್ಲದೆ ಅಪಾರ ಪ್ರಮಾಣದ... ಹಣಮಾಡಿ ಪ್ರಸಾದ್ ಅಧಿಕಾರ ಮುಗಿಯುವ... ಹೊತ್ತಿಗಾಗಲೇ ಕುಬೇರನಾಗಿದ್ದ! ಆದರೆ ಈ ನಂಜುಂಡ ಸ್ವಾಮಿ ಎಂಥ ಕುತಂತ್ರಿ ಎಂದರೆ ಶ್ರೀನಿವಾಸ್ ಪ್ರಸಾದ್ ಮನೆಗೆ ವಾರಕ್ಕೆರಡುಬಾರಿ ಹೋಗಿ ಅವರ ಕಾಲಿಗೆ ಬಿದ್ದು ಬೆಣ್ಣೆಹಚ್ಚಿ ಬರುತ್ತಿದ್ದನಾದರೂ ಹೋಗುವಾಗ ಎಂದೂ ಚಪ್ಪಲಿ ಹಾಕಿಕೊಂಡು ಹೋಗ್ತಿರಲಿಲ್ಲ. ಪ್ರಸಾದ್ ಅವರೂ ಇವನ ಕಪಟ ತಿಳಿಯದೇ ಚಪ್ಪಲಿಗೂ ಗತಿ ಇಲ್ಲದ ತನ್ನ ಶಿಷ್ಯನ ಸ್ಥಿತಿ ನೋಡಿ, ಮರುಗಿ ಕಳೆದ ಚುನಾವಣೆಯಲ್ಲಿ ನಂಜುಂಡ ಸ್ವಾಮಿಯ ಹೆಂಡತಿಗೆ ಕಾಂಗ್ರೆಸ್‌ನಿಂದಲೇ ಟಿಕೆಟ್ ಕೊಡಿಸಿದರು.

ಹೆಂಡತಿಯ ಹೆಸರು, ಗಂಡನ.....

ತನ್ನ ಹೆಂಡತಿ ಜಿಲ್ಲಾ ಪಂಚಾಯ್ತಿ ಮೆಂಬರ್ ಆದದ್ದೇ ತಡ ಶುರುವಾಯಿತು ನಂಜುಂಡಸ್ವಾಮಿಯ ಕಾರುಬಾರು. ತಾನೇ ದೊಡ್ಡ ನಾಯಕ ಎಂಬಂತೆ ಗರಿಗರಿ ಬಿಳಿಬಟ್ಟೆ ತೊಟ್ಟು ಕೊಳ್ಳೇಗಾಲದ ತುಂಬೆಲ್ಲಾ ಪೋಸ್ ಕೊಡತೊಡಗಿದ. ಅದೇನು ನಂಜುಂಡಸ್ವಾಮಿಯ ಅದೃಷ್ಟವೋ ಅಥವಾ ಜಿಲ್ಲೆಯ ಜನರ ದುರಾದೃಷ್ಟವೋ, ಅದೇ ಸಮಯಕ್ಕೆ ಜಿಲ್ಲಾ ಪಂಚಾಯ್ತಿಯೊಳಗೆ ಕಿತ್ತಾಟ ಶುರುವಾಗಿ ಅಧ್ಯಕ್ಷರಾಗಿದ್ದವರನ್ನು ಅವಧಿ ಮುಗಿಯಿತೆಂದು ಕೆಳಗಿಳಿಸಿ ನಂಜುಂಡಸ್ವಾಮಿಯ ಹೆಂಡತಿ ವಸಂತ ನಂಜುಂಡಸ್ವಾಮಿಯನ್ನೇ ಹಂಗಾಮಿ ಅಧ್ಯಕ್ಷೆಯನ್ನಾಗಿ ಕೂರಿಸಿಬಿಟ್ಟರು. ಅದೊಂದು ಕಡಿಮೆಯಿತ್ತು ನಂಜುಂಡಸ್ವಾಮಿಯ ದರ್ಬಾರಿಗೆ. ಅಲ್ಲಿ ಹೆಂಡತಿ ನೆಪಮಾತ್ರ. ಕಚೇರಿಯೊಳಗೆ ಇಟ್ಟಿದ್ದ ರಾಷ್ಟ್ರನಾಯಕರ ಫೋಟೋಗಳ ಜೊತೆಗೆ ಶ್ರೀನಿವಾಸ್ ಪ್ರಸಾದ್‌ರವರದ್ದೂ ಒಂದು ಫೋಟೋ ತಗುಲಿಹಾಕಿ ಇವನು ಅಂದಾದುಂದಿಗಳನ್ನು ಶುರುವಿಕ್ಕಿದ. ಪಂಚಾಯ್ತಿ ವ್ಯಾಪ್ತಿಗೆ ಬರುವ ಅಧಿಕಾರಿಗಳನ್ನು ಏಕವಚನದಲ್ಲಿ ಕರೆಯುತ್ತಾ ಅವರನ್ನು ಗದರಿಸಿ ತನ್ನ ಅಂಕೆಯಲ್ಲಿಟ್ಟುಕೊಂಡು ಸರ್ಕಾರದಿಂದ ಬರುವ ಹಣವನ್ನೆಲ್ಲಾ ಮುಕ್ಕತೊಡಗಿದ. ಕೆಲ ಅಧಿಕಾರಿಗಳ ಪಾಲಿಗೆ ಬಂದಷ್ಟು ಬಾಚತೊಡಗಿದರು. ಯಾರೇ ಆಗಲಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಿಗೆ ಕರೆ ಮಾಡಿದರೆ ಅವರೊಂದಿಗೆ ಮಾತಾಡುತ್ತಿದ್ದುದು ಈ ಭೂಪನೇ ಹೊರತು ವಸಂತ ನಂಜುಂಡಸ್ವಾಮಿ ಅಲ್ಲ. ಇವನ ಉಪಟಳ ತಾಳಲಾರದೇ ಕೆಲವು ಅಧಿಕಾರಿಗಳು ತಿರುಗಿಬಿದ್ದದ್ದೂ ಇದೆ. ಆದರೆ ಅದಕ್ಕೆಲ್ಲಾ ಕೇರುಮಾಡಿದವನಲ್ಲ ಈ ನಂಜು ಉಂಡಸ್ವಾಮಿ.

ಬೆವರಿಳಿಸಿಕೊಂಡ ನಂಜುಂಡ

ಮೊನ್ನೆ ಕೊಳ್ಳೇಗಾಲದ ತಾಲ್ಲೂಕು ಪಂಚಾಯ್ತಿಯಲ್ಲಿ ನಡೆಯುತ್ತಿದ್ದ ಕೆ.ಡಿ.ಪಿ ಸಭೆಗೆ ತನ್ನ ಪತ್ನಿಯ ಸಂಗಡ ಹಾಜರಾಗಿದ್ದ ನಂಜುಂಡಸ್ವಾಮಿ ಅಲ್ಲಿದ್ದ ಅಧಿಕಾರಿಗಳ ಮೇಲೆ ಏಕಾಏಕಿ ತಾನುಂಡಿದ್ದ ನಂಜು ಕಾರತೊಡಗಿದ. ಕೊನೆಗೆ ಇದನ್ನು ಸಹಿಸದ ಜಲಾನಯನ ಅಧಿಕಾರಿ ತಿರುಗಿ ಬಿದ್ದು "ಈ ಸಭೆಯಲ್ಲಿ ನಮ್ಮನ್ನು ಮಾಹಿತಿ ಕೇಳಲು ತಾವ್ಯಾರು ಸ್ವಾಮಿ? ಅಧ್ಯಕ್ಷರು ಮಾಹಿತಿ ಕೇಳಿದ್ರೆ ನಮಗೆ ಕೊಡುವುದು ಗೊತ್ತಿದೆ. ತಾವು ತಮ್ಮ ರಂಧ್ರಗಳನ್ನು ಮುಚ್ಚಿಕೊಳ್ಳಬಹುದು" ಎಂಬರ್ಥಲ್ಲಿ ಮಾತಾಡಿದ್ದು ಕೇಳಿ ನಂಜುಂಡಸ್ವಾಮಿ ಬಾಟಮ್ಮಿಗೆ ಬೆಂಕಿಬಿದ್ದ ಹಾಗಾಗಿದೆ. ಯಾರಾದರೂ ಮುಖಕ್ಕೆ ಉಗಿದರೆ ಒರೆಸಿಕೊಂಡು ಮತ್ತೆ ಉಗಿಯಲು ಮುಖ ಕೊಡುವ ನಂಜುಂಡಸ್ವಾಮಿ ಇದೀಗ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಬರುವ ಬಿ.ಸಿ.ಎಂ, ಸಮಾಜಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ದಿಢೀರ್ ದಾಳಿ ನಡೆಸಿ ತಾಲ್ಲೂಕು ಪಂಚಾಯ್ತಿ, ಸಮಾಜಕಲ್ಯಾಣ ಅಧಿಕಾರಿಗಳಿಂದ ಕಮಾಯಿ ಕೀಳುವ ದಂಧೆಯಲ್ಲಿ ತೊಡಗಿದ್ದಾನೆ.

ಇಂತಿಪ್ಪ ನಂಜುಂಡಸ್ವಾಮಿ ತನ್ನ ಹೆಂಡತಿಗೆ ಸಿಕ್ಕಿರುವ ಅಧಿಕಾರವನ್ನು ತನ್ನದೇ ಅಧಿಕಾರವೆಂಬಂತೆ ದುರುಪಯೋಗಪಡಿಸಿಕೊಂಡು ಇದೀಗ ಎಮ್ಮೆಲ್ಲೆ ಆಗಲೂಹೊರಟಿದ್ದಾನೆಂದರೆ ಕೊಳ್ಳೇಗಾಲಕ್ಕೆ ನಾಯಿಮೊಟ್ಟೆ ಇದೋಮ್ಮೊ ಸುಳ್ಳ...

● ವರದಿಗಾರ

ಬಾಗಲಕೋಟೆ: ಜೈಲೊಳಗೂ ರಕ್ತ, ಆಸ್ಪತ್ರೆ ಸೇರಿದವನು ಮುತಾಲಿಕನ ಭಕ್ತ!




ಹಲ್ಲೆಗೊಳಗಾದ ಜಂಬಗಿ...

ತಾಲಿಕ್‌ನ ಆಪ್ತ ಕಾರ್ಯದರ್ಶಿ ನಾಗರಾಜ ಜಂಬಗಿಯ ಮೇಲೆ ಮಾರಣಾಂತಿಕ ನಡೆಸಿದವರು. ಅದೇ ಮುತಾಲಿಕ್ ಹುಟ್ಟು ಹಾಕಿದ ಕೊಲೆಗಡುಕ ಗ್ಯಾಂಗ್‌ನ ಸ್ಯರೇ. ನಿಜಕ್ಕೂ ಇದು ಒಳಜಗಳದಿಂದ ನಡೆಯಿತೋ ಅಥವಾ ಮೊದಲೇ ದಂತೆ ಪೂರ್ವಯೋಜಿತ ಕೃತ್ಯವಾಗಿದೆಯೋ ಎಂಬುದನ್ನು ಪೊಲೀಸರು ಶೀಘ್ರ ಹಚ್ಚಬೇಕಾಗಿದೆ.

ಮುತಾಲಿಕ್ ಎಂಬ ಮುಠ್ಠಾಳನ ಮಾತನ್ನು ಕೇಳಿ ಬ್ರಾಹ್ಮಣ್ಯದ ಬಡಿಗೆಗಳಾಗಿ ಬಳಕೆಯಾಗುತ್ತ ಶೂದ್ರ ಮಂಗಗಳು ಜೈಲಲ್ಲೇ ಕೊಲೆ ಮಾಡಲು ವೆ. ಮುತಾಲಿಕ್‌ನ ಆಪ್ತ ಕಾರ್ಯದರ್ಶಿ ನಾಗರಾಜ ಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದವರು. ಮುತಾಲಿಕ್ ಹುಟ್ಟು ಹಾಕಿದ ಕೊಲೆಗಡುಕ ನ ಸದಸ್ಯರೇ.

ಲೈ18ರಂದು ಶನಿವಾರ 11 ಗಂಟೆಗೆ ಬಾಗಲ ನವನಗರದ ಜೈಲಿನ ದಲ್ಲಿ ಕೈದಿಗಳು ಕೆಲಸದಲ್ಲಿ ನಿದ್ದರು. ಆಗ ರಮೇಶ್ , ಬಸವರಾಜ್ ರೂಗಿ, ರಾಜ ಡಿಗ್ಗಿ, ಬಂಡಿವಡ್ಡರ, ವಾರ, ದೀಪಕ್ ಕಲಾಲ– ನ್ನೊಳಗೊಂಡ ಗುಂಪು ಜ ಜಂಬಗಿಯ ಮೇಲೆ ದಾಳಿ ನಡೆಸಿದೆ. ಕಟ್ಟಿಗೆ, ಕುಡುಗೋಲುಗಳಿಂದ ಕಡೆ ಹೊಡೆದಿದ್ದಾರೆ. ಮಿದೆ ಸೀಳಿ ಹೋಗುವಂತೆ ಳು ಬಿದ್ದಿದ್ದರಿಂದ ಜಂಬಗಿ ಹೀನನಾಗಿ ಬಿದ್ದಿದ್ದಾನೆ. ಅವನ ಕುತ್ತಿಗೆ ಸೀಳಬೇಕು ಸ್ಯರಲ್ಲಿ ಸಹಕೈದಿಗಳು ದು ಜಂಬಗಿಯ ಪ್ರಾಣ ದ್ದಾರೆ. ಈಗ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿರುವ ಬದುಕುಳಿಯುವುದು ಕಷ್ಟವೆಂದೇ ವೈದ್ಯರು ದ್ದಾರೆ.



ಜಂಬಗಿ–ಮುತಾಲಿಕ್

ರೋಡೆ ಮಾಡಿದ ದುಡ್ಡನ್ನು ಹಂಚಿಕೊಳ್ಳುವಾಗ ಕ ದುಡ್ಡೆಲ್ಲವೂ ಜಂಬಗಿ ಪಾಲಾಗುತ್ತಿತ್ತು, ಇದು ಡುಕ ಪಡೆಯ ಇತರ ಸದಸ್ಯರಲ್ಲಿ ಅಸಮಾಧಾನ ತ್ತು, ತಮ್ಮ ಪರ ವಕಾಲತ್ತು ಮಾಡುವ ವಕೀಲರಿಗೆ ಡಲು ಇವರೆಲ್ಲ ಪರದಾಡುತ್ತಿದ್ದರು. ಮೊದಲು ನೇ ಜಾಮೀನು ಪಡೆದು ಹೊರಹೋಗಿ ನಂತರ ರಿಗೆ ಜಾಮೀನು ವ್ಯವಸ್ಥೆ ಮಾಡುವೆನೆಂದು ಜ ಜಂಬಗಿ ಹೇಳುತ್ತಿದ್ದ, ಇದೂ ಇತರ ಡುಕರಲ್ಲಿ ಸಿಟ್ಟು ತುಂಬಿತ್ತು, ಇದರ ಫಲಿತಾಂಶವೇ ಯತ್ನ..."

ಹೀಗೆ ಸಾಗುತ್ತದೆ ಪೊಲೀಸರ ಅಧಿಕೃತ ಹೇಳಿಕೆ. ಆದರೆ ಈ ಕಾಗಕ್ಕ–ಗುಬ್ಬಕ್ಕನ ಕತೆಯನ್ನು ಜನ ಸುಲಭವಾಗಿ ನಂಬುತ್ತಿಲ್ಲ.

ರಾಮಸೇನೆಯ ಸ್ಕೆಚ್ಚು?

ಈ ಅನುಮಾನ ಕೆಲವು ಪೊಲೀಸ್ ಅಧಿಕಾರಿಗಳನ್ನು ಕಾಡುತ್ತದೆ. ಹುಬ್ಬಳ್ಳಿಯ ನ್ಯಾಯಾಲಯ ಸ್ಫೋಟಕ್ಕೆ ಶ್ರೀರಾಮಸೇನೆಯ ಮುಖಂಡ ಪ್ರಮೋದ್ ಮುತಾಲಿಕ್‌ನೇ ಸಂಚು ರೂಪಿಸಿದ್ದ ಎಂದು ಜಂಬಗಿ ಪೊಲೀಸರ ವಿಚಾರಣೆಯ ವೇಳೆ ಬಾಯಿಬಿಟ್ಟಿದ್ದ ಎನ್ನಲಾಗುತ್ತಿದ್ದು ತನ್ನ ಪ್ರಭಾವ ಬಳಸಿ ಅದನ್ನು ಅಲ್ಲಿಗೆ ಮುಗಿಸಲು ಮುತಾಲಿಕ್ ಯಶಸ್ವಿಯಾಗಿದ್ದ ಎಂಬ ಸಂಶಯಗಳೂ ಇವೆ. ತನ್ನ ಹೇಳಿಕೆಯನ್ನು ನ್ಯಾಯಾಧೀಶರ ಮುಂದೆಯೂ ಪುನರುಚ್ಚರಿಸಲು ಜಂಬಗಿ ನಿರ್ಧಾರ ಮಾಡಿದ್ದ ಎನ್ನಲಾಗಿದೆ. ಈ ಹಿನ್ನೆಲೆಯಲ್ಲೇ ಜಂಬಗಿಯನ್ನು ಜೈಲಲ್ಲೇ ಮುಗಿಸುವ ಸಂಚು ನಡೆದಿದೆ ಎಂದು ಸ್ಥಳೀಯ ಪೊಲೀಸರು ಅಲ್ಲಲ್ಲಿ ಶಂಕೆ ವ್ಯಕ್ತಪಡಿಸುತ್ತಿದ್ದಾರೆ.




ತುಳಸೀಗೇರಿ

ಮುತಾಲಿಕ್ ತಮ್ಮಿಂದ ದೂರವಿದ್ದರೂ ಹಿಂದುತ್ವದ ಕಾರಣಕ್ಕಾಗಿ ಆತನ ಬಗ್ಗೆ ಗೃಹಸಚಿವ ವಿ.ಎಸ್.ಆಚಾರ್ಯರಿಗೆ ಮೃದುಧೋರಣೆಯಿದೆ. ಇಲ್ಲವಾದರೆ ನೂರೆಂಟು ಕೇಸುಗಳಲ್ಲಿರುವ ಮುತಾಲಿಕ್ ಎಂದೋ ಜೈಲು ಪಾಲಾಗಿರುತ್ತಿದ್ದ.

87 ಕೈದಿಗಳಿರುವ ಈ ಜೈಲಿನಲ್ಲಿ ಅಂದು ಜಂಬಗಿಯ ಹತ್ಯಾಯತ್ನ ನಡೆದಾಗ ಜೈಲು ಅಧೀಕ್ಷಕ ಅಂಬಿಗೇರ ರಜೆಯಲ್ಲಿದ್ದರು. ಇನ್‌ಚಾರ್ಜ್‌ನಲ್ಲಿದ್ದ ಮನೋಹರ್ ಮುಳ್ಳೂರ್ ಜೊತೆಗಿದ್ದುದು ಕೇವಲ ಮೂವರು ಪೇದೆಗಳು ಮಾತ್ರ! ಇದು ಕೂಡಾ ತನಿಖೆಯಾಗಬೇಕಲ್ಲವೇ? ಜೈಲಿನಲ್ಲಿ ಜಂಬಗಿಯ ಮೊಬೈಲ್ ಮತ್ತು ಚಾರ್ಜರ್ ಸಿಕ್ಕಿವೆ. ಮೊಬೈಲ್ ಬಳಸಲು ಅವಕಾಶ ಕೊಟ್ಟವರ್‍ಯಾರು, ಆ ಮೊಬೈಲ್‌ಗೆ ಬಂದ ಮತ್ತು ಮೊಬೈಲ್‌ನಿಂದ ಹೋದ ಕರೆಗಳ್ಯಾವವು ಎಂಬುದನ್ನು ವಿಚಾರಣೆಗೆ ಒಳಪಡಿಸಿದರೆ ಸಂಪೂರ್ಣ ಸತ್ಯ ಹೊರಬೀಳಬಹುದೇನೋ?

ಹಿಂದೂತ್ವಕ್ಕಾಗಿ ಹಿಂದೂಗಳ ಕೊಲೆ

ಈ ಜಂಬಗಿ, ಪವಾರ್, ಕಲಾಲ್, ಡಿಗ್ಗಿಗಳೆಲ್ಲ ಭಜರಂಗದಳದಲ್ಲಿ ಮುತಾಲಿಕ್‌ನ ಆಪ್ತರಾಗಿದ್ದರು. ಭಜರಂಗದಳದಿಂದ ಮುತಾಲಿಕ್ ಹೊರಬಿದ್ದಾಗ ಅವನೊಂದಿಗೆ ಈ ಮರಿಮಂಗಗಳು ಹೊರಬಂದು ಶ್ರೀರಾಮಸೇನೆ ಎಂಬ ಕಪಿಸೇನೆ ಮಾಡಿಕೊಂಡವು. ಹಿಂದೂಗಳ ರಕ್ಷಣೆಗಾಗಿ ಸಶಸ್ತ್ರ ಪಡೆ ಕಟ್ಟುತ್ತೇನೆಂದು ಹಾರಾಡಿದ ಮುತಾಲಿಕ್ ಜಂಬಗಿಯಂತಹ ಹುಂಬರನ್ನು ತನ್ನ ಕೆಲಸಕ್ಕೆ ಬಳಸಿಕೊಳ್ಳತೊಡಗಿದ. ಮುಂದೆ ಮುತಾಲಿಕ್ ಬೆಳಗಾವಿಯಲ್ಲಿ 'ಟೈಗರ್ ಗ್ಯಾಂಗ್' ಕಟ್ಟಿದ. ಇದರ ಉದ್ದೇಶ ಯಾವ ಹಿಂದೂವಿನ ರಕ್ಷಣೆಯೂ ಆಗಿರಲಿಲ್ಲ, ಇದು ಪಕ್ಕಾ ದರೋಡೆಕೋರರ ತಂಡವಾಗಿತ್ತು. ಹಣಕ್ಕಾಗಿ ಕೊಲೆಗಳನ್ನು ಮಾಡುತ್ತಾ ಹೋಯಿತು. ಈ ಹಿಂದೂ ರಕ್ಷಕರು ಕಾಸಿಗಾಗಿ ಹಿಂದೂಗಳನ್ನೇ ಕೊಲ್ಲುತ್ತಾ ಬಂದರು. ಹೀಗೆ ಹುಂಬ ಶೂದ್ರರನ್ನು ಫೀಲ್ಡಿಗೆ ಬಿಟ್ಟ ಚಡ್ಡಿ ಮುತಾಲಿಕ್ ಮಾತ್ರ ತಾನು ಆರಾಮಾಗಿದ್ದು ಕೊಳ್ಳೆ ಹೊಡೆದ ಹಣ ಎಣಿಸಿಕೊಳ್ಳುತ್ತಿದ್ದ. ಇದರಲ್ಲೊಂದಿಷ್ಟು ಹಣ ಮಲೆಂಗಾವ್ ಸ್ಫೋಟದ ರೂವಾರಿ ಪ್ರಜ್ಞಾ ಸಿಂಗ್‌ಗೂ ಮುಟ್ಟಿದೆ ಎಂಬ ಗುಮಾನಿಯಿದೆ.



'ಟೈಗರ್ ಗ್ಯಾಂಗ್'ಗೆ ಆರಂಭದಲ್ಲಿ ಮುಖಂಡನಾಗಿದ್ದವನು ಬೆಳಗಾವಿಯ ವಿಕೃತ ಕಾಮಿ ಕೊಲೆಗಡುಕ ಪ್ರವೀಣ್ ಶಿಂತ್ರೆ. 2008ರಲ್ಲಿ ಈ ಸುಫಾರಿ ಹಂತಕ ಶಿಂತ್ರೆಯನ್ನು ಸಿಪಿಐ ನಾರಾಯಣ ಭರಮನಿ, ಪಿಎಸ್‌ಐ ತುಳಸೀಗೇರಿ ಎನ್‌ಕೌಂಟರ್‌ನಲ್ಲಿ ನಿಕಾಲಿ ಮಾಡಿದರು. ನಂತರ ಇದರ ಉಸ್ತುವಾರಿ ವಹಿಸಿಕೊಂಡವನೇ ಮುತಾಲಿಕ್‌ನ ಮೆಚ್ಚಿನ ಶಿಷ್ಯ ನಾಗರಾಜ ಜಂಬಗಿ, ಬಸವರಾಜ ರೂಗಿ, ರಮೇಶ್ ಪವಾರ್, ದೀಪಕ್ ಕಲಾಲ, ಬಸವರಾಜ್ ಡಿಗ್ಗಿ, ಮಂಜುನಾಥ ಬಜವಾಡ, ಲಿಂಗರಾಜ ಜಾಲಗಾರ, ಲಕ್ಷ್ಮಣ ಬಂಡಿವಡ್ಡರ್, ಹನುಮಂತ, ಚನ್ನಬಸಪ್ಪ ಹುಣಸಗಿ ಮುಂತಾದ ಪಾತಕಿಗಳು ಜಂಬಗಿಯ ಸಹಚರರಾದರು.

ಮುತಾಲಿಕ್‌ನ ಆಣತಿಯಂತೆ ದುಡ್ಡಿಗಾಗಿ ಕೊಲೆಗಳ ಸರಣಿಯನ್ನೇ ನಡೆಸಿತು. ಈ ಗ್ಯಾಂಗ್ ಗೋಕಾಕಿನಲ್ಲಿ ರಿಯಾಜ್ ಅಹ್ಮದ್, ಕುಮಾರಕರ್ಣ ಎಂಬುವವರನ್ನು ಕೊಂದು ಹಣ ದೋಚಿತು. ನಂತರ ಬಾಗಲಕೋಟೆಗೆ ವಕ್ಕರಿಸಿದ ಗ್ಯಾಂಗ್ ರಾಠಿ ದಂಪತಿಗಳನ್ನು ಕೊಂದು ನಗನಾಣ್ಯ ದೋಚಿತು. ನಂತರದಲ್ಲಿ ಉದ್ಯಮಿ ಕಿರಣ ಕುಮಟಗಿ, ಬಿಜಾಪುರದ ಅಪ್ಪಾಸಾಬ ಹಿಟ್ನಳ್ಳಿಯವರ ಹತ್ಯೆ ಮಾಡಿತು.

ಈ ಹತ್ಯೆಗಳ ಬೆನ್ನು ಹತ್ತಿದ ಎಸ್ಪಿ ರಮೇಶ್ ಹರಿಹರ, ಆಗಿನ ಬಾದಾಮಿ ಪಿಎಸ್‌ಐ ಚಿದಂಬರ ವಿ.ಎಂ., ಎಸ್‌ಐ ತುಳಸೀಗೇರಿ ನೇತೃತ್ವದ ತಂಡ ಕಳೆದ ವರ್ಷ ಇವರನ್ನು ಹಿಡಿದು ಒಳಹಾಕಿತು.

ಕೋರ್ಟ್ ಬ್ಲಾಸ್ಟ

ದರೋಡೆಕೋರರು ಕದ್ದ ದುಡ್ಡು ಮುತಾಲಿಕ್‌ನ ಜೇಬು ಸೇರುತ್ತಿತ್ತು. ಸದಾ ಸಾಬರ ವಿರುದ್ಧ ಕತ್ತಿ ಮಸೆಯುವ ಮನೆಹಾಳ ಮುತಾಲಿಕ್ ಈ ಗ್ಯಾಂಗ್ ಬಳಸಿಕೊಂಡು ಹುಬ್ಬಳ್ಳಿ ಕೋರ್ಟ್‌ನಲ್ಲಿ ಬ್ಲಾಸ್ಟ್ ಮಾಡಿದ್ದ. ಮುತಾಲಿಕ್ ಅಂದುಕೊಂಡಂತೆ ಪೊಲೀಸರು ಅದನ್ನು ಮುಸ್ಲಿಮರ ತಲೆಗೆ ಕಟ್ಟಿಬಿಟ್ಟಿದ್ದರು. ಧಾರವಾಡದ ಬಳಿ ಸೇತುವೆಯೊಂದನ್ನು ಸ್ಫೋಟಿಸಲು ವಿಫಲಯತ್ನ ನಡೆಸಿತ್ತು ಈ ಗ್ಯಾಂಗ್.


ಈ ಕೊಲೆಗಡುಕರ ಮಾಸ್ಟರ್ ಮುತಾಲಿಕ್ ಎನ್ನಲು ಸಾಕಷ್ಟು ಸಾಕ್ಷ್ಯಾಧಾರಗಳಿದ್ದರೂ ಪೊಲೀಸರು ತಮ್ಮ ಇಲಾಖೆಯ 'ಹಿರಿಯರ' ಅಲಿಖಿತ ಆದೇಶದನ್ವಯ ಮುತಾಲಿಕ್‌ನನ್ನು ಈ ಕೇಸಿನಿಂದ ಹೊರಗೇ ಇಟ್ಟರು.

ಅಲ್ಲಿಯವರೆಗೆ ಈ ಪಾತಕಿಗಳನ್ನು ಬಳಸಿಕೊಳ್ಳುತ್ತಾ ಬಂದ ನೀಚ ಮುತಾಲಿಕ್, ಅವರ ಜಾಮೀನಿಗೂ ಪ್ರಯತ್ನಿಸಲಿಲ್ಲ. ಈಗ ಜೈಲಲ್ಲಿ ಅವರವರೇ ಬಡಿದಾಡಿಕೊಂಡು ಒಬ್ಬ ಸಾವಿನ ಸಮೀಪ ಹೋಗಿದ್ದಾನೆ. ನಿಜಕ್ಕೂ ಇದು ಒಳಜಗಳದಿಂದ ನಡೆಯಿತೋ ಅಥವಾ ಮೊದಲೇ ಹೇಳಿದಂತೆ ಪೂರ್ವಯೋಜಿತ ಕೃತ್ಯವಾಗಿದೆಯೋ ಎಂಬುದನ್ನು ಪೊಲೀಸರು ಶೀಘ್ರ ಪತ್ತೆಹಚ್ಚಬೇಕಾಗಿದೆ.

ಆದಷ್ಟು ಕೂಡಲೇ ಜಂಬಗಿಯ ಹೇಳಿಕೆ ಪಡೆಯುವುದು ಪೊಲೀಸರ ಜವಾಬ್ದಾರಿಯಾಗಿದೆ.

● ವರದಿಗಾರ

ಹಾವೇರಿ: ಉದಾಸಿ ನೆರಳಲ್ಲಿ ಗೊಬ್ಬರ ಮಾಫಿಯಾ!


ಉದಾಸಿ

ಗೊಬ್ಬರಕ್ಕಾಗಿ ಹಾವೇರಿ ಜಿಲ್ಲೆಯಲ್ಲಾಗುತ್ತಿರುವ ಗಲಾಟೆ ಸದ್ಯಕ್ಕೆ ನಿಲ್ಲುವ ಸೂಚನೆಗಳು ಕಾಣಿಸುತ್ತಿಲ್ಲ. ಕಳೆದ ವರ್ಷ ಗೊಬ್ಬರ ಕೇಳಿದ್ದಕ್ಕೆ ರೈತರೆದೆಗೆ ಗುಂಡಿಕ್ಕಿ ಇಬ್ಬರು ರೈತರನ್ನು ಕೊಂದಿದ್ದ ಜಿಲ್ಲಾಡಳಿತ, ಈ ವರ್ಷವೂ ಜಿಲ್ಲೆಯಲ್ಲಿ ಗೊಬ್ಬರದ ಅಭಾವಕ್ಕೆ ಏಕಮೇವ ಕಾರಣವಾಗಿದೆ. ಇದೆಲ್ಲದರ ಹಿಂದೆ ಜಿಲ್ಲಾ ಉಸ್ತುವಾರಿ ಮಂತ್ರಿ ಸಿ.ಎಂ.ಉದಾಸಿಯ ಕೈವಾಡವಿದೆ.



ಜಿಲ್ಲೆಯಲ್ಲಿರುವ ಖಾಸಗಿ ಗೊಬ್ಬರ ಮಾರಾಟಗಾರರು ಉದಾಸಿ ನೆರಳಲ್ಲೇ ಮಾಫಿಯಾ ಕಟ್ಟಿಕೊಂಡಿರುವುದರಿಂದ ರೈತ ಸಮುದಾಯಕ್ಕೆ ಸಕಾಲದಲ್ಲಿ ಸಮರ್ಪಕವಾಗಿ ಗೊಬ್ಬರ ಸಿಗುತ್ತಿಲ್ಲ. ಉದಾಸಿಯ ಇಂಥ ದಲ್ಲಾಳಿ ರಾಜಕಾರಣವನ್ನು ಮುಚ್ಚಿಹಾಕಲೆಂದೇ ಕಳೆದ ವರ್ಷ ಗೋಲಿಬಾರ್ ನಡೆದಿತ್ತು. ಈ ಸಲದ ಮುಂಗಾರು ಹಂಗಾಮಿನಲ್ಲೂ ಹಾವೇರಿ ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆಯಾಗಿದೆ. ಹಾಗೆ ಗೊಬ್ಬರ ಕೊರತೆಯಾಗಲು ಮತ್ತದೇ ಉದಾಸಿ ಕೃಪಾಪೋಷಿತ ರಸಗೊಬ್ಬರ ಮಾಫಿಯಾವೇ ಕಾರಣ ಎಂಬುದೀಗ ಜಗಜ್ಜಾಹೀರಾಗಿದೆ.

ಎರಡು ವರ್ಷಗಳ ಹಿಂದಿನ ತನಕ ಮಳೆ ಬಿದ್ದ ಮೇಲೆ ಬೆಳೆ ಬೆಳೆಯಲಿಕ್ಕೆ ರೈತರಿಗೆ ಡಿಎಪಿ ಗೊಬ್ಬರ ವಿತರಣೆಯಾಗುತ್ತಿದ್ದುದರಿಂದ ಅಷ್ಟೇನೂ ತೊಂದರೆಯಾಗುತ್ತಿರಲಿಲ್ಲ. ಆದರೆ ಯಾವಾಗ ಜಿಲ್ಲೆಯಾದ್ಯಂತ ಭಾರತೀಯ ಜನತಾ ಪಕ್ಷವೆಂಬ ಲೂಟಿಕೋರರ ಗುಂಪಿನ ಉದಾಸಿ ನೇತೃತ್ವದ ಸಾಮ್ರಾಜ್ಯ ವಿಸ್ತರಣೆಯಾಯಿತೋ ರೈತರಿಗೆ ಕೇಡುಗಾಲ ಶುರುವಾಯಿತು. ಸರ್ಕಾರದಿಂದ ಬರುವ ಗೊಬ್ಬರ ನ್ಯಾಯಯುತವಾಗಿ ಐದು ಎಕರೆಗಿಂತ ಕಡಿಮೆ ಪಟ್ಟಾ ಹೊಂದಿರುವ ರೈತರಿಗೆ ಹಂಚಿಕೆಯಾಗಬೇಕಾಗುತ್ತದೆ. ಜಿಲ್ಲೆಯಾದ್ಯಂತ ಐದು ಎಕರೆಗಿಂತ ಕಡಿಮೆ ಜಮೀನು ಹೊಂದಿದ ರೈತರೇ ಹೆಚ್ಚು ಇರುವುದರಿಂದ, ಸರ್ಕಾರದಿಂದ ಬಂದ ಗೊಬ್ಬರ ಅವರಿಗೆ ಪರಿಪೂರ್ಣವಾಗಿ ದೊರಕಿದರೆ ಯಾವ ಗಲಾಟೆಯೂ ಉದ್ಭವವಾಗುವುದಿಲ್ಲ.




ಆದರೆ ಉದಾಸಿ ಆಡಳಿತ ಪ್ರಾರಂಭವಾದಾಗಿನಿಂದ ಗೊಬ್ಬರಕ್ಕಾಗಿ ಇಲ್ಲಿಯ ರೈತರ ಪರದಾಟ ಪ್ರಾರಂಭವಾಯಿತು. ಕಳೆದ ವರ್ಷ ಮಾತ್ರವಲ್ಲ, ಎರಡು ತಿಂಗಳ ಹಿಂದೆಯೇ ರಾಣೆಬೆನ್ನೂರು, ಬ್ಯಾಡಗಿ, ಹಿರೇಕೆರೂರುಗಳಲ್ಲಿ ಗೊಬ್ಬರಕ್ಕಾಗಿ ರೈತರು ದಂಗೆಯೆದ್ದಿದ್ದರು. ಅದಕ್ಕೆ ಕಾರಣ ಉದಾಸಿ ತನ್ನ ಮನೆನಾಯಿಗಳಂತೆ ಮಾಡಿಕೊಂಡಿರುವ ಶಿವರಾಜ್ ಸಜ್ಜನರ್, ನೆಹರು ಓಲೇಕಾರ್, ಸುರೇಶ್ ಗೌಡ್ರುಗಳ ಮೂಲಕ ಖಾಸಗಿಗೊಬ್ಬರ ದಾಸ್ತಾನುಗಾರರಿಗೆ ಸೆಕ್ಯೂರಿಟಿ ಕೊಡಿಸಲಾರಂಭಿಸಿದ್ದು, ಜೊತೆಗೆ ಸರ್ಕಾರದಿಂದ ಬಂದ ಗೊಬ್ಬರವನ್ನು ರೈತರಿಗೆ ಕೊಡದೇ ರಾತ್ರೋರಾತ್ರಿ ನಲವತ್ತು-ಐವತ್ತು ಎಕರೆ ಜಮೀನು ಹೊಂದಿರುವ ರೈತರಿಗೆ ಸಪ್ಲೈ ಆಗುವಂತೆ ನೋಡಿಕೊಂಡಿದ್ದು.

ಹೀಗೆ ಸರ್ಕಾರದಿಂದ ಬರುವ ಗೊಬ್ಬರ ಕಾಳಸಂತೆಕೋರರಿಗೆ ಮಾರಾಟವಾಗಿದ್ದರಿಂದ ರೈತರು ಖಾಸಗಿ ಗೊಬ್ಬರದಂಗಡಿಗಳಲ್ಲಿ ಡಬಲ್ ರೇಟ್ ಕೊಟ್ಟು ಗೊಬ್ಬರ ಖರೀದಿಸಿ ಮತ್ತೆ ಸಾಲಗಾರರಾದರು. ಈ ಬೆಳೆ ಚಿಗುರುತ್ತಿದೆ. ಮಳೆ ಕೂಡ ಹದವಾಗಿ ಬಿದ್ದಿದೆ. ಹೀಗಾಗಿ ರೈತರಿಗ ಈಗ ಯೂರಿಯಾ ಗೊಬ್ಬರ ಬೇಕೇಬೇಕಾಗಿದೆ. ಅವರೆಲ್ಲ ಈಗ ಯೂರಿಯಾ ಗೊಬ್ಬರಕ್ಕಾಗಿ ಸಹಕಾರಿ ಸಂಘಗಳೆದುರು ಲಗ್ಗೆಯಿಟ್ಟರೂ ಗೊಬ್ಬರ ಸಮರ್ಪಕವಾಗಿ ಸಿಗುತ್ತಿಲ್ಲ. ಆ ಕಾರಣಕ್ಕೇ ರೈತರು ಮತ್ತೆ ಪುಟಿಭಟಿಸುತ್ತಿದ್ದಾರೆ.

ಆದರೆ ಉದಾಸಿ ಮಾತ್ರ ಹಿಂದಿನ ಬಾಗಿಲಿನಿಂದ ಖಾಸಗಿ ಗೊಬ್ಬರ ದಾಸ್ತಾನುಗಾರರಿಗೆ ಅಕ್ರಮವಾಗಿ ಗೊಬ್ಬರ ಸರಬರಾಜಾಗುವಂತೆ ನೋಡಿಕೊಳ್ಳುತ್ತಲೇ ಮುಂದಿನ ಬಾಗಿಲಿನಿಂದ ಗೊಬ್ಬರದ ಅಭಾವವಿಲ್ಲವೆಂದು ಹೇಳುತ್ತಾ ರೈತರ ತಾಳ್ಮೆ ಪರೀಕ್ಷಿಸುವ ನಾಟಕವಾಡುತ್ತಿದ್ದಾನೆ. ಈ ಮಧ್ಯೆ ಖಾಸಗಿ ಗೊಬ್ಬರದಂಗಡಿಗಳಲ್ಲಿ 260 ರೂಪಾಯಿ ಬೆಲೆಯ ಯೂರಿಯಾ ಗೊಬ್ಬರ 350 ರೂಪಾಯಿಗೆ ಮಾರಾಟವಾಗುತ್ತಾ ರೈತರನ್ನು ಸುಲಿದು ಕೊಬ್ಬುತ್ತಿದ್ದಾರೆ.

ಈವರೆಗೆ ಜಿಲ್ಲೆಗೆ ಬಿಡುಗಡೆಯಾಗಿರುವ ರಸಗೊಬ್ಬರ ಪ್ರಮಾಣದಲ್ಲಿಯೂ ದೊಡ್ಡದೊಂದು ಅವ್ಯವಹಾರ ನಡೆದಿದೆ. ಸರ್ಕಾರ ಈ ತನಕ ಯಾವ್ಯಾವ ಸೊಸೈಟಿಗಳು ಎಷ್ಟೆಷ್ಟು ಗೊಬ್ಬರ ವಿತರಿಸಿದೆ? ಖಾಸಗಿ ಕಂಪನಿಗಳಿಗೆ ಎಲ್ಲಿಂದ ಗೊಬ್ಬರ ಲಭ್ಯವಾಗುತ್ತಿದೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿಲ್ಲದಿದ್ದರೂ ಉದಾಸಿಗೆ ಮಾತ್ರ ಅದೆಲ್ಲ ಚೆನ್ನಾಗಿ ಗೊತ್ತಿರುವುದು ಕಾಕತಾಳೀಯವಲ್ಲ. ಏಕೆಂದರೆ ರಸಗೊಬ್ಬರದ ಅಭಾವ ಉಂಟಾಗಲಿಕ್ಕೆ ಬಹುಮುಖ್ಯ ಪಾತ್ರ ವಹಿಸಿರುವ ಉದಾಸಿ ಎಲ್ಲಿಯೂ ಗೊಬ್ಬರ ಸರಬರಾಜಿನ ದಾಖಲೆಗಳು ಹೊರಬೀಳದಂತೆ ನೋಡಿಕೊಳ್ಳುತ್ತಿದ್ದಾರೆ.

ಆದಾಗ್ಯೂ ಸರ್ಕಾರಿ ದಾಖಲೆಗಳನ್ನು ತಡಕಾಡಿದರೆ ಒಂದು ಅಂದಾಜಿನ ಲೆಕ್ಕ ಸಿಗುತ್ತದೆ. ಕೃಷಿ ತಜ್ಞರ ಪ್ರಕಾರ ಪ್ರಸಕ್ತ ಮುಂಗಾರು ಹಂಗಾಮಿಗೆ ಒಟ್ಟು 1.60 ಲಕ್ಷ ಟನ್ ರಸಗೊಬ್ಬರ ಹಾವೇರಿ ಜಿಲ್ಲೆಗೆ ಬೇಕಾಗಿದೆ.



ಇದರಲ್ಲಿ ಜೂನ್ ತಿಂಗಳ ತನಕ DAP-5404 ಟನ್, MoC-1900 ಟನ್,NPK-1950 ಟನ್, ಯೂರಿಯಾ 2498 ಟನ್ ಹಂಚಿಕೆಯಾಗಿದೆಯಂತೆ. ಆದರೆ ಹಾವೇರಿಯಲ್ಲಿ ಇವತ್ತಿನ ತನಕ ರೈತರಿಗೆ ಸಿಕ್ಕ ಯೂರಿಯಾ ಗೊಬ್ಬರದ ಪ್ರಮಾಣ ಬರೀ 150 ಟನ್‌ಗಳು. ಹಾಗಾದರೆ ಕೇಂದ್ರ ಸರ್ಕಾರ ಈತನಕ ಕಳಿಸಿರುವ ಒಟ್ಟು 12 ಲಕ್ಷ ಟನ್ ರಸಗೊಬ್ಬರದಲ್ಲಿ ಹಾವೇರಿ ಜಿಲ್ಲೆಗೆ ದಕ್ಕಿರುವುದೆಷ್ಟು? ಅದರಲ್ಲಿ ರೈತರಿಗೆ ಸಿಕ್ಕಿದ್ದೆಷ್ಟು? ಇವೆರಡೂ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೋದರೆ ಅಧಿಕಾರಿಗಳಿಂದ ಹಿಡಿದು ಚಪ್ರಾಸಿತನಕ ಸಿಗುವ ಉತ್ತರ ಒಂದೇ: ಉದಾಸಿ!

ಇದೆಲ್ಲದರ ನಡುವೆ ಮುಖ್ಯಮಂತ್ರಿ ಸ್ಥಾನಕ್ಕೇನೆ ನಾಲಾಯಕ್ ಆಗಿರುವ ಯಡಿಯೂರಪ್ಪ ತನ್ನ ಎಲ್ಲ ಅಸಮರ್ಥತೆಗಳಿಗೆ ಕೇಂದ್ರ ಸರ್ಕಾರದತ್ತ ಉಗುಳುವುದನ್ನು ರೂಢಿ ಮಾಡಿಕೊಂಡಿದ್ದಾನೆ. ರಾಜ್ಯದ ಬಸ್ ದರ ಏರಿದರೂ ಕೇಂದ್ರವೇ ಕಾರಣವೆಂದು ಬಾಯಿಬಡಿದುಕೊಳ್ಳುವ ಯಡ್ಡಿ ರಸಗೊಬ್ಬರ ಪೂರೈಕೆಯ ವಿಷಯದಲ್ಲೂ ಕೇಂದ್ರವನ್ನೇ ದೂರುತ್ತಿದ್ದಾನೆ.

ಇನ್ನು ಕೃಷಿ ಮಂತ್ರಿ ರವೀಂದ್ರನಾಥನ ವರತಾಗಳೇ ವಿಚಿತ್ರವಾಗಿವೆ. ತಾನೊಬ್ಬ ಕೃಷಿ ಮಂತ್ರಿ ಎಂಬುದನ್ನೂ ಮರೆತಿರುವ ರವೀಂದ್ರನಾಥ ಐಬಿಗಳ ಏರ್‌ಕಂಡೀಷನ್ ರೂಮಿನಲ್ಲಿ ಕೂತು ಹಾವೇರಿ ಜಿಲ್ಲೆಗೆ ಸಂಬಂಧಿಸದ ಹೇಳಿಕೆಗಳನ್ನು ನೀಡುವಲ್ಲಿ ನಿರತನಾಗಿದ್ದಾನೆ.

ಇನ್ನು ಹಾವೇರಿಯಲ್ಲಿನ ಖಾಸಗಿ ಆಗ್ರೋ ಕಂಪನಿಗಳೆಲ್ಲ ಲಿಂಗಾಯತರ ಪಾದದಡಿ ಇರುವುದರಿಂದ ಗೊಬ್ಬರ ಮಾಫಿಯಾದ ಪಟೇಲರಾಗಿಯೂ ಅವರೇ ಕಾಣುತ್ತಿದ್ದಾರೆ. ಜಿಲ್ಲೆಯಲ್ಲಿ ಬಿಜೆಪಿ ತಳವೂರಲು ಈ ಮಾಫಿಯಾದ ಲಿಂಗವಂತರ ಪಾತ್ರ ಸಾಕಷ್ಟಿದೆ. ಚುನಾವಣೆ ಸಂದರ್ಭದಲ್ಲಿ ಜಾತಿನಂಜಿನ ಉದಾಸಿಯ ಬೆನ್ನಿಗೆ ಗೊಬ್ಬರದ ಲಿಂಗಾಯತ ದೊರೆಗಳು ಇದ್ದಿದ್ದರಿಂದ ಇವತ್ತು ಉದಾಸಿ ಗೊಬ್ಬರ ಲೂಟಿ ಮಾಡಲಿಕ್ಕೆ ಅವರಿಗೆ ಬೆಂಗಾವಲಾಗಿ ನಿಂತುಕೊಂಡಿರುವುದು ಸಿಂಪಲ್ಲಾಗಿ ಗೊತ್ತಾಗುವ ವಿಚಾರವಾಗಿದೆ.

ಹೀಗಾಗಿ ಉದಾಸಿಗೆ ಮತ್ತು ಆತನ ಕೃಪಾಪೋಷಿತ ಗೊಬ್ಬರ ಮಾಫಿಯಾಗೆ ತಕ್ಕ ಶಾಸ್ತಿಯಾಗುವತನಕ ಹಾವೇರಿ ಜಿಲ್ಲೆಯ ರೈತರಿಗೆ ಸರಿಯಾದ ಪ್ರಮಾಣದಲ್ಲಿ ಗೊಬ್ಬರ ಸಿಗುವುದು ಹಗಲುಗನಸಷ್ಟೆ.

● ಹುರುಳಿಕುಪ್ಪಿ ವಿನಯ್


ಯುರೇನಿಯಂ ಸಿಕ್ಕಿದೆ ಕುಡಿಯುವ ನೀರು ಬತ್ತಿದೆ ಕ್ಯಾನ್ಸರ್ ಕಾದಿದೆ!



ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲೂಕಿನ ಗೋಗಿ ಎಂಬ ಗ್ರಾಮದಲ್ಲೀಗ ಕುಡಿಯುವ ನೀರಿಗೆ ಹಾಹಾಕಾರ. ಕೆಲವು ಬೋರ್‌ವೆಲ್‌ಗಳಲ್ಲಿ ನೀರು ಬಂದರೂ ಕುಡಿಯುವಂತಿಲ್ಲ. ಏಕೆಂದರೆ ಅದರಲ್ಲಿರುವುದು ಬರೀ ರಾಸಾಯನಿಕ ವಸ್ತುಗಳೇ. ಇಂತಹ ನೀರು ಕುಡಿದು ಸಾಯೋದ್ಯಾಕೆ ಅಂತಾ ಜನ ಊರಿನಿಂದ ನಾಲ್ಕೈದು ಕಿ.ಮೀ. ದೂರದಿಂದ ನೀರು ತಂದು ಕುಡಿಯತೊಡಗಿದ್ದಾರೆ. ದೂರ ಹೋಗಿ ನೀರು ತರಲಾಗದವರು ಊರ ನೀರು ಕುಡಿದು ಕೀಲುನೋವಿನಿಂದ ನರಳುತ್ತಿದ್ದಾರೆ. ಇದಕ್ಕೆಲ್ಲ ಕಾರಣ ಈ ಊರಲ್ಲಿ ಸಿಕ್ಕ ಬಹುಬೇಡಿಕೆಯ ಯುರೇನಿಯಂ ನಿಕ್ಷೇಪ!

ತನ್ನ ಪಾಡಿಗೆ ತನ್ನ ಬದುಕು ಸಾಗಿಸುತ್ತಿದ್ದ ಈ ಊರಲ್ಲಿ ಒಂಬತ್ತು ವರ್ಷಗಳ ಹಿಂದೆ ಯುರೇನಿಯಂ ನಿಕ್ಷೇಪ ಪತ್ತೆಯಾಯ್ತು. ಈ ಅದಿರಿನ ಮೂಲಕ ಮನುಷ್ಯ ಇಂದು ಎದುರಿಸುತ್ತಿರುವ ವಿದ್ಯುತ್ ತಯಾರಿಸಬಹುದು ಹಾಗೂ ಈ ಅದಿರು ಅಣುಸ್ಥಾವರದ ಕಚ್ಚಾ ಸಾಮಗ್ರಿಯನ್ನು ಪೂರೈಸಬಲ್ಲದು ಎನ್ನುತ್ತಲೇ ಬಂದಿರುವ ನಮ್ಮ ಸರ್ಕಾರಗಳು ಅದರ ಅಪಾಯದ ಕುರಿತು ತಲೆ ಕೆಡಿಸಿಕೊಳ್ಳುವುದೇ ಇಲ್ಲ.

ಗೋಗಿ ಗ್ರಾಮದಲ್ಲೂ ಅದೇ ಆಯ್ತು. ಯುರೇನಿಯಂ ನೆಪದಲ್ಲಿ ರೈತರ ಭೂಮಿಯನ್ನು ಕಿತ್ತುಕೊಳ್ಳತೊಡಗಿದರು. ಕೊನೆಗೀಗ ಕುಡಿಯುವ ನೀರಿಗೂ ಸಂಚಕಾರ ತಂದಿದ್ದಾರೆ. ಈಗ್ಗೆ ಒಂಭತ್ತು ವರ್ಷಗಳ ಹಿಂದೆ ಕೇಂದ್ರ ಸರಕಾರದ ಯುರೇನಿಯಂ ಅದಿರು ನಿಕ್ಷೇಪ ಶೋಧಿಸುವ ಒಂದು ತಂಡ ಸಮೀಕ್ಷೆಗೆಂದು ಗೋಗಿಗೆ ಬಂದು ಠಿಕಾಣಿ ಹೂಡಿ ತನ್ನ ಕೆಲಸವನ್ನು ಮೆಲ್ಲಗೆ ಶುರುಮಾಡಿತು. ನಾಲ್ಕಾರು ವರ್ಷ ಕಳೆಯುತ್ತಲೇ ಕೆಲವು ಸ್ಥಳೀಯ ಪುಢಾರಿಗಳ ಬೆಂಬಲದೊಂದಿಗೆ ಕೇಂದ್ರ ಸರಕಾರದ ರಕ್ಷಣಾ ಇಲಾಖೆಯ ಅಡಿಯಲ್ಲಿ ಈ ಅದಿರು ನಿಕ್ಷೇಪ ಶೋಧ ಕಾರ್ಯ ನಡೆದಿರುವುದರಿಂದ ಯಾವಾಗಲಾದರೂ ತಮ್ಮ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದು ಹೇಳುತ್ತಲೇ ಅತ್ಯಂತ ನಿಕೃಷ್ಟ ದರದಲ್ಲಿ ರೈತರಿಂದ ಭೂಮಿಯನ್ನು ಕಸಿದುಕೊಳ್ಳುತ್ತಾ ಬಂತು.



ಆಗಲೂ ಕೂಡ ಗೋಗಿ ಗ್ರಾಮಸ್ಥರಾಗಲಿ, ರೈತ ಸಂಘದ ಪ್ರಮುಖರಾಗಲಿ ಕ್ಯಾರೆ ಅನ್ನಲಿಲ್ಲ. ಅಳಿಯನ ಕುರುಡು ಬರುಬರುತ್ತ ಬಯಲಾಯಿತು ಎಂಬಂತೆ ವರ್ಷಗಳು ಉರುಳುತ್ತಿರುವಂತೆ ಅದಿರು ನಿಕ್ಷೇಪದಿಂದ ಒಂದೊಂದೆ ತೊಂದರೆಗಳು ಗ್ರಾಮದಲ್ಲಿ ಉಂಟಾಗ ತೊಡಗಿದವು. ಎಷ್ಟೋ ಕಾಲಗಳಾದರೂ, ಬರಗಾಲ ಬಿದ್ದರೂ ಬತ್ತದೆ ಇದ್ದ ಬಾವಿಗಳು ಬತ್ತತೊಡಗಿದವು. ಬೋರವೆಲ್‌ಗಳ ಹ್ಯಾಂಡಲ್ ಒಡೆದಷ್ಟೆ ಬಂತು ಹನಿ ನೀರೂ ಅಲ್ಲಿಂದ ಜಿನುಗಲಿಲ್ಲ. ಭಗಿರಥ ಪ್ರಯತ್ನಪಟ್ಟು ನೀರು ತೆಗೆದರೂ ಆ ನೀರು ಕುಡಿಯಲು ಯೋಗ್ಯವಾಗಿಲ್ಲ. ಇಂತಹ ನೀರು ಕುಡಿದವರು ಕೀಲುನೋವಿನಿಂದ ಹೆಳವರಂತಾಗಿದ್ದಾರೆ. ಪ್ಲೋರೈಡ್ ಅಂಶವಿರುವ ಇಂತಹ ನೀರನ್ನು ವರ್ಷಾನುಗಟ್ಟಲೆ ಕುಡಿಯುತ್ತ ಹೋದರೆ ಮುಂದಿನ ಒಂದೆರಡು ವರ್ಷಗಳಲ್ಲಿ ಕ್ಯಾನ್ಸರ್ ರೋಗಕ್ಕೂ ಕಾರಣವಾಗಲಿದೆ ಎಂದು ಖ್ಯಾತ ಕ್ಯಾನ್ಸರ್ ರೋಗ ತಜ್ಞ ಡಾ. ಶೇಖರ ಪಾಟೀಲ ಪತ್ರಿಕಾ ಹೇಳಿಕೆಯನ್ನೂ ಕೊಟ್ಟಿದ್ದಾರೆ.

ಆದರೂ ಇಲ್ಲಿನ ಸಂಸದರಾಗಲಿ, ಶಾಸಕ, ಮಾಜಿ ಮಂತ್ರಿ ದರ್ಶನಾಪುರ, ಎಂ.ಎಲ್.ಸಿ. ಅಮಾತೆಪ್ಪ ಕಂದಕೂರ್ ಮುಂತಾದ ಜನಪ್ರತಿನಿಧಿಗಳು ತಮಗೂ ಇದಕ್ಕೂ ಯಾವುದೇ ಬಾದರಾಯಣ ಸಂಬಂಧವೇ ಇಲ್ಲ ಎಂದು ಗಡದ್ದಾಗಿ ಮಲಗಿದ್ದಾರೆ. ಅಧಿಕಾರಿಗಳೆಂಬ ಗೋಸುಂಬೆಗಳು ಗಪ್‌ಚುಪ್ ಕುಳಿತಿದ್ದಾರೆ. ಬಹುಶಃ ಇವರ ದಿವ್ಯ ಮೌನದ ಹಿಂದೆ ಕಳ್ಳ ಹೆಜ್ಜೆಗಳೂ ಇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರಲ್ಲಿ ಒಬ್ಬರಾದ ಬಸವರಾಜ ರಾಚರೆಡ್ಡಿ ಗುಮಾನಿ ಪಡುತ್ತಾರೆ.

ಕೇಂದ್ರ ಸರಕಾರದ ರಕ್ಷಣಾ ಇಲಾಖೆಯ ಅಧೀನದಲ್ಲಿ ಭೂಮಿಯನ್ನು ಅಗೆದು ಯುರೇನಿಯಂ ಹೊರತೆಗೆಯುವ ಶೋಧ ಕಾರ್ಯಕ್ಕೆ ತೊಡಗುವ ಮುನ್ನವೆ, ಮುನ್ನೆಚ್ಚರಿಕೆಯ ಕ್ರಮವಾಗಿ ಅದು ಆ ಪ್ರದೇಶದಲ್ಲಿ ಬರುವ ಜನ, ಜಾನುವಾರು ಮುಂತಾದವುಗಳ ಜೀವಕ್ಕೆ, ಬದುಕಿಗೆ ತೊಂದರೆಯಾಗದಂತೆ ನೋಡಿ ಕೊಳ್ಳಬೇಕಾದುದು ಅದರ ಕರ್ತವ್ಯ. ಮೇಲಾಗಿ ತನ್ನ ಇಡೀ ಬದುಕನ್ನು ಭೂಮಿತಾಯಿಯನ್ನು ಉತ್ತು-ಬಿತ್ತಿ ಬೆಳೆಯುವ ಮೂಲಕವೇ ಜೀವಿಸುವ ರೈತರನ್ನು ಆ ಸ್ಥಳದಿಂದ ಏಕ್‌ದಂ ಒಕ್ಕಲೆಬ್ಬಿಸುವುದು ಕೂಡ ಅಪರಾಧವೇ. ಅತಿ ಅನಿವಾರ್ಯವಾದರೆ ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರ್ಯಾಯ ಬದುಕನ್ನು ಕಟ್ಟಿಕೊಟ್ಟ ನಂತರವೇ ಆ ಭೂಮಿಯನ್ನು ವಶಪಡಿಸಿಕೊಳ್ಳುವುದು ನ್ಯಾಯ.

ಇದೆಲ್ಲ ಮರೆತಿರುವ ಕೇಂದ್ರ ಸರಕಾರದ ಕಳ್ಳ ಅಧಿಕಾರಿಗಳು, ಸ್ಥಳೀಯ ಪುಢಾರಿಗಳನ್ನು ಹಿಡಕೊಂಡು ಕಳ್ಳಾಟ ನಡೆಸಿ, ರೈತರ ಜೀವನದೊಂದಿಗೆ ಚೆಲ್ಲಾಟ ವಾಡುತ್ತಿದ್ದಾರೆ. ಇಡೀ ಗ್ರಾಮಸ್ಥರ ಬದುಕು ಮುರಿದು ಮೂರಾಬಟ್ಟೆಯಾಗುತ್ತಿದ್ದರೂ ದಿವ್ಯ ಮೌನವಹಿಸಿರುವ ಅಧಿಕಾರಿಗಳ ರಾಜಕೀಯ ಗೋಸುಂಬೆಗಳ ಭ್ರಷ್ಟ ಸಂಬಂಧವನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಭೂಮಿತಾಯಿ ಹೋರಾಟ ಸಮಿತಿಯನ್ನು ರಚಿಸಿಕೊಂಡು, ಬಸವರಾಜ ರಾಚರೆಡ್ಡಿಯವರ ನೇತೃತ್ವದಲ್ಲಿ ಹೋರಾಟದ ಅಖಾಡಕ್ಕೆ ಮುನ್ನುಗ್ಗಿದೆ.

ತಾನು ರೈತ ಪ್ರೇಮಿಯೆಂದು ಹೋದಲ್ಲಿಬಂದಲೆಲ್ಲ ಡಂಭ ಕೊಚ್ಚಿಕೊಳ್ಳುವ, ರೈತರ ಹೆಸರಿನ ಮೇಲೆ ಪ್ರಮಾಣ ವಚನ ಮಾಡಿಕೊಂಡು ಮುಖ್ಯಮಂತ್ರಿಯ ಗಾದಿ ಏರಿ ಕುಳಿತಿರುವ ಯಡ್ಡಿ ಈ ಗೋಗಿ ಗ್ರಾಮದ ನತದೃಷ್ಟ ರೈತರ ಕಡೆ ತಮ್ಮ ಕೃಪಾಕಟಾಕ್ಷ ಬೀರುವರೆ ಕಾದು ನೋಡಬೇಕು.

- ವಿಶ್ವಾರಾಧ್ಯ ಸತ್ಯಂಪೇಟೆ

ಒಳುಬಿಡುತ್ತಿರುವ ಎಂ.ಎನ್. ಬ್ಯಾಹೆನ್!

ಇಡೀ ಗೋಗಿ ಗ್ರಾಮಸ್ಥರು ಸ್ವಚ್ಛವಾದ ಕುಡಿಯುವ [illegible] ಸಂಶೋಧನಾ ಕೇಂದ್ರದ ವ್ಯವಸ್ಥಾಪಕ ಎಂ.ಎನ್. [illegible] ಸ್ಥಳೀಯ ಪುಢಾರಿಗಳ ಜೊತೆಗಿನ ಒಳಒಪ್ಪಂದಕ್ಕೆ [illegible] ವಿಷಪೂರಿತ ಗಾಳಿಯಿಂದ ಕ್ಯಾನ್ಸರ್ [illegible] ಬಿಡುತ್ತಾನೆ.

130 ಎಕರೆ ಭೂಮಿಯನ್ನು ರೈತರಿಂದ ವಶಪಡಿಸಿಕೊಂಡು ಗಣಿಗಾರಿಕೆ ನಡೆಸಲು [illegible] ಭೂಮಿಯನ್ನು ಒಂದು ಸಾವಿರ ಆಳದಷ್ಟು ಕೊರೆದು [illegible] ಕುಸಿಯುವುದಾಗಲಿ, ಕಲುಷಿತವಾಗುವುದಾಗಲಿ [illegible] ಪೂರ್ಣಪ್ರಮಾಣದಲ್ಲಿ ಆರಂಭವಾಗುವ ಮೊದಲೆ [illegible] ಗಣಿಗಾರಿಕೆ ಶುರುವಾದರೆ ಅರ್ಧ ಊರು [illegible]



ಮಹಿಳಾ ಮೀಸಲಾತಿ: ಎಚ್ಚರಿಕೆಯ ಗಂಟೆಯಾಗಬೇಕಿದೆ

> 33.3% ಮಹಿಳೆಯರ ರಾಜಕೀಯ ಪ್ರವೇಶವು, ದೇಶದ ರಾಜಕೀಯ ರಂಗದ ಮೇಲೆ ಸಕಾರಾತ್ಮಕವಾದ ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಮೀಸಲಾತಿಯ ಹಕ್ಕಿನ ಬಗ್ಗೆ ಸ್ಪಷ್ಟವಾದ ಹೋರಾಟದ ರೂಪು-ರೇಷೆಗಳನ್ನು ನಿರ್ಧರಿಸಬೇಕಾಗಿದೆ. ಇದೊಂದು ಅತ್ಯುತ್ತಮವಾದ ಸಾಮಾಜಿಕ ಹೋರಾಟವಾಗಿ ಮೂಡಿ, ಎಲ್ಲಾ ರಾಜಕೀಯ ಪಕ್ಷಗಳಿಗೂ ಎಚ್ಚರಿಕೆಯ ಗಂಟೆಯಾಗಿ ಮೊಳಗಬೇಕಾಗಿದೆ.

ಮಹಿಳೆಯರ ರಾಜಕೀಯ ಮೀಸಲಾತಿಯ ಬಗ್ಗೆ [illegible]ಷಣೆ ಮಾಡುವುದಕ್ಕಿಂತ ಮೊದಲು ಪುರುಷರ [illegible]ತಿಯ ಬಗ್ಗೆ ನನಗೆದುರಾದ ಘಟನೆಯ ಅನುಭವವನ್ನು [illegible]ಕೊಳ್ಳಬೇಕೆನಿಸುತ್ತದೆ. ಈ ಸಮಾಜದ ಪುರುಷ ವರ್ಗದ [illegible]ದ ಕೌರ್ಯವನ್ನು ವೈಯಕ್ತಿಕವಾಗಿ ಹಾಗೂ ಸಾಮಾ[illegible]ಗಿ ಅನೇಕ ಸಂದರ್ಭಗಳಲ್ಲಿ ಎದುರಿಸಿರುವ ನನಗೆ, [illegible]ಗುವ ಎಲ್ಲೆ ಮೀರಿದ ಅಧಿಕಾರ ದಾಹವನ್ನು [illegible] ಆಶ್ಚರ್ಯ, ದಿಗ್ಭ್ರಮೆ, ಅಸಹ್ಯ ಹಾಗೂ ಕೋಪ [illegible] ಒಟ್ಟೊಟ್ಟಿಗೆ ಉಂಟಾಗುತ್ತದೆ.

[illegible]ದೊಂದು ದಿನ ನನ್ನನ್ನು ಮತ್ತು ನನ್ನ ಕೆಲವು [illegible]ರನ್ನು ಮಹಿಳಾ ಸಮಾಜದ ಉದ್ಘಾಟನೆಗಾಗಿ [illegible]ದ ಹಳ್ಳಿಯೊಂದಕ್ಕೆ ಆಹ್ವಾನಿಸಿದ್ದರು. ಮೈಕು ಮತ್ತು [illegible]ಯನ್ನು ಕಂಡೊಡನೆ ಗ್ರಾಮದ ಹಲವು ಪುರುಷರೂ [illegible] ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ಸಮಾ[illegible]ಜ ಮುಂಚಿತವಾಗಿಯೇ ಜಿಲ್ಲಾ ರಿಜಿಸ್ಟ್ರಾರ್‌ರವರ [illegible]ಯಲ್ಲಿ ಸೊಸೈಟೀಸ್ ಆಕ್ಟ್ ಪ್ರಕಾರ ಸದರಿ ಮಹಿಳಾ [illegible]ಜದ ನೋಂದಣಿಯಾಗಿತ್ತು. ಆದರೆ ದಯ[illegible]ದರು ಯಜಮಾನರೊಬ್ಬರು! ತಮ್ಮ ಎಂದಿನ [illegible] ತಮ್ಮ ಹಿಂಬಾಲಕರೊಡನೆ ಬಂದು, ದೊಡ್ಡ[illegible]ಲ್ಲಿ ಆವಾಜ್ ಹಾಕಿಯೇ ಬಿಟ್ಟರು. "ಅದ್ಯಾವ [illegible] ಅದಕ್ಷನಾಗ್ತಾನೆ ನಾನಿರೋವಾಗ? (ಇದು ನಾನು [illegible]ಗಿಸಿದ ಕುಚೇಷ್ಟೆಯ ಪದ! ಕ್ಷಮಿಸಿ) ಎಂದು [illegible]ಮಾರ್ಕ್ ಹಾಕಿ ಸೆಡ್ಡು ಹೊಡೆದು ನಿಂತುಬಿಟ್ಟರು. [illegible]ಎಲ್ಲಾ ರಾಗದ್ವೇಷಗಳ ನಡುವೆಯೂ, ಮಹಿಳಾ [illegible]ಕ್ಕೆ ಮಹಿಳೆಯೇ ಅಧ್ಯಕ್ಷಳಾಗಬೇಕೆಂಬ ಬಹಳ [illegible]ತ್ರವನ್ನು ಅವರೆದುರಿಗೆ ಇಟ್ಟಾಗಲೂ, ಒಪ್ಪಲು [illegible]ಲ್ಲ ಆಸಾಮಿ. ಎಲ್ಲಾ ಪುಂಡಾಟಿಕೆಗೂ ಆತ [illegible]ವಾಗಿ ಬಂದಿದ್ದ. ನಾವು ಕೂಡಾ ಆತನ [illegible]ದೇ ಬೆದರಿಕೆಗೆ ಸೊಪ್ಪು ಹಾಕದೆ, ಪೊಲೀಸು, [illegible] ಇದು ಎಂದು ತೋಳೇರಿಸಿದೆವೋ ಆಗ ಆತ [illegible] ಬಂದ. "ಅಂಗಾದ್ರೆ ನಮ್ಮೆಂಡ್ರನ್ನ ಮಾಡಿ....."

[illegible] ಮನುಸ್ಮೃತಿಗಿಂತ ನಮ್ಮ ರಾಷ್ಟ್ರ ರಾಜಕಾರಣದ [illegible] ಬೇರೆಯಾಗಿದೆಯೇ? ಕಳೆದ ಹದಿಮೂರು [illegible]ಂದ ಯಾವುದೇ ನೆಲೆ ಕಾಣದೆ ಅತಂತ್ರವಾಗಿರುವ [illegible] ಮೀಸಲಾತಿಯ ಸಮಸ್ಯೆ ಇದೀಗ ಮತ್ತೊಮ್ಮೆ [illegible] ಬಂದು ಮೂಲೆ ಗುಂಪಾಗಿದೆ. ಸಂಯುಕ್ತ [illegible] ಅಧಿಕಾರದಲ್ಲಿದ್ದಾಗ ಎಚ್.ಡಿ. ದೇವೇಗೌಡರ [illegible]ಯಾಗಿ ಹೊಮ್ಮಿದ ಈ ಆಲೋಚನೆಯು [illegible]ಭೆ, ವಿಧಾನಸಭೆ ಹಾಗೂ ಸ್ಥಳೀಯ ರಾಜಕೀಯ [illegible]ಯಲ್ಲಿ ಮಹಿಳೆಯರಿಗೆ 33.3% ಮೀಸಲಾತಿ ಕಲ್ಪಿಸುವ ಆಶಯವನ್ನು ಹೊಂದಿತ್ತು. ಈ [illegible]ವನ್ನು ಲೋಕಸಭೆಯಲ್ಲಿ 1996 ನೇ ಸೆಪ್ಟೆಂಬರ್ [illegible] ಮಂಡಿಸಲಾಗಿತ್ತು. ತದನಂತರ ಅನೇಕ ಬಾರಿ [illegible] ಈ ಮಸೂದೆಯು ಚರ್ಚೆಗೆ ಬಂದರೂ [illegible] ಸಂಕಲ್ಪ ಶಕ್ತಿಯ ಕೊರತೆಯಿಂದ ಮತ್ತು ಈ [illegible] ರಾಜಕಾರಣಿಗಳ [illegible] ದೊರೆತಿಲ್ಲ.

[illegible]

ಮೀಸಲಾತಿಯು ಮಹಿಳೆಯರ ಸ್ವಾಭಿಮಾನದ ನಿರ್ಣಾಯಕ ಹೆಜ್ಜೆಯಾಗಿದೆ. ಮೇ 2004 ರಲ್ಲಿ ಚುನಾಯಿತರಾದ 14ನೇ ಲೋಕಸಭೆಯ 539 ಸದಸ್ಯರ ಪೈಕಿ 44 ಮಂದಿ ಮಹಿಳೆಯರು ಆಯ್ಕೆಯಾದರು. ಚುನಾವಣಾ ಆಯೋಗವು ಈ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದು, ಮಹಿಳೆಯರಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವತ್ತ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಿದೆ. ಮಹಿಳೆಯರಿಗೆ ನೀಡಲೇಬೇಕಾದ ರಾಜಕೀಯ ಮೀಸಲಾತಿಯು ಅವರತ್ತ ಎಸೆಯುತ್ತಿರುವ ಕರುಣೆಯಿಂದ ಕೂಡಿದ ಭಿಕ್ಷೆಯಲ್ಲ. ಬದಲಿಗೆ ಅದು ಅವರ ಜನ್ಮಸಿದ್ಧ ಹಕ್ಕು. ಈ ದೇಶದ ಜನಸಂಖ್ಯೆಯ 50% ರಷ್ಟಿರುವ ಮಹಿಳೆಯರು, ಅಧಿಕೃತ ಶ್ರಮ ಶಕ್ತಿಯ ಮೂರನೇ ಒಂದು ಭಾಗವಾಗಿದ್ದು, ಮೂರನೇ ಎರಡರಷ್ಟು ದುಡಿಮೆ ಮಾಡುತ್ತಿದ್ದಾರೆ. ಆದರೆ ಈ ಮಹಿಳಾ ಸಮೂಹವು 10% ರಷ್ಟು ಆದಾಯವನ್ನು ಪಡೆಯುತ್ತಿದ್ದು, 1% ಕ್ಕಿಂತಲೂ ಕಡಿಮೆ ಆಸ್ತಿಯನ್ನು ಹೊಂದಿರುತ್ತದೆ. ಈ ಅಸಮಾನ ವ್ಯವಸ್ಥೆಯಡಿಯಲ್ಲಿ ನಲುಗುತ್ತಿದ್ದರೂ ಸಮಾಜದ ಅಭ್ಯುದಯಕ್ಕೆ ಅವರು ನೀಡುತ್ತಿರುವ ಕಾಣಿಕೆಗೆ ಪ್ರಾಮಾಣಿಕವಾದ ಮನ್ನಣೆಯನ್ನು ಈಗಲಾದರೂ ಈ ಸಮಾಜ ಮತ್ತು ಈ ಸಮಾಜದ ಪುರುಷ ರಾಜಕಾರಣಿಗಳು ನೀಡಬೇಕಾಗುತ್ತದೆ.

ವಿಶೇಷ ಲೇಖನ

● ಬಾನು ಮುಷ್ತಾಕ್

ಮಹಿಳಾ ಮೀಸಲಾತಿಯ ಬಗ್ಗೆ ಎರಡು ಮಸೂದೆಗಳು ಹಾಲಿ ಸಿದ್ಧವಾಗಿದೆ. ಮೊದಲನೆಯದರ ಪ್ರಸ್ತಾವನೆ ಏನೆಂದರೆ, ಲೋಕಸಭೆ ಮತ್ತು ರಾಜ್ಯಸಭೆಗಳ ಒಟ್ಟು ಸ್ಥಾನಗಳ ಪೈಕಿ 33% ನ್ನು ಮಹಿಳೆಯರಿಗೆ ಮೀಸಲಿಡಬೇಕು. ಎರಡನೆಯದರ ಸಾರಾಂಶವೇನೆಂದರೆ, ಎರಡೂ ಸದನಗಳ ಸ್ಥಾನಗಳನ್ನು 33.3% ರಷ್ಟು ಹೆಚ್ಚಿಸಿ, ಅಂದರೆ ಹಾಲಿ ಇರುವ 545 ಸ್ಥಾನಗಳನ್ನು ಸುಮಾರು 750 ಸ್ಥಾನಗಳಿಗೆ ಹೆಚ್ಚಿಸಿ ಆ ಪೈಕಿ ಹೆಚ್ಚುವರಿ 33.3% ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವುದು. ಎರಡನೆಯ ಪ್ರಸ್ತಾವನೆಯು ಲಾಲೂ ಪ್ರಸಾದ್ ಯಾದವ್‌ರವರ ಆತಂಕವನ್ನು ದೂರ ಮಾಡುವಲ್ಲಿ ಸಕ್ರಿಯವಾಗಿದೆ. ಏಕೆಂದರೆ 'ಮೊದಲಿಗೆ ನಾನಿಲ್ಲದಿದ್ರೆ ನಮ್ಮೆಂಡ್ರು' ಎಂಬ ಹಕ್ಕು ಪ್ರತಿಪಾದನೆಯ ಮುಂಚೂಣಿಯಲ್ಲಿರುವ ಲಾಲೂ ಪ್ರಸಾದ್‌ರವರು ರಾಬ್ಡಿ ದೇವಿಯನ್ನು ತಮ್ಮ ಪತ್ನಿ ಎಂಬ ಬಾಂಧವ್ಯದಿಂದ ಉನ್ನತ ಹುದ್ದೆಗೆ ಏರಿಸಿದವರು. ಆದರೆ ತಮ್ಮಂತೆ ಇತರೆ ರಾಜಕಾರಣಿಗಳು ನಡೆದುಕೊಳ್ಳಬಾರದೆಂದು ಬಯಸುವವರು. ಮಹಿಳಾ ಮೀಸಲಾತಿ ಜಾರಿಗೆ ಬಂದಲ್ಲಿ ಸಮಾಜದ ಇತರೆ ವರ್ಗದವರಾದ ದಲಿತರು, ಹಿಂದುಳಿದವರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕಿಗೆ ಧಕ್ಕೆಯಾಗುತ್ತದೆ ಎಂದು ಕೊರಗುವವರು. ಒಂದು ವೇಳೆ ಸದರಿ ಮಹಿಳಾ ಮೀಸಲಾತಿ ಕಾನೂನು ಜಾರಿಯಾದಲ್ಲಿ ಪರಿಶಿಷ್ಟ ಜಾತಿ ವರ್ಗ ಮತ್ತು ಬುಡಕಟ್ಟುಗೆ ಮೀಸಲಾಗಿರುವ ಸ್ಥಾನಗಳಲ್ಲಿ ಕೂಡಾ ಮೂರನೇ ಒಂದು ಭಾಗ ಸ್ಥಾನಗಳು ಆಯಾ ವರ್ಗದ ಮಹಿಳೆಯರಿಗೆ ಮೀಸಲಾಗುತ್ತದೆ. ಹಾಗಾದಲ್ಲಿ

ಮಹಿಳೆ ಎನ್ನುವುದು ಒಂದು ಜಾತಿಯೇ, ವರ್ಗವೇ, ಅದೇ ಅವಳ ಅಂತಿಮ ಗುರುತೇ? ಜಾತಿ, ಮತ, ಕುಲ, ವರ್ಗಾಧಾರಿತವಾಗಿ ಅವಳ ಅಸ್ತಿತ್ವವನ್ನು ಹರಿದುಹಂಚುವುದಿಲ್ಲವೇ? –ಇದಕ್ಕೂ ಅವರಲ್ಲಿ ಉತ್ತರವಿಲ್ಲ. ಅಷ್ಟೇ ಅಲ್ಲದೇ ಮಹಿಳೆಯರಿಗೆ ಮೀಸಲಾತಿಯು ಜಾರಿಯಾದಲ್ಲಿ ಈ ಸ್ಥಾನಗಳನ್ನು ಉನ್ನತ ವರ್ಗದ ಮಹಿಳೆಯರು ಕಬಳಿಸಬಹುದೆಂಬ ಆತಂಕದಿಂದ ಈ ಮಸೂದೆಯ ವಿರುದ್ಧ ಹರಿಹಾಯುತ್ತಿರುವವರಲ್ಲಿ ಮೊದಲಿಗರು ಲಾಲೂ ಪ್ರಸಾದ್ ಯಾದವ್ ಮತ್ತು ಮುಲಾಯಂ ಸಿಂಗ್.

ಸದ್ಯದ ಪಾರ್ಲಿಮೆಂಟಿನಲ್ಲಿ ವಿವಿಧ ಹಿಂದುಳಿದ ವರ್ಗಕ್ಕೆ ಸೇರಿದ ಸುಮಾರು 200 ಸದಸ್ಯರಿದ್ದಾರೆ. ಅವರಲ್ಲಿ ಬಹುತೇಕ ಸದಸ್ಯರಿಗೆ ಸಾರ್ವಜನಿಕ ಸೇವೆಯ ಹೇಳಿಕೊಳ್ಳುವಂತಹ ಹಿನ್ನೆಲೆ ಏನಿಲ್ಲ. ಕೇವಲ ಜಾತಿ ರಾಜಕಾರಣದ ಹಿನ್ನೆಲೆ ಇದೆ ಅಷ್ಟೇ. ಮಹಿಳಾ ಮೀಸಲಾತಿಯಲ್ಲೂ ಇದೇ ರೀತಿಯ ಜಾತಿಯ ಅಸ್ತ್ರ ಪರಿಣಾಮಕಾರಿಯಾಗುತ್ತದೆ. ಆದರೆ ಇದುವರೆವಿಗೂ ತಮಗೆ ಬೇಕಾದಂತಹ ಅನಿಷ್ಟ ವ್ಯವಸ್ಥೆಯು ಮಹಿಳೆಯರಿಗೆ ಮಾತ್ರ ಬೇಡ ಎಂದು ನಿರ್ಧಾರ ಕೈಗೊಳ್ಳಲು ಈ ಪುರುಷಶಾಹಿ ರಾಜಕಾರಣಿಗಳಿಗೆ ಅಧಿಕಾರವನ್ನು ಕೊಟ್ಟವರು ಯಾರು? ತಮ್ಮ ತಮ್ಮ ಕ್ಷೇತ್ರ ಮತ್ತು ಸ್ಥಾನ ರಕ್ಷಣೆಯನ್ನು ಮಾಡಿಕೊಳ್ಳುತ್ತಾ ಮಹಿಳೆಯರಿಗೆ ಹಕ್ಕು ಮತ್ತು ಅಧಿಕಾರ ನಿರಾಕರಣೆ ಮಾಡುವ ಪುರುಷ ರಾಜಕಾರಣಿಗಳ ಈ ಕುತಂತ್ರ ಎಲ್ಲಿಯವರೆಗೆ ನಡೆದೀತು?

ಒಳಮೀಸಲಾತಿಯನ್ನು ಜಪಿಸುತ್ತಿರುವ ರಾಜಕಾರಣಿಗಳಿಗೆ ಈ ಒಳಮೀಸಲಾತಿಯೆಂಬ ಪರಿಕಲ್ಪನೆಯು ಸಂವಿಧಾನ ವಿರೋಧಿಯಾದುದು ಎಂಬುದು ಸ್ಪಷ್ಟವಾಗಿ ಗೊತ್ತಿದೆ. ಒಂದು ವೇಳೆ ಒಳಮೀಸಲಾತಿಯ ಕಾನೂನು ಜಾರಿಯಾದರೂ ಇದರ ಸಂವಿಧಾನ ಬದ್ಧತೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ಇನ್ನೂ ಹಲವಾರು ವರ್ಷಗಳವರೆಗೆ ಮಹಿಳೆಯರ ರಾಜಕೀಯ ಮೀಸಲಾತಿಯು ಅನುಷ್ಠಾನಕ್ಕೆ ಬಾರದಂತೆ ನೋಡಿಕೊಳ್ಳುವ ಈ ತಂತ್ರಗಾರಿಕೆಯನ್ನು ಅರಿಯಬೇಕಾಗಿದೆ. ಒಬ್ಬ ಮುಸ್ಲಿಮ್ ಮಹಿಳೆಗೆ ಅವಕಾಶ ಕಲ್ಪಿಸುವ 'ಸಬ್-ಕೋಟಾ'ದ ಪರಿಕಲ್ಪನೆಯು ಈ ದೇಶದ ಸೆಕ್ಯುಲರಿಸಂನ ಸಿದ್ಧಾಂತವನ್ನು ಉಲ್ಲಂಘಿಸುತ್ತದೆ. ಸೆಕ್ಯುಲರಿಸಂನ ಸಿದ್ಧಾಂತಕ್ಕೆ ವಿರುದ್ಧವಾದ ಸಂವಿಧಾನಿಕ ತಿದ್ದುಪಡಿ ಕೂಡಾ ಅಕ್ರಮ ಹಾಗೂ ಅಸಿಂಧುವಾಗುತ್ತದೆ. ಹೀಗಾಗಿ, ಒಳ ಮೀಸಲಾತಿಯೆಂಬ ವಿಷಕನ್ಯೆ ಮಹಿಳಾ ಮೀಸಲಾತಿಯ ಅವಕಾಶವನ್ನು ಇನ್ನಷ್ಟು ಮತ್ತಷ್ಟು ಗೋಜಲಾಗಿಸುತ್ತಾ, ಈ ಸಮಸ್ಯೆಯ ದಿಕ್ಕುತಪ್ಪಿಸಲು ಅನ್ವೇಷಿಸುವ ಉಪಾಯ ಮಾತ್ರ ಆಗಿದೆ. ಇಲ್ಲವಾದಲ್ಲಿ ಒಳಮೀಸಲಾತಿಗೆ ಬೇಕಾದ ಸಾಂವಿಧಾನಿಕ ಚರ್ಚೆ ಮತ್ತು ಪರಿಹಾರ ಇದುವರೆವಿಗೂ ಯಾಕೆ ರೂಪುಗೊಂಡಿಲ್ಲ? ಈ ಪ್ರಶ್ನೆಯನ್ನು ಮಹಿಳೆಯರು ಪುರುಷ ರಾಜಕಾರಣಿಗಳ ಮುಂದೆ [illegible]

[illegible]ಯೇಕೆ? ಅವಕಾಶ ನಿರಾಕರಣೆ [illegible] ವಿರುದ್ಧ ಮಹಿಳೆಯರು ಹಮ್ಮಿಕೊಂಡಿರುವ ಹೋರಾಟವನ್ನು ಜಾತಿಯ ಹೆಸರಿನಲ್ಲಿ ರಾಜಕೀಕರಣಗೊಳಿಸುತ್ತಿರುವ ಪುರುಷಶಾಹಿಯ [illegible] ಮಣಿಸಬೇಕಾಗಿದೆ.

ಮಹಿಳಾ ಮೀಸಲಾತಿಯ ಗೋಜಲನ್ನು ಬಿಡಿಸುವತ್ತ ಇನ್ನೊಂದು ಪ್ರಯತ್ನವೂ ಕೂಡಾ ಸಾಗಿದೆ. 1951 ರ ಜನಪ್ರತಿನಿಧಿ ಕಾಯಿದೆಯನ್ನು ತಿದ್ದುಪಡಿ ಮಾಡಿ, ಮೂರನೇ ಒಂದರಷ್ಟು ಸ್ಥಾನಗಳಿಗೆ ಮಹಿಳೆಯರ ನಾಮಕರಣ ಮಾಡಬಹುದೆಂಬ ಆಲೋಚನೆ ಕೂಡಾ ಇದೆ. [illegible] ರಾಜಕೀಯ ಪ್ರಯತ್ನವಾಗಬಹುದಷ್ಟೇ ಹೊರತು, [illegible] ವಾದಕ್ಕೂ ಸಂವಿಧಾನಿಕ ತೊಡಕು ಇದೆ. ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಮೂರನೇ ಒಂದು ಭಾಗ ಮಹಿಳೆಯರಿಗೆ ಕಡ್ಡಾಯವಾಗಿ ಟಿಕೆಟ್ ನೀಡಬಹುದೇ ಎಂಬ ಪ್ರಶ್ನೆಗೆ ನಿರ್ಣಯ ಕೈಗೊಳ್ಳುವ ಸ್ಥಾನದಲ್ಲಿರುವ ಪುರುಷ ರಾಜಕಾರಣಿಗಳು, ತಮ್ಮ ಪಕ್ಷ ಸೋಲಬಹುದೆಂಬ ನಿರೀಕ್ಷೆಯ ಕ್ಷೇತ್ರಗಳನ್ನು ಬಿಟ್ಟುಕೊಡಬಹುದಾದ ಸಂದರ್ಭಗಳಿವೆ.

ಮಹಿಳೆಯರ ಮೀಸಲಾತಿಯ ಸಂದರ್ಭದಲ್ಲಿ ಚುನಾವಣಾ ಕ್ಷೇತ್ರಗಳನ್ನು ರೊಟೇಶನ್ ಪದ್ಧತಿಯ ಮೇರೆಗೆ ಬದಲಾಯಿಸಬಹುದು ಎಂಬ ಪ್ರಶ್ನೆ ಎತ್ತಿದ ಕೂಡಲೇ ಪುರುಷ ರಾಜಕಾರಣಿಗಳು ನೂರಾರು ಸಬೂಬುಗಳನ್ನು ಹೇಳುತ್ತಾರೆ. ತಮ್ಮ ಕ್ಷೇತ್ರಗಳನ್ನು ಚುನಾವಣೆಯ ಹಿಂದಿನಿಂದಲೂ ಪೋಷಣೆ ಮಾಡಲು ಅಸಾಧ್ಯವಾಗುತ್ತದೆಂತಲೂ, ತಮ್ಮ ಭವಿಷ್ಯದ ಕ್ಷೇತ್ರ ಯಾವುದಾಗುತ್ತದೆಂಬುದು ತಮಗೆ ತಿಳಿಯದೆ, ಮತದಾರರೊಡನೆ ತಮ್ಮ ಸಂವಹನೆ ಸೂಕ್ತವಾಗಿ ಆಗುವುದಿಲ್ಲವೆಂತಲೂ ಇವರ ಅಳಲು.


ಈ ಎಲ್ಲಾ ಗೊಂದಲಗಳಿಗೆ ಒಂದಿಷ್ಟು ಪರಿಹಾರ ರೂಪವಾಗಿ, ಡಿ-ಲಿಮಿಟೇಷನ್ ಆಫ್ ಕಾನ್‌ಸ್ಟುಯೆನ್ಸಿ ಎಂಬ ಸೂತ್ರವೊಂದು ಕಂಡುಬರುತ್ತದೆ. 2001 ರ ಜನಗಣತಿಯ ಆಧಾರದ ಮೇಲೆ ಡಿ-ಲಿಮಿಟೇಷನ್ ಕಮೀಷನ್ನು ಲೋಕಸಭಾ ಸದಸ್ಯರ ಸಂಖ್ಯೆಯನ್ನು ನಿರ್ಧರಿಸಬೇಕಿದೆ. 1971 ರ ಜನಗಣತಿಯ ಮೇರೆಗೆ ನಮ್ಮ ದೇಶದ ಜನಸಂಖ್ಯೆ 54 ಕೋಟಿ ಇತ್ತು. 2001 ರ ನಂತರ ಈ ಜನಸಂಖ್ಯೆ ಸುಮಾರು 102 ಕೋಟಿಯಷ್ಟಿದೆ. ಈ ಜನಸಂಖ್ಯೆಯ ಆಧಾರದ ಮೇರೆಗೆ ಹಾಲಿ ಇರುವ ಸ್ಥಾನಗಳನ್ನು ಮೂರನೇ ಒಂದರಷ್ಟನ್ನು ಹೆಚ್ಚಿಸಿ, 750 ಸ್ಥಾನಗಳನ್ನು ನಿಗದಿಪಡಿಸಬಹುದಾಗಿದೆ. ಹೀಗಾಗುವುದರಿಂದ ತಮ್ಮ ಸ್ಥಾನಗಳನ್ನು ಮಹಿಳೆಯರು ಕಿತ್ತುಕೊಳ್ಳಬಹುದೆಂಬ ಪುರುಷ ರಾಜಕಾರಣಿಗಳ ಭಯ ದೂರವಾಗುತ್ತದೆ. ಹೆಚ್ಚುವರಿ ಸ್ಥಾನಗಳನ್ನು ಒಂದು ಕ್ಷೇತ್ರದ ದ್ವಿಸದಸ್ಯ ಕ್ಷೇತ್ರಗಳನ್ನಾಗಿ ಮಾಡಬಹುದಾಗಿದೆ ಹಾಗೂ ಎರಡು ಸ್ಥಾನಗಳ ಪೈಕಿ ಒಂದು ಸ್ಥಾನವನ್ನು ಮಹಿಳೆಯರಿಗೆ ಮೀಸಲಿಡಬಹುದು ಹಾಗೂ ಮಹಿಳೆಯರ ಮೀಸಲಾತಿಗೆ ಈ ವಿಧದಲ್ಲಿ ಅವಕಾಶಗಳನ್ನು ಕಲ್ಪಿಸಬಹುದಾಗಿದೆ.

ಎಲ್ಲಾ ರಾಜಕೀಯ ಪಕ್ಷಗಳೂ ಕೂಡಾ ಈ ಬಗ್ಗೆ ಒಮ್ಮತದಿಂದ ಈ ಮಸೂದೆಯ ಪರವಿರುವುದಾಗಿ ಹೇಳುತ್ತಾರೆ. ಆದರೆ ಮಸೂದೆಯು ಲೋಕಸಭೆಯಲ್ಲಿ ಮಂಡನೆಯಾದಾಗ, ಅದರ ಪ್ರತಿಗಳನ್ನು ಹರಿದು ಹಾಕಿ, ತಮ್ಮೆಲ್ಲಾ ಕೋಪ-ತಾಪ, ಅಹಂಕಾರಗಳೊಂದಿಗೆ ಪುರುಷ ಶಾಹಿಯ ದೈತ್ಯ ನರ್ತನವನ್ನು ಮೆರೆಯುತ್ತಾರೆ. ಎಲ್ಲಾ ರಾಜಕೀಯ ಪಕ್ಷಗಳ ಒಡಲೊಳಗೆ ಈ ಹಿಪಾಕ್ರಸಿ ಸ್ಫೋಟಗೊಳ್ಳಲು ಸದಾ ಸನ್ನದ್ಧವಾಗಿರುತ್ತದೆ. ಆದರೆ ಮಹಿಳೆಯರ ರಾಜಕೀಯ ಮೀಸಲಾತಿಯು ರಾಷ್ಟ್ರದ ರಾಜಕೀಯ ರಂಗದ ಸ್ವರೂಪವನ್ನು ಬದಲಾಯಿಸಬಹುದೆಂಬ ಅಪಾರ ನಿರೀಕ್ಷೆಯೂ ಇದೆ. ಹೀಗೆ ಮಹಿಳೆಯರ ಪಾಲ್ಗೊಳ್ಳುವಿಕೆಯು ರಾಜಕೀಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುತ್ತದೆ ಹಾಗೂ ರಾಜಕಾರಣಿಗಳು ಮತ್ತು ಕ್ರಿಮಿನಲ್‌ಗಳ ಸಖ್ಯವನ್ನು ತಡೆಗಟ್ಟುತ್ತವೆ. ಹಾಗೆಯೇ ನಿಜವಾದ ಪ್ರಜಾಪ್ರಭುತ್ವ ವ್ಯವಸ್ಥೆಯು ರೂಪುಗೊಳ್ಳುವುದರಲ್ಲಿ ಆಕೆ ಸಕ್ರಿಯ ಪಾತ್ರವನ್ನು ವಹಿಸುವಳು ಎಂಬೆಲ್ಲಾ ನಿರೀಕ್ಷೆಗಳು ಆಕೆಯ ಮೇಲಿವೆ. ಪುರುಷ ರಾಜಕಾರಣಿಗಳ ಅನೈತಿಕ ಮತ್ತು ಕಲುಷಿತ ವ್ಯವಸ್ಥೆಯನ್ನು ಆಕೆ ಸ್ವಚ್ಛಗೊಳಿಸಬಹುದು ಎಂಬ ಭರವಸೆಯೂ ಇದೆ. ಮಹಿಳೆಯರೂ ಕೂಡ ಇದೇ ಸಮಾಜದ ಉತ್ಪನ್ನಗಳಾದುದರಿಂದ ಅವರ ಕಾರ್ಯವೈಖರಿಯ ಬಗ್ಗೆ ಅತಿಯಾದ ನಿರೀಕ್ಷೆಗಳೂ ಕೂಡ ಸೂಕ್ತವಲ್ಲ.

ಒಮ್ಮೆ 33.3% ಮಹಿಳೆಯರ ರಾಜಕೀಯ ಪ್ರವೇಶವು, ದೇಶದ ರಾಜಕೀಯ ರಂಗದ ಮೇಲೆ ಸಕಾರಾತ್ಮಕವಾದ ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ಸಂಶಯವಿಲ್ಲ. ಆದರೆ ಈ ಅವಕಾಶವನ್ನು ಪಡೆದುಕೊಳ್ಳಲು ಪಕ್ಷಾತೀತವಾಗಿ ಮಹಿಳೆಯರೆಲ್ಲರೂ ಒಂದೇ ವೇದಿಕೆಯಡಿ ಸೇರಬೇಕಾಗಿದೆ. ಹಾಗೂ ಈ ನಿಟ್ಟಿನಲ್ಲಿ ಮೀಸಲಾತಿಯ ಹಕ್ಕಿನ ಬಗ್ಗೆ ಸ್ಪಷ್ಟವಾದ ಹೋರಾಟದ ರೂಪು-ರೇಷೆಗಳನ್ನು ನಿರ್ಧರಿಸಬೇಕಾಗಿದೆ. [illegible] ■

ಸರ್ಜಾಶಂಕರ ಹರಳಿಮಠ

ಸರ್ಜಾ ಶಂಕರ್ ಅವರು ಬಹಳಷ್ಟು ಸಲ ಹೃದಯದಿಂದ ಚಿಂತಿಸುತ್ತಾರೆ. ಅದು ಒಳ್ಳೆಯದೇ. ಆದರೆ ಇದುವೇ ಅವರ ಕತೆಗಳಿಗೆ ಒಮ್ಮೊಮ್ಮೆ ಅತಿಭಾವುಕವಾದ ಆವರಣವನ್ನು ಕೊಡುತ್ತದೆ. ಅವರ ಕಾವ್ಯಾತ್ಮಕವಾದ ಭಾಷೆಯಲ್ಲೂ ಈ ಬಗೆಯ ಭಾವುಕತೆಯಿದೆ. ಬಾಲ್ಯದ ಬದುಕಿಗೆ ಹೋಗಿ ಅಲ್ಲಿಂದ ಚಿತ್ರಗಳನ್ನು ಎತ್ತಿಕೊಂಡು ಬರುವ ಸರ್ಜಾ ಅವರ ಅಂಕಣ, ಪ್ರಬಂಧಗಳು, ಆತ್ಮಕಥನದ ಆಯಾಮದಿಂದ ಆಪ್ತವಾಗುತ್ತವೆ.



ನನಗೆ ಸರ್ಜಾಶಂಕರ ಹರಳಿಮಠ ಅವರ ಪರಿಚಯವಾಗಿದ್ದು 'ಬೆಚ್ಚಬೀಳಿಸಿದ ಬೆಂಗಳೂರು' ಎಂಬ ಅಂಕಣ ಬರೆಹದ ಪುಸ್ತಕದಿಂದ. ಅವರನ್ನು ಕಂಡಿರದ ಮತ್ತು ಓದಿರದ ನನಗೆ, ಮುನ್ನುಡಿ ಬರೆಯಲು ಶಿವಮೊಗ್ಗೆಯ ಗೆಳೆಯರು ಒಂದು ಹಸ್ತಪ್ರತಿ ಕಳಿಸಿದರು. ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ನೌಕರನಾಗಿರುವ ತೀರ್ಥಹಳ್ಳಿ ಸೀಮೆಯ ಹಳ್ಳಿಯ ಯುವಕನೊಬ್ಬ ತನ್ನ ಊರಿನ ಪುಟ್ಟಪತ್ರಿಕೆಯಲ್ಲಿ ಒಂದು ವರ್ಷಕಾಲ ಬರೆದ ಅಂಕಣ ಬರೆಹಗಳವು. ಓದತೊಡಗಿದೆ. ಅತ್ಯುತ್ತಮ ಮನಸ್ಸಿನ ಅಭಿವ್ಯಕ್ತಿಗಳಂತೆ ಅವಿದ್ದವು. ಊರಿನ ನೆನಪುಗಳನ್ನು ಪರಸ್ಥಳವಾದ ಬೆಂಗಳೂರಿನ ವರ್ತಮಾನದಲ್ಲಿ ನೆನೆಯುತ್ತ ಬೆಂಗಳೂರಿನಲ್ಲಿ ಆಗುತ್ತಿರುವ ತನ್ನ ಅನುಭವಗಳನ್ನು ಊರಿನ ಬದುಕಿನ ಜತೆಗಿಟ್ಟು ನೋಡುತ್ತ-ಹುಟ್ಟಿದ್ದ ಆ ಬರೆಹಗಳು ತುಂಬ ಫ್ರೆಶ್ ಆಗಿದ್ದವು. ಕಾಳಜಿಯಿಂದ ಕೂಡಿದ ಸೂಕ್ಷ್ಮ ಮನಸೊಂದು, ತನ್ನ ಪರಿಸರಕ್ಕೆ ಜೀವಂತಿಕೆಯಿಂದ ಮಿಡಿಯುತ್ತ ಮೂಡಿದ್ದ ಆ ಬರೆಹಗಳಲ್ಲಿ ಒಂದು ಬಗೆಯ ತೀವ್ರತೆಯಿತ್ತು. ಚಿತ್ರಕವಾದ ಭಾಷೆಯಿತ್ತು. ಹೊಸ ಸಮಾಜ ಕಟ್ಟುವ ಕನಸು, ತನ್ನ ಮಿತಿಗಳನ್ನು ಮೀರುವ ತುಡಿತ, ಮನುಷ್ಯರ ಸಣ್ಣತನಗಳಿಗೆ ಆಕ್ರೋಶ, ಸಮಾನತೆಗಾಗಿ ತುಡಿತ, ಮಾನವೀಯತೆ ಎಲ್ಲವೂ ಇದ್ದವು. ಇದೇ ಮಲೆನಾಡಿನ ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಚಿಂತನೆ, ಗೋಪಾಲಗೌಡರ ಸಮಾಜವಾದಿ ರಾಜಕಾರಣ, ಅನಂತಮೂರ್ತಿಯವರ ಚಿಂತನಶೀಲತೆ, ಲಂಕೇಶರ ಬಂಡುಕೋರತನಗಳು, ಈ ಭಾಗದ ಹೊಸತಲೆಮಾರಿನ ಬರೆಹಗಾರರಲ್ಲಿ ಇಂಗಿ, ಹೊಸರೂಪದಲ್ಲಿ ಮೈದಾಳುತ್ತಿವೆಯೇನೊ ಎಂಬಂತೆ ಆ ಬರೆಹಗಳಿದ್ದವು.

ನನಗೆ ಅಲ್ಲಿ ಸೋಜಿಗವಾಗಿದ್ದು, ಹೆಚ್ಚಿನವರು ಮಹಾನಗರಕ್ಕೆ ನಾನಾ ಕಾರಣಗಳಿಂದ ಮುಖಮಾಡಿರುವ ಹೊತ್ತಲ್ಲಿ, ಅದರಿಂದ ಬೆಚ್ಚಬಿದ್ದು ಮರಳಿಮಣ್ಣಿಗೆ ಬರಲು ಯುವಕನೊಬ್ಬ ತವಕಿಸುತ್ತಿರುವುದು. (ಹೀಗೆ ಬೆಂಗಳೂರಿನಿಂದ ಬೆಚ್ಚಬಿದ್ದು ಮರಳಿ ಮನೆಗೆ ಬಂದು ಬರೆಯುತ್ತಿರುವ ಇನ್ನೊಬ್ಬ ಲೇಖಕರೆಂದರೆ, ಲಕ್ಷ್ಮಣ ಬದಾಮಿ.) ಆದರೆ ನಮ್ಮ ನಗರಗಳ ಬದುಕಲ್ಲಿ ಹೊಸಬರನ್ನು ಎಳೆದುಕೊಳ್ಳುವ ಸೆಳೆತವೂ ಇದೆ. ಬೆಚ್ಚಬೀಳಿಸಿ ಓಡಿಸುವ ಗುಣವೂ ಇದೆ. ಈ ಸೆಳೆತ ಮತ್ತು ಭೀತಿಗಳನ್ನು ಸಿನಿಕರಾಗದೆ ಮೇಳವಿಸಿ ಸರಳೀಕರಿಸದೆ ಬರೆಯುವುದು ಒಂದು ಸವಾಲು. ಆ ಸವಾಲನ್ನು ಈ ಅಂಕಣ ಬರೆಹಗಳು ಸಮತೋಲನದಿಂದ ನಿಭಾಯಿಸಿದ್ದವು.

ಪೂರ್ವಗ್ರಹಗಳನ್ನು ಹೇರುವ ಬದಲು, ಸುಮ್ಮನೆ ತಮಗಾದ ಅನುಭವಗಳನ್ನೆಲ್ಲ ತಮಗೆ ಹುಟ್ಟಿದ ಪ್ರಶ್ನೆಗಳನ್ನು ಮುಕ್ತವಾದ ಮನಸ್ಸಿನಿಂದ ಓದುಗರ ಮುಂದಿಟ್ಟು ಸಂವಾದಕ್ಕೆ ಒಡ್ಡಿಕೊಂಡಿದ್ದವು.

ಬಾಲ್ಯದ ಬದುಕಿಗೆ ಹೋಗಿ ಅಲ್ಲಿಂದ ಚಿತ್ರಗಳನ್ನು ಎತ್ತಿಕೊಂಡು ಬರುವ ಸರ್ಜಾ ಅವರ ಅಂಕಣ ಪ್ರಬಂಧಗಳು, ಆತ್ಮಕಥನದ ಆಯಾಮದಿಂದ ಆಪ್ತವಾಗುತ್ತವೆ. ಇವು ತಮ್ಮೊಳಗೆ ಒಂದು ಬಗೆಯ ಸಣ್ಣಕತೆಯ ರೂಪವನ್ನು ಕೂಡ ಒದಗಿಸಿಕೊಂಡಿವೆ. ಇವು ಅವರು ಸಣ್ಣಕಥೆಗಾರನಾಗಿ ಹೊಮ್ಮಲು ಮಾಡಿಕೊಂಡ ಸಿದ್ಧತೆಯಂತೆ ಕೂಡ ತೋರುತ್ತವೆ. ಯಾಕೆಂದರೆ, ಅವರ ಅಂಕಣಗಳಲ್ಲಿ ಮತ್ತೆಮತ್ತೆ ಬರುವ ಅಪ್ಪಯ್ಯನ ಪಾತ್ರವು, ಕತೆಗಳಲ್ಲಿ ಬೇರೊಂದು ಬಗೆಯಲ್ಲಿ ಮುಂದುವರೆಯುತ್ತದೆ. ಅದರಲ್ಲೂ ಗುಡಿಯಲ್ಲಿ ಪೂಜೆ ಮಾಡುವ, ಉಳಿದ ಹೊತ್ತಲ್ಲಿ ತಲೆಯ ಮೇಲೆ ಗೌಡರ ಮನೆಯ ಹಾಲಿನ ಕ್ಯಾನನ್ನು ತೀರ್ಥಹಳ್ಳಿಗೆ ಹೊತ್ತುಹೋಗುವ, ಅಲ್ಲಿನ ಭತ್ತದ ಮಿಲ್ಲಿನಲ್ಲಿ ಖಾಲಿಚೀಲಗಳನ್ನು ಹೊದ್ದುಕೊಂಡು ಮಲಗಿದ್ದು ಬೆಳಕು ಹರಿದಾಗ ಬರುವ, ಹೆಗ್ಗಡೆಯವರ ಅಡಿಕೆ ಬೇಯಿಸುವ ಬಾಯ್ಲರಿನ ಒಲೆಗೆ ರಾತ್ರಿಯೆಲ್ಲ ಗರಿತಳ್ಳುವ ಈ ಅಪ್ಪಯ್ಯನ ಪಾತ್ರವು, ಮಲೆನಾಡಿನ ಬ್ರಾಹ್ಮಣರನ್ನು ಕುರಿತ ನಮ್ಮ ಗ್ರಹಿಕೆಗಳನ್ನು ಒಡೆದುಹಾಕುತ್ತದೆ.


ಮುಂದೆ ಸರ್ಜಾ, ಸಣ್ಣಕತೆಗಳನ್ನು ಬರೆದರು. ಅವು ಹಲವಾರು ಕಡೆ ಬಹುಮಾನ ಪಡೆದಿವೆ. ಅವೆಲ್ಲವೂ 'ಬಾರಯ್ಯ ಬೆಳದಿಂಗಳೇ' ಎಂಬ ಸಂಕಲನದಲ್ಲಿ ಪ್ರಕಟವಾಗಿವೆ. ಅದರಲ್ಲಿ 'ಸಾವಿತ್ರು ಮಕ್ಕು' 'ಬಾರಯ್ಯ ಬೆಳದಿಂಗಳೇ' ಮುಂತಾದ ಒಳ್ಳೆಯ ಕತೆಗಳಿವೆ. ಪ್ರಬಂಧದಂತೆ ಕತೆಬರೆಯುವ, ಕಥೆಯಂತೆ ಪ್ರಬಂಧ ಬರೆಯುವ, ಸರ್ಜಾ ಇಲ್ಲಿ ಕೆಲವು ಹೊಸಲೋಕಗಳನ್ನು ತೆರೆದು ತೋರುತ್ತಾರೆ. ಅವುಗಳಲ್ಲಿ ಮಲೆನಾಡಿನ ಇತ್ತೀಚಿನ ವಿದ್ಯಮಾನಗಳ ಚಿತ್ರಣಗಳಿವೆ. ಇವು ಕುವೆಂಪು ಮತ್ತು ಅನಂತಮೂರ್ತಿಯವರು ಕೊಡುವ ಚಿತ್ರಗಳಿಗಿಂತ ಭಿನ್ನವಾದವು. ಈ ಭಿನ್ನತೆಯನ್ನು 'ಕುವೆಂಪುಗೆ ಸಿಗದ ಕತೆ'ಯಲ್ಲಿ ನೋಡಬಹುದು. ಈ ಕತೆ ಕುವೆಂಪು ಜತೆಗೆ ನಮ್ರವಾಗಿ ಮಾಡಿರುವ ಸಂಘರ್ಷವೂ ಹೌದು. ಅವರು ಕಟ್ಟಿಕೊಟ್ಟ ಬದುಕಿಗೆ ಒಡೆದ ಹೊಸಚಿಗುರೂ ಹೌದು. ಪರಂಪರೆ ಎಂದರೆ, ಯಾರೊ ದೊಡ್ಡವರು ನಡೆದ ದಾರಿಯಲ್ಲಿ ಸಾಗುವುದು ಮಾತ್ರವಲ್ಲ, ಅದರ ಜತೆಗೆ ಜಗಳ ಕೂಡ. ಒಬ್ಬ ಲೇಖಕ ತನ್ನ ಸುತ್ತಲ ಬದುಕಿಗೆ ಅದರ ವಾಸ್ತವತೆಗೆ ನಿಷ್ಠನಾಗಿರುವ ಮೂಲಕವೇ, ಪರಂಪರೆಯನ್ನು ವಿಮರ್ಶೆ ಮಾಡುತ್ತಲೇ ಅದರ ಭಾಗವಾಗುವ ಬಗೆಯನ್ನು ಇಲ್ಲಿ ಕಾಣಬಹುದು.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಅತಿಹೆಚ್ಚು ಕೊಡುಗೆಗಳನ್ನು ನೀಡಿರುವ ಕೀರ್ತಿ ತೀರ್ಥಹಳ್ಳಿ ಸೀಮೆಯ ತುಂಗಾತೀರಕ್ಕೆ ಸಲ್ಲುತ್ತದೆಯೊ ಏನೊ? ಅಂತಹ ಜಾಗದಿಂದ ಬಂದು ಬರೆಯಬೇಕೆಂದರೆ, ಕುವೆಂಪು ಅವರಿಂದ ಹಿಡಿದು ಅನಂತಮೂರ್ತಿಯು ಅವರ ತನಕ, ಎಷ್ಟೊಂದು ಮಾದರಿಗಳಿವೆ. ಇವೇ ಹೊಸತಲೆಮಾರಿನ ಪ್ರತಿಭೆಗಳಿಗೆ ಸವಾಲು ಕೂಡ ಆಗಿವೆ. ಈ ಸವಾಲನ್ನು ತಮ್ಮದೇ ರೀತಿಯಲ್ಲಿ ಸರ್ಜಾ ತರಹದ ಲೇಖಕರು ಕೈಗೆತ್ತಿಕೊಂಡಿದ್ದಾರೆ. ಅವರ ಕತೆಗಳ ವಿಶಿಷ್ಟತೆ ಇರುವುದು ಮಲೆನಾಡು ಭಾಗದ ಜೀವನ ಚಿತ್ರಗಳನ್ನು ನೀಡುತ್ತಲೇ ಮನುಷ್ಯರ ಮನಸ್ಸಿನ ತಲ್ಲಣಗಳನ್ನು ಹಿಡಿಯುವುದು.

ಸರ್ಜಾ ಶಂಕರ್ ಅವರು ಬಹಳಷ್ಟು ಸಲ ಹೃದಯದಿಂದ ಚಿಂತಿಸು... ಅದು ಒಳ್ಳೆಯದೇ. ಆದರೆ ಇದುವೇ ಅವರ ಕತೆಗಳಿಗೆ ಒಮ್ಮೊ... ಅತಿಭಾವುಕವಾದ ಆವರಣವನ್ನು ಕೊಡುತ್ತದೆ. ಅವರ ಕಾವ್ಯಾತ್ಮಕವಾ... ಭಾಷೆಯಲ್ಲೂ ಈ ಬಗೆಯ ಭಾವುಕತೆಯಿದೆ. ಅವರ ಕತೆಗಳಲ್ಲಿನ ... ಉದ್ದನೆಯ ವಾಕ್ಯಗಳ ಪ್ರಯೋಗವು ಬಹಳ ಪರಿಣಾಮಕಾರಿ ಎ... ಅನಿಸುವುದಿಲ್ಲ. ಮುಸ್ಲಿಮರನ್ನು ಕುರಿತ ಸಾರ್ವಜನಿಕ ಬದುಕಿನಲ್ಲಿ ಇರ... ಪೂರ್ವಗ್ರಹಿಕೆಗಳನ್ನು ಒಡೆದುಹಾಕುವುದಕ್ಕೆ ಅವರು ಕೊಡುವ ಚಿತ್ರ... ಕೆಲವೊಮ್ಮೆ ಉದ್ದೇಶಪೂರ್ವಕ ಅನ್ನಿಸುವುದುಂಟು. ಸರ್ಜಾ ಅವರು ಬ... ಮಹತ್ವಾಕಾಂಕ್ಷೆಯಿಂದ ಬರೆಯುವ ಅನೇಕ ಕತೆಗಳು ಸಾಧಾರಣವಾಗಿ ತೋರು... ಸದ್ಯಕ್ಕೆ 'ಬಾರಯ್ಯ ಬೆಳದಿಂಗಳೇ' ಓದಿದ ಬಳಿಕವೂ 'ಬೆಚ್ಚಬೀಳಿ... ಬೆಂಗಳೂರು' ನನ್ನ ಪ್ರಿಯವಾದ ಪುಸ್ತಕಗಳಲ್ಲಿ ಒಂದಾಗಿದೆ.


ನಿಜಕ್ಕೂ ಸರ್ಜಾ ಶಂಕರ್, ತಮ್ಮ ಬರೆಹದಾಚೆ ಚಾಚಿಕೊಳ್ಳುತ್ತಿ... ವ್ಯಕ್ತಿತ್ವವು ನನಗೆ ಆದರ ಹುಟ್ಟಿಸಿದೆ. ಅವರು ಶಿವಮೊಗ್ಗ ಜಿಲ್ಲೆಯ ಪಿಯುಸಿ... ಘಟಕದ ಕಾರ್ಯದರ್ಶಿ. ಕೋಮುವಾದ ವಿರೋಧಿ ಚಳವಳಿಯ... ತೊಡಗಿಕೊಂಡವರು. ಎಲ್ಲಿ ನೋವಾದರೂ ಅದು ತನ್ನದೆಂಬ... ಮಿಡಿಯುವವರು. ಇದನ್ನು ಅವರು ರೂಢಿಸಿಕೊಂಡಿದ್ದು ಲಂಕೇಶ್ ಅ... ಬರೆಹ ಮತ್ತು ಪತ್ರಿಕೆಗಳಿಂದ. ಲಂಕೇಶ್ ಪತ್ರಿಕೆ ಮೂಡಿಸಿದ ರಾಜಕೀ... ಪ್ರಜ್ಞೆಯು, ಇಂತಹ ಅನೇಕ ತರುಣ ಮನಸ್ಸುಗಳನ್ನು ರೂಪಿಸಿತು. ಅವ... ಚಿಂತಿಸುವ ಮತ್ತು ಬರೆಹ ಮಾಡುವ ಕಲೆಯನ್ನು ಮಾತ್ರವಲ್ಲದೆ, ತ... ಪರಿಸರವನ್ನು ಬದಲಿಸುವುದಕ್ಕೆ ಯತ್ನಿಸುವುದನ್ನು ಕಲಿಸಿತು. ಈಗಲ... ಸ್ಥಳೀಯವಾದ ಬೇರೆಬೇರೆ ಪತ್ರಿಕೆಗಳಲ್ಲಿ ಸರ್ಜಾ ಅವರು ತಮ್ಮ ಪರಿಸ... ವಿದ್ಯಮಾನಗಳಿಗೆ ಶಾರ್ಪಾಗಿ ಪ್ರತಿಕ್ರಿಯಿಸುತ್ತ ಇರುತ್ತಾರೆ.

ಸರ್ಜಾ ಅವರು ಒಂದು ದೇಶೀ ಸಂಸ್ಕೃತಿ ಎಂಬ ಅಂಗಡಿ ನಡೆಸುತ್ತ... ಅದರಲ್ಲಿ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಕುಶಲಕರ್ಮಿಗಳು ಅದರಲ್ಲೂ ಮಹಿಳೆಯರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಅವ... ತಮ್ಮ ಅಂಗಡಿ ಆರಂಭಿಸಿದಾಗ, ನನಗೆ ಅವರು ಕನ್ನಡದ ಅತ್ಯಂತ ಮಹತ್ವ... 25 ಕಾದಂಬರಿಗಳನ್ನು ಪಟ್ಟಿಮಾಡಿಕೊಡಲು ಕೇಳಿದರು. ಅವನ್ನು ತರಿ... ತಮ್ಮ ಅಂಗಡಿಯ ಕಪಾಟಿನಲ್ಲಿಟ್ಟರು - ಅಂಗಡಿಗೆ ಬಂದುಹೋಗುವವರಿಗೆ



ಅವು ಓದಲು ಸ್ಫೂರ್ತಿಯಾಗಲಿ ಎಂದು. ಈಗ ಸರ್ಜಾ ಅಂತಃಕರಣ ಎ... ಪ್ರಕಾಶನ ಆರಂಭಿಸಿದ್ದಾರೆ. ಅವರು ವರ್ಷಕ್ಕೊಮ್ಮೆ ತುಂಗಾತೀರದಲ್ಲಿ ಬೆಳದಿಂ... ರಾತ್ರಿಯಲ್ಲಿ ಏರ್ಪಡಿಸುವ ಊಟ ಮತ್ತು ಚರ್ಚಾಗೋಷ್ಠಿಗಳ ಬಗ್ಗೆ ನಾ... ಕೇಳಿದ್ದೇನೆ. ಹೋಗಲು ಸಾಧ್ಯವಾಗಿಲ್ಲ.

ಲೇಖಕರು ಏಕಾಂತವನ್ನು ನಿರ್ಮಿಸಿಕೊಂಡು ಬರೆಯುವುದು ಮ... ಪ್ರಕಟಿಸುವುದು ಸುಲಭ. ಆದರೆ ತಮ್ಮ ಊರು ಪರಿಸರವನ್ನು ಜೀವಂತವಾ... ಇಡಬೇಕು ಎಂದು ತುಡಿಯುತ್ತ ಆಕ್ಟಿವಿಸ್ಟ್ ಆಗಿ ರಿಸ್ಕ್ ತೆಗೆದುಕೊಳ್ಳುವು... ಕಷ್ಟದ ಕೆಲಸ. ಸರ್ಜಾರಂತಹ ತರುಣರು ತಮ್ಮ ಊರುಗಳನ್ನು ತಮ... ಬರೆಹ ಮಾತುಕತೆ ಮತ್ತು ಕ್ರಿಯಾಶೀಲತೆಗಳಿಂದ ಜೀವಂತವಾಗಿ ಇಟ್ಟಿರುವ... ಭೈರಪ್ಪನವರಂತಹ ಹಿರಿಯ ಲೇಖಕರು ಅತಿಜಾಣ್ಮೆಯಿಂದಲೂ ಮತೀ... ಲೆಕ್ಕಾಚಾರದಿಂದಲೂ ಕೂಡಿದ ಬರೆಹ ಮಾಡುತ್ತಿದ್ದಾರೆ. ಕೆಲವು ಹಿರಿಯ... ಒಳಗಿನ ಒತ್ತಡವಿಲ್ಲದೆ ಸಾಧಾರಣ ಬರೆಹಗಳನ್ನು ಮಾಡುತ್ತಿದ್ದಾರೆ. ಇಂತ... ಸನ್ನಿವೇಶದಲ್ಲಿ, ನಾಡನ್ನು ಕಟ್ಟುವ ಕನಸಿನಿಂದ ಕೂಡಿ ಜೀವಂತಿಕೆ ಮಿಡಿಯುವಂತ... ಬರೆಹ ಮಾಡುತ್ತಿರುವ ಇಂತಹ ಲೇಖಕರು ಕನ್ನಡ ಸಾಹಿತ್ಯದ ಮಾನವೀ... ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ.



ಚೆಲುವು

ಒಂದೇ ಒಂದು ಕ್ಷಣ
ಎಲ್ಲವನ್ನೂ ಮರೆತು
ಈ ಪುಸ್ತಕ ಮತ್ತು ಲೇಖನಿ ಹಿಡಿದು
ಕುಳಿತೆ

ಸ್ವರ್ಗವೆಂದರೆ ಇದೇ ಅಲ್ಲವೇ?!
ಎನಿಸಿತು
ಮನಸಿನಲ್ಲಿ ನನ್ನದೇ ಅನಿಸಿಕೆ ಇದೆ

ಆ ಅನಿಸಿಕೆ ಬರೆಯಲು ಬೆರಳುಗಳಿವೆ
ಪ್ರಶಾಂತ ಸ್ಥಳದ ಆಸರೆ ದೊರೆತಿದೆ

ಸುಮ್ಮನೆ ಒಂದು ಕ್ಷಣ
ಎಲ್ಲವನ್ನೂ ಕಳಚಿಕೊಂಡು
ತೊಟ್ಟಿಂದ ಬಿಡಿಸಿಕೊಂಡ ಹೂವಿನಂತೆ
ಇರುವುದು ಎಷ್ಟು ಚೆಂದ!

ಹೂವಿದೆ ಅಷ್ಟೆ
ಏನನ್ನಾದರೂ ಮಾಡಿಕೊಳ್ಳಿ
ಬಾಡಿ ಮಣ್ಣು ಸೇರುವವರೆಗೂ
ಹೂವಾಗಿ ಮಾತ್ರ ಇರುತ್ತದೆ

● ಜ್ಯೋತಿ ಗುರುಪ್ರಸಾದ್

...ಟ್ಟಿ ತಂದು ಮಂತ್ರಿ ಮಾಡಿದ್ರೆ ಇನ್ನೇನು ಮಾಡ್ತನ್ಲ ಅವುನು?

...ಳೆಯಿಲ್ಲದ ಬರಿ ಮೋಡ ಮುಚ್ಚಿದ ಒಂದು ...ವೇಳೆಯಲ್ಲಿ ಸೀರ,

"...ಡೂರಪ್ಪ ಮಗನಿಗೆ ಸೈಟು ಕೊಟ್ಟನಂತೆ?" ಎಂದ.

"...ಲ್ಲೀ?" ಎಂದ ಕಾಳಮಾವ.

"...ಂಗಳೂರಲ್ಲಿ ಕೊಟ್ಟನಂತೆ."

"...ಂಗ ಅವುನ ಜ್ವತೆಲಿ ಇದ್ದನೊ, ಪಾಲು ಕೊಟ್ಟ

...ಲು ಕೊಟ್ಟಿರಬೇಕು. ಅದಕೆ ಬ್ಯಾರೆ ಹೋಗು ...ೈಟು ಕೊಟ್ಟನೇನೋ."

...ಪ ಕೊಡದೆ ಇನ್ನೇನು ಮಾಡ್ತನೂ. ಅವುನ ...ೇನು ಮನಿತ್ತೆ. ಅದಕೆ ಒಂದು ಸೈಟು ಕೊಟ್ಟ ...ಎಂದ ಉಗ್ರಿಯ ವ್ಯಂಗ್ಯವನ್ನು ಗ್ರಹಿಸದ ಜುಮ್ಮಿ, ...ಗನೆ ಎಡೂರಪ್ಪನ ಮಗನಿಗೆ ಏನೂ ಇಲವೇನ್ಲ?"

...ಗೆ ನೋಡಿದ್ರೆ ಏನೂ ಇಲ್ಲ ಅನ್ನಂಗೆ ಕಾಣ್ತದೆ." ...ಡೂರಪ್ಪನಿಗೆ ತಾನೆ ಏನಿದ್ದತ್ಲ? ಇಲ್ಲಿಂದ ಹೋಗಿ ...ತನಕೆ ಸೇರಿಕೊಂಡೋನಲವೆ? ಅವುನಿಗೆ ಶಿಕಾರಿ ... ಮಾವನ ಮನೆ ಆಸ್ತಿ ಬುಟ್ರೆ ಇವುನ್ದು ಅಂತ ...?" ಎಂದ ಸೀರ.

...ಡೂರಪ್ಪಂದು ಏನೂ ಇಲ್ಲ ಅನ್ನಂಗೆ ...ತ್ತಯಲ್ಲೊ ಸೀರ ಮಾವ, ನೀನು ಶಿಕಾರಿಪುರದಲ್ಲಿ ...ಮಾಡಿದ್ದಿಯಾ?"

...ಾಡದೇನು? ಅವುನು ಬೆಂಗಳೂರಲ್ಲಿ ಮನೆ ...ಗೆ ಸೈಟು ಕೊಡೋರ ಜ್ವತೆಲಿ ಮಗನಿಗೂ ಒಂದು ...ಕೊಡ್ತನೆ ಅನ್ನದಾದ್ರೆ ಮನೆ ಮಠ ಇಲ್ದೋರಿಗೆ ...ೀಟಾದರಲವೇನ್ಲ."

...ಯ ಲು ಸೀ ಮೆ

...ಪಟ್ಟೆಪುರಾಣ

▶ಬಿ. ಚಂದ್ರೇಗೌಡ

...ಾವ, ನೀನು ಎಡೂರಪ್ಪನ ಆಸ್ತಿಯ ಅಳತೆ ... ಆದ್ರೆ ಅದಕೆ ಒಸಿ ದಿನ ಇಡಿತದೆ ಕಣೊ. ಈ ...ಚಲುವರಾಯಸ್ವಾಮಿ ಬಾಮೈದ ಕಂಟ್ರಾಟ್ ... ಅವುನೆ. ಅವುನೇಳಿದ, ಎಡೂರಪ್ಪ ಆಸ್ತಿ ಅಳವ ...ರೆ ಇಲವಂತೆ. ಬೇಕಾದೋಟು ಸೈಟು ತ್ವಾಟ ... ಯಾರು ಏನು ಕೊಡ್ತರೆ ಅದನ್ಯಲ್ಲ ಬಾಜಿ ... ಗುಡ್ಡೆ ಹಾಯ್ಕತಾ ಅವುನಂತೆ. ಅಂಥೋನು ... ಒಂದು ಸೈಟು ಬರದು ಕೊಡ್ತನೆ ಅಂದ್ರೆ ...ಇವುನಿರಬೇಕು ಲ್ಯಕ್ಕ ಹಾಕು."

...ೋಡ ಮತ್ತೆ, ಕೆಡ್ತಿನಿ ಅಂತ ಹಿಂಗೂ ಕೆಟ್ಬರ್ಲ. ... ಕತ್ತರೆ ಅನ್ನದು ಬ್ಯಾಡವೆ?" ಎಂದ ಕಾಳಮಾವ.

...ತ್ರ ಮಾತಿಗೆ ಅವುನ್ಯಾವತ್ತು ಬ್ಯಲೆ ಕೊಟ್ಟಿದ್ದ

ವಹಾವ? ಇವುನ್ನ ಅಂಗೇನೋಡ್ತಾಯಿಂದ್ರೆ, ಗುಂಡೂರಾಯಿನಿಗಿಂತ್ಲೂ ಅತ್ತತ್ತ ಅನ್ನಂಗೆ ಕಾಣ್ತನೆ. ಅಲ್ಲಾ ಶಿವಮೊಗ್ಗ ಜಿಲ್ಲೆಯ ಗೋಪಾಲಗೌಡ್ರು ಮೂರುಸತಿ ಶಾಸಕರಾಗಿದ್ರು ಸತ್ತಾಗ ಒಂದು ಮನೆ, ಸೈಟು ಏನೂ ಇರಲಿಲ್ಲ. ಈ ಎಡೂರಪ್ಪ ಮಗನಿಗೆ ಸೈಟು ಕೊಡುವಾಗ ಗೋಪಾಲಗೌಡ್ರು ನ್ಯನಪಿಗೆ ಬರಲಿಲ್ವೆ" ಎಂದ ಉಗ್ರಿ.

"ಗೋಪಾಲಗೌಡ್ರು ಯಾರ್ಲ?" ಎಂದಳು ಜುಮ್ಮಿ.

"ಅವುರ್ಯಾರು ಅಂದ್ರೇನೇಳನವ್ವ. ಈಗೋಗಿ ಎಡೂರಪ್ಪನಿಗೆ ಗೋಪಾಲ ಗೌಡ್ರು ಗೊತ್ತೆ ಅಂದ್ರೆ ಅವುನು ನಿನ್ನಂಗೆ ಕೇಳ್ತನೇನೊ. ಅವುರಂಥ ರಾಜಕಾರಣಿ ದೇಸದಲ್ಲಿ ವಬ್ರೊ ಇಬ್ರೊ ಇದ್ದರೇನೊ. ಈ ನಮ್ಮ ಕರ್ನಾಟಕದಲ್ಲಿ ಇರದು ಮಾತ್ರ ಅವುರೊಬ್ಬರೆಯಾ."

"ಈಗ್ಲು ಇದ್ದರೆ?"

"ಬಡಬಗ್ಗರ ಮನಸಲ್ಲಿ ಈಗ್ಲು ಅವುರೆ. ಅವುರ್ಯಂತ ರಾಜಕಾರಣ ಮಾಡುದ್ರೂ ಅಂದ್ರೆ ಜನಗಳಿಗಾಗಿ ಹೋರಾಡ್ತ ಹೋರಾಡ್ತ ಮದಿವಾಗಕ್ಕೆ ಪುರುಸೊತ್ತಿರಲಿಲ್ಲ ಕಣೇ. ಕಡಿಗೆ ಅವುರವ್ವ ಅಳದ ನೋಡಕ್ಯಾಗದೆ ಮದಿವಾದ್ರು. ಆಗವರಿಗೆ ವಯಿಸೇಟು ಗೊತ್ತೆ? ನಲವತ್ತಮೂರು ವರ್ಸಾಗಿತ್ತು."

"ವಸಿ ವರ್ಸವೆ ಆಗ್ಯದೆ ಬುಡು."

"ಅಂತ ಮನ್ಸ ಸಾಯೋ ಕಡೆ ಸತಿ ಮುಖ್ಯಮಂತ್ರಿಗಿರಿ ಮನೆ ಬಾಗಿಲಿಗೂ ಬಂದಿತ್ತು. ಆದ್ರು ಇವತ್ತಿನ ದಿವಸದಲ್ಲಿ ನಾನು ಮುಖ್ಯಮಂತ್ರಿ ಆದ್ರೆ ಏನೂ ಮಾಡಕ್ಯಾಗದಿಲ್ಲ ಬ್ಯಾಡಿ ಅಂದ್ರು. ಅಲ್ಲಿಗಲ್ಲಿಗೆ ಒಂದ್ಯರಡೊರ್ಸಕ್ಕೆ ತೀರಿಕೊಂಡ್ರು. ತೀರಿಕಂಡಾಗ ನೋಡ್ತರೇ, ಇರಕ್ಕೆ ಮನಿಲ್ಲ, ಮನೆ ಕಟ್ಟೊ ಅಂದ್ರೆ ಸೈಟಿಲ್ಲ. ಅಂಗೆ ಬದುಕಿದ್ನವ್ವ."

"ಇವತ್ತು ನೀನೇಳದ ಯಾರೂ ನಂಬದಿಲ್ಲ ಬುಡು."

"ಯಂಗೆ ನಂಬತರ್ಲ? ಮೂರುಸತಿ ಎಮ್ಮೆಲ್ಲೆ ಆಗಿದ್ರು ಮನಿಲ್ದೆ ಸತ್ತ ಅನ್ನ ಮಾತ ಇವತ್ತು ಯಾವನು ನಂಬ್ಯನೂ?" ಎಂದ ಕಾಳಮಾವ.


"ಅಲ್ಲಾ, ಜಿಲ್ಲಾ ಪಂಚಾತಿ ಮೆಂಬ್ರು ಆಗ್ನೆ ಕಾರ ತಗಂಡು ಓಡಾಡ್ತ ಅವುನೆ. ಕಾರಿಗೆ ದುಡ್ಡು ಯಂಗೆ ಬತ್ತು ಅಂದ್ರೆ ಕ್ಯರೆ ಹೂಳೆತ್ತಿದ್ದು, ರಸ್ತಿಗೆ ತಾರಾಕಿದ್ದು ಸೇತುವೆ ಮಾಡಿದ್ದು ಅಂತ ಊರು ಜನ ಹೇಳತ ಕುಂತವುರೆ. ನಮ್ಮ ಸುತ್ತಮುತ್ತ ಇಂತ ಜನವೇ ಇರುವಾಗ ಗೋಪಾಲಗೌಡ್ರ ಯಾವನು ನ್ಯನಕಂಡನೂ ಅಂತ" ಎಂದ ಸೀರ.

"ನೀನು ನ್ಯನಕಳದು ಬ್ಯಾಡಕಣ ಮಾವ. ಶಿವಮೊಗ್ಗ ಜಿಲ್ಲೆಲಿದ್ದ ಎಡೂರಪ್ಪ ನ್ಯನಕಬೇಕಾಗಿತ್ತು, ನ್ಯನಕಂಡು ಮಗನಿಗೆ ಸೈಟು ಕೊಡೋ ಮುನ್ನ ಈರೋ ಸೈಟನ್ಯಲ್ಲ ಮಾರಿ ಸೈಟು ತಗೊ ಹೋಗಪ್ಪ ಅನ್ನಬೇಕಾಗಿತ್ತು. ಅದು ಬಿಟ್ಟು ಮಗನಿಗೂ ಒಂದು ಸೈಟು ಕೊಟ್ಟ ಅಂದ್ರೆ, ನಾವಿನ್ನೆನಾರ ಮಾತಾಡಂಗಿದ್ದತೇ."

"ಒಂದು ವಿಷಯದಲ್ಲಿ ಎಡೂರಪ್ಪನೂ ಮಾತಾಡಿಲ್ಲ ಕಣೊ ಉಗ್ರಿ" ಎಂದುಕೊಂಡು ಪಾಟಿಸ್ಸೆ ಬಂದ.

"ಯಾವ ವಿಷಯನಪ್ಪ?"

"ಕುಮಾರಣ್ಣ, ಎಡೂರಪ್ಪನೂ, ಕೃಷ್ಣಯ್ಯಶೆಟ್ಟಿಗೂ ಆಂದ್ರದಲ್ಲಿ ಆಸ್ತಿ ಮಾಡ್ಯವುರೆ ಅಂತ ಹೇಳಿದ. ಅದಕೆ ಇವತ್ತಿನವರಿಗೂ ಎಡೂರಪ್ಪ ಉಸುರೆತ್ತಿಲ್ಲ."



"ನೋಡಪ್ಪ, ಕುಮಾರಸ್ವಾಮಿ ಅಂಥೋನು ಆಪಾದ್ನೆ ಮಾಡಿದಾಗ್ಲು ಉತ್ತರ ಕೊಡಕ್ಯಾಗದಿಲ್ಲ ಅನ್ನದಾದ್ರೆ ಎಡೂರಪ್ಪ ಇನ್ನೆಷ್ಟು ಮಾಡಿರಬೇಕು."

"ಕುಮಾರಸ್ವಾಮಿ ಅಂಥೋನು ಅದ್ರೇನೂ ಅಂತ."

"ಅವುನು ಬೆಂಗಳೂರಿಂದ ಮೈಸೂರುಗಂಟ ಮಾಡಿದ್ದನಂತೆ. ಕೇಳಿದ್ರೆ ಯಾವುದೋ ಅಜ್ಜಿ ನನ್ನೆಸರಿಗೆ ಬರಿತು ಅಂದ. ಅಂತ ಕಾರಣನೂ ಇಲವ ಎಡೂರುಂತ."

"ಯಲ್ಲಾತಕ್ಕಿಂತ ಮಜ ಅಂದ್ರೆ ಎಡೂರಪ್ಪನ ಬಾಮೈದನ ತರ ವಬ್ಬವುನೆ ಕಣಮಾವ. ಕಿಷ್ಣಯ್ಯ ಶೆಟ್ಟಿ ಅಂತ ಅವುನೆಸರು. ಆ ಶೆಟ್ಟಿ ಏನು ಮಾಡ್ಯವುನೆ ಅಂದ್ರೆ ರೈತರ ಜಮೀನ ಐದು ಲಕ್ಷಕ್ಕೆ ಕೊಂಡಕಂಡು ಸರಕಾರಕ್ಕೆ ಐವತ್ತು ಲಕ್ಷಕ್ಕೆ ಮಾರಿಬುಟ್ಟವುನೆ. ಇಂತ ಅನ್ಯಾಯನೇನಯ್ಯ ಮಾಡದು ಅಂದ್ರೆ ಏನಂದವುನೆ ಗೊತ್ತಾ?"

"ಏನಂದವುನ್ಲಾ?"

"ನಾವು ಹೇಳಿಕೇಳಿ ಶೆಟ್ರು. ಶೆಟ್ರು ಕ್ಯಲಸೇನಪ್ಪ ಅಂದ್ರೆ ರೈತರತ್ರ ಬತ್ತ, ರಾಗಿ, ಕಾಳು, ಕಡ್ಡಿ ಕೊಂಡಕಂಡು ಮೂರುಪಟ್ಟು ಬ್ಯಲೆ ಏರಿಸಿ ಮಾರದು. ಈಗಲೂ ಅಂಗೆ ಮಾಡಿದ್ದಿನಿ. ಅದೇ ಒಂದು ದೊಡ್ಡ ಸುದ್ದಿ ಅನ್ನಂಗೆ ಕೂಗಾಡ್ತಿರಲ್ಲಾ, ನಿಮ್ಮಂಥ ದಡ್ಡರನ್ನೇ ನೋಡಿಲ್ಲ ನಾನು ಅಂದನಂತೆ."

"ಅದಪ್ಪ ಮಾತು. ಸೆಟ್ರುನ್ಯಲ್ಲ ತಂದು ಮಿನಿಷ್ಟ್ರು ಮಾಡಿದ್ರೆ ಇನ್ನೇನು ಮಾಡ್ತನ್ಲ ಅವುನು?" ಎಂದ ಸೀರ.

"ಅವುನು ಅಂಗಡಿಮ್ಯಾಲಿದ್ದಾಗ ಏನು ಮಾಡತಿದ್ನೊ ಅದ್ನೆ ವಿಧಾನಸೌಧಕ್ಕೂ ಬಂದು ಮಾಡ್ತ ಕುಂತವುನೆ ಚಿಗಪ್ಪ, ಅಂಗೇ ನೋಡಿದ್ರೆ ಈ ಸರಕಾರದಲ್ಲಿ ಇರೋರ್ಯಲ್ಲ ಒಂದಲ್ಲ ಒಂದು ಯವಾರ ಮಾಡತಿದ್ದೋರು. ಅದೂ ಕದ್ದುಮುಚ್ಚಿ ಈ ಸರಕಾರದೊಳಕೆ ಸೇರಿಕಂಡು ರಾಜಾರೋಷ ಮಾಡ್ತ ಅವುರೆ. ಆದ್ರೆ ಸಿಗಾಯ್ಕಂಡೋನು ಮಾತ್ರ ಶೆಟ್ಟಿ. ಅದೂ ಮಾನ ಮರಿಯಾದೆ ಇಲ್ದೋನು."

"ಅವುನ ಯವಾರ ಅವುನು ಒಪ್ಗಂಡ ಮ್ಯಾಲೆ ಮಾನಮರಿಯಾದಿ ಇಲ್ದೋನು ಮಂತ್ರಿ ಯಂಗಾಯ್ತನೆ. ಅವುನು ಸರಿಯಾಗೇ ಅವುನೆ. ಅಂಥೋನ್ನ ಮಂತ್ರಿ ಮಾಡಿದ್ನಲ್ಲ ಅವುನ ಮಾನ ಹರಾಜಯ್ತು ಈಗ" ಎಂದ ಉಗ್ರಿ.

"ಅಂಗೇ ನೋಡಿದ್ರೆ ಈ ಎಡೂರಪ್ಪನ ಸರಕಾರದಲ್ಲಿ ವಬ್ರೂ ನ್ಯಟ್ಟಗಿಲ್ಲ ಕಂಡ" ಎಂದು ಕಾಳಮಾವ ತೀರ್ಪು ಕೊಟ್ಟ.

"ಹಂಡ್ರೆಡ್ ಪರಸೆಂಟ್ ಕರೆಟ್ ದ್ವಡಪ್ಪ, ಸ್ವತಃ ಎಡೂರಪ್ಪನೇ ನ್ಯಟ್ಟಗಿಲ್ಲ ಅಂದ ಮ್ಯಾಲೆ ಇನ್ಯಾರು ನ್ಯಟ್ಟಗಿದ್ದರು ದ್ವಡಪ್ಪ? ಕಳದೊರ್ಸ ಹಾವೇರಿಲಿ ಗ್ವಬ್ಬರದ ಗಲಾಟಿಲಿ ಗೋಲಿ ಬಾರಾಗಿ ಯರಡು ಜನ ರೈತರು ಸತ್ತರು. ಅದರಿಂದ ಎಚ್ಚೆತ್ತುಕೊಂಡು ಈ ವರ್ಸ ಗ್ವಬ್ಬರ್ ಸ್ಟಾಕ್ ಮಾಡಿಕತ್ತರೆ ಅಂತ ನಾವು ತಿಳಕಂಡಿದ್ರೆ ಈ ವರ್ಸ ಇದ್ದುದ್ದೂ ಅದ್ವಾನಾಗ್ಯದೆ ದ್ವಡಪ್ಪಾ."

"ಅಂಗರೀಗ್ಲೂ ಗ್ವಬ್ಬರ ಸಿಕ್ತಯಿಲ್ಲಾ ಅನ್ನು?"

"ಎಲ್ಲಿ ಸಿಕ್ಕತೂ? ಕಿಷ್ಣಯ್ಯ ಶೆಟ್ಟಿ ಅಂತೋರು ಯಲ್ಲಾನು ಕೊಂಡು ಸ್ಟಾಕ್ ಮಾಡಿಕಂಡು ಕುಂತವುರೆ. ಅದ್ಕೆ ಈಗ್ಲು ರೈತರು ಗಲಾಟಿ ಹೋದೊರ್ಸ ದಂಗೆ ನ್ಯಡಿತಾ ಅದೆ."

"ಓ ಅಂಗರಿವ್ರುರ ಕೈಲಿ ಏನೂ ಆಗದಿಲ್ಲ ಬುಡ್ಡ."

"ನಿಜ ದ್ವಡಪ್ಪ ಇವುರು ರೆಸಾರ್ಟಗೋಗಿ ಏನು ಮಾಡಿಕಂಡು ಬಂದ್ರು ಅನ್ನದು ಈಗ ಯಲ್ಲಾರಿಗೂ ಗೊತ್ತಾಯ್ತಾ ಅದೆ. ಇವುರಿಗೂ ರೈತರಿಗೂ ಯಾವ ಸಮಂಧವೂ ಇಲ್ಲ ದ್ವಡಪ್ಪ. ಅಂಗೆ ನೋಡಿದ್ರೆ ಈ ಸರಕಾರದೊಳಗೆ ರೈತರೇ ಇಲ್ಲ. ಯಲ್ಲಾ ಮಾಲೀಕರು. ಅದ್ಕೆ ಆರಾಮಾಗ್ಯವುರೆ."

"ಅಂಗೆ ಆಯ್ತಪ್ಪ ನೀನೇಳದ ನೋಡಿದ್ರೆ."

"ಅಲ್ಲಾ ದೊಡಪ್ಪ ರೈತರಿಗೆ ಸರಿಯಾಗಿ ಗೊಬ್ಬರ ಕೊಡಯ್ಯ ಅಂದ್ರೆ ಮಗನಿಗೆ ಸೈಟು ಕೊಡ್ತಾ ಕುಂತವುನಲ್ಲಾ ದೀಸೀಸ್ ಇನ್‌ಸಲ್ಟ ಟು ಅವರ್ ಸೈಟ್ ಲೆಸ್ ಪೀಪಲ್."

"ಇಂತ ಸರಕಾರ ಹಿಂದೆ ಬಂದಿರ್ಲಿಲ್ಲ ಬುಡು."

"ಇಂತ ಸರಕಾರ ಬಂದಿರ್ಲಿಲ್ಲ ಅನ್ನದು ನಿಜ ದ್ವಡಪ್ಪ. ಆದ್ರೆ ಸೈಟಿನ ವಿಷಯ ಹಳೆದು. ಇದೇ ದೇವೇಗೌಡ್ರು ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಪಿಡಬ್ಲೂ ಮಿನಿಷ್ಟ್ರಾಗಿದ್ರು. ಆಗವುರು ಮಾಡಿದ ಮೊದಲ ಕೆಲಸ ಏನಪ್ಪಾ ಅಂದ್ರೆ ನಾದ್ನಿಗೆ ಮೈಸೂರಲ್ಲಿ ಸೈಟ್ ಅಲಾಟ್ ಮಾಡಿದ್ದು. ಅದನ್ನ ಅವುರು ಪ್ರಾಮಾಣಿಕವಾಗಿ ಸದನದಲ್ಲೇ ಒಪ್ಪಿಗಂಡಿದ್ರು. ದ್ಯಾವೇಗೌಡ್ರಿಗೂ ಎಡೂರಪ್ಪನಿಗೂ ಏನು ವ್ಯತ್ಯಾಸ ಅಂದ್ರೆ ಎಡೂರಪ್ಪ ಇನ್ನು ಒಪ್ಪಿಗೊಂಡಿಲ್ಲ. ಮುಂದೆ ಯಾರೋ ಒತ್ತಾಯ ಮಾಡಿ ಕೇಳಿದ್ರೆ ಒಪ್ಪಿಗಬವುದು."

" !?" ■

...ೀವಿಗೂ ವಿವೇಕಕ್ಕೂ ಸಂಬಂಧವಿದೆಯೇ?

...ನುಷ್ಯ ಎಷ್ಟು ಜಡ ಪ್ರಾಣಿ ಮತ್ತು ಸಮೀಪದೃಷ್ಟಿಯುವ! ಸ್ವಲ್ಪವೇ ಸ್ವಲ್ಪ ಹೆಚ್ಚುಕಮ್ಮಿಯಾಗಿದ್ದರೂ ಕುವೈತ್ ... ಗಜಗರ್ಭ ಸೇರುತ್ತಿತ್ತು. ಸದ್ದಾಂಗೆ ನಿಜಕ್ಕೂ ಬುದ್ಧಿ ಕಡಿಮೆ, ಕೊಬ್ಬು ಹೆಚ್ಚು. ಆತ ಕುವೈತನ್ನು ಆಕ್ರಮಿಸಿಕೊಂಡಾಗಲೇ ...ರೇಬಿಯಾವನ್ನೂ ಹಿಡಿದುಕೊಂಡಿದ್ದರೆ, ಕುವೈತ್‌ಗೆ ಕೈಹಾಕುವ ಮುನ್ನ ಮುಸ್ಲಿಂ ದೇಶಗಳೊಂದಿಗೆ ಸಾಕಷ್ಟು ... ನಡೆದಿದ್ದರೆ, ಆಗಸ್ಟ್‌ನಿಂದ ಜನವರಿಯವರೆಗೆ ಅಮೆರಿಕನ್, ಫ್ರೆಂಚ್, ಬ್ರಿಟಿಷ್ ಸೈನ್ಯ ಮರುಭೂಮಿಯಲ್ಲಿ ...ಗ, ವಿಮಾನ ನಿಲ್ದಾಣದಲ್ಲಿ ಸಂಚರಿಸುವಾಗ, ಬಂದರುಗಳಲ್ಲಿ ನೆಲೆಸುವಾಗ ಇಕ್ಕುತ್ತಾ ಬಂದಿದ್ದರೆ... ... ಬೇರೆ ಇತ್ತು, ಸೌದಿ ಅರೇಬಿಯಾವನ್ನು ಹಿಡಿದುಕೊಂಡಿದ್ದರೆ ಬೇರೆ ಯಾವ ಮುಸ್ಲಿಂ ದೇಶವೂ ...ಾದ ಸೈನ್ಯ ಇಳಿಯಲು ಅವಕಾಶ ಕೊಡುತ್ತಿರಲಿಲ್ಲ; ಅಷ್ಟೇ ಅಲ್ಲ, ಸೌದಿ ಮತ್ತು ಕುವೈತ್‌ನ ತೈಲ ... ಇಡೀ ಜಗತ್ತು ತೈಲಕ್ಕಾಗಿ ಕಾತರಿಸಿ ಬೆಚ್ಚುತ್ತಿತ್ತು.


...ರಲಿ. ನಾನು ಹೇಳಬೇಕೆಂದಿದ್ದುದು ಕುವೈತಿಗಳ ವರ್ತನೆ. ಐಶ್ವರ್ಯದಿಂದ ಸೊಕ್ಕಿದ ಕುವೈತಿಗಳ ... ಯಾರಲ್ಲೂ ಅನುಕಂಪ ಹುಟ್ಟಿಸಲಿಲ್ಲ, ಅಷ್ಟೇ ಅಲ್ಲ ಕುವೈತ್‌ನ ದೊರೆ ಮತ್ತು ಜನ ಎಂಥ ... ಅಂದರೆ, ಕಳೆದೇಹೋಗಿದ್ದ ಕುವೈತ್ ಮತ್ತೆ ದೊರಕಿದ ಮೇಲೂ ಅವರ ಉದ್ಧಟತನ, ... ಹಾಗೇ ಇದೆ. ಅಷ್ಟಿಷ್ಟು ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದವರು ಮುಂಚೆಗಿಂತ ನಿರಾಶರಾಗಿದ್ದಾರೆ. ...ನೌಕರರ ಭ್ರಷ್ಟತೆ, ದೊರೆಯ ಅದಕ್ಷತೆ, ಜನತೆಯ ತಿಕ್ಕಲುತನ ಮತ್ತು ವ್ಯಭಿಚಾರ ಮುಂದುವರೆದಿವೆ.

... ಸಂಬಂಧದಲ್ಲಿ ನಾವು ಭಾರತದಲ್ಲೇ ಅದನ್ನು ನೋಡಬೇಕು. ತುರ್ತುಪರಿಸ್ಥಿತಿಯಲ್ಲಿ ಇಡೀ ... ವರ್ಷ ಜೈಲಿನಲ್ಲಿದ್ದು ಹೊರಬಂದ ಮೊರಾರ್ಜಿ, ಚರಣ್-ಮುಂತಾದವರೂ, ಕಾಂಗ್ರೆಸ ಭ್ರಷ್ಟತೆ ...ಹಿಂಸೆಯಿಂದ ನೊಂದವರಂತಿದ್ದ ಬಹುಗುಣ, ಜಗಜೀವನರಾಮ್ ಮುಂತಾದವರೂ ಕೇವಲ ... ವರ್ಷದಲ್ಲಿ ಪುಣ್ಣುಮುಕ್ಕಿದ್ದು ಈಗ ಕತೆ. ನೊಂದವರಿಗೆ ಬುದ್ಧಿ ಬಂದಿರುತ್ತೆ ಎಂಬುದೆಲ್ಲ ...ತು. ಮೊರಾರ್ಜಿಯ ಮಗ ಹಾದುಹಗಲು ಕಳ್ಳತನ ಶುರು ಮಾಡಿದ. ಅದೊಂದು ಕಪಿಗಳ ಆಡಳಿತ ...ತೆ ಆಯಿತು.



ರಾಯಲ್ ಸೆಲ್ಯೂಟ್

ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ ನಮ್ಮ ರಾಜಕೀಯಕ್ಕೆ ನೀಡಿರುವ 'ರತ್ನ'ಗಳಲ್ಲಿ ಒಂದು ಈ ಡಿ.ಬಿ.ಚಂದ್ರೇಗೌಡ. ಇವರೀಗ ನಮ್ಮ ವಿರೋಧ ಪಕ್ಷದ ನಾಯಕರು. ಇವರು ಒಂಬತ್ತು ವರ್ಷದ ಹಿಂದೆ ನನ್ನನ್ನು ತಮ್ಮ ಮನೆಗೆ ಆಹ್ವಾನಿಸಿ 'ಮಲೆನಾಡಿನ ದೋಸೆ ತಿಂದು ನೋಡಿ' ಅಂದರು. ಆಗ ಕ್ರಾಂತಿರಂಗದ ಅಧ್ಯಕ್ಷತೆಯ ಮಾತುಕತೆಯಾಗುತ್ತಿತ್ತು, ನಾನು ಅದನ್ನೆಲ್ಲ ತಲೆಗೆ ಹಚ್ಚಿಕೊಳ್ಳದೆ ಹೋದೆ. ದೋಸೆ ತಿನ್ನುತ್ತಾ ಅವರು "ಯಾರೂ ನನ್ನ ಹೆಸರನ್ನೇ ಅಧ್ಯಕ್ಷತೆಗೆ ಸೂಚಿಸುತ್ತಿಲ್ಲವಲ್ಲ?" ಎಂದು ನನ್ನನ್ನು ಕೇಳಿ ದಂಗುಬಡಿಸಿದರು. ಆಮೇಲೆ ಬೆಂಗಳೂರಿಗೆ ಮೇನಕಾಗಾಂಧಿ ಬಂದಿದ್ದಾಗ ಬಹು ವೇಗವಾಗಿ ಓಡಾಡಿದರು. ಅವರು ಮೇನಕಾ ಮಂಚಕ್ಕೆ ಸೇರಿಬಿಡಬಹುದೆಂಬ ಗುಸುಗುಸು ಇತ್ತು.



ಚಂದ್ರೇಗೌಡ ಬುದ್ಧಿವಂತ. ಆದರೆ ಬುದ್ಧಿಗೆ ನೈತಿಕತೆಯ ಬೆಂಬಲವಿಲ್ಲದಿದ್ದರೆ ಎಷ್ಟು ಅಪಾಯ ಎಂಬುದನ್ನು ಇವರು ತೋರುತ್ತಿದ್ದಾರೆ. ಇವರ ವಿರೋಧದ ಪ್ರತಿಯೊಂದು ಕ್ರಿಯೆಯೂ 'ಬಂ'ಗೆ ಸಹಾಯವೆಂಬಂತೆ ಜನ ಮಾತಾಡಿಕೊಳ್ಳುತ್ತಿದ್ದಾರೆ. ಅಲ್ಲದೆ-ಇದು ಸುಳ್ಳೋ ನಿಜವೋ ಗೊತ್ತಿಲ್ಲ-'ಬಂ' ಚಂದ್ರೇಗೌಡರ ಸೇವೆ ಬೇಕಾದಾಗಲೆಲ್ಲ ಅವರಿಗೆ ಒಂದು ರಾಯಲ್ ಸೆಲ್ಯೂಟ್ ಸ್ಕಾಚ್ ವಿಸ್ಕಿ ಕಳಿಸುವುದಾಗಿ ಚಂದ್ರೇಗೌಡರ ಅಭಿಮಾನಿಗಳು ಮಾತಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಚಂದ್ರೇಗೌಡರ ಇತ್ತೀಚಿನ ಅಡ್ಡಹೆಸರು "ರಾಯಲ್ ಸೆಲ್ಯೂಟ್ ಚಂದ್ರೇಗೌಡ!"

-ಸೆಪ್ಟೆಂಬರ್ 22, 1991

ಜನ್ಮಭೂಮಿ ಆರಾಧನಾ ಕಥಾನಕವು

ಅಣಕ

ಎಚ್.ಎಲ್. ಕೇಶವಮೂರ್ತಿ

'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸಿ'

ಸಂಸ್ಕೃತದ ಮಾತು. ಅಂದಮೇಲೆ ಬಿಜೆಪಿಯವರಿಗೆ ಆಪ್ಯಾಯಮಾನ ತಾನೆ?

ಇದಕ್ಕೆ ಕೆ.ಎಸ್. ಈಶ್ವರಪ್ಪನವರ ತಕರಾರು!

'ಅರೆಸ್ಸೆಸ್ಸು ಅಂದರೆ ತಾಯಿಗಿಂತಲೂ ಹೆಚ್ಚು' ಅಂದಿದ್ದಾರೆ ಈಶ್ವರಪ್ಪ.

ಹೆತ್ತ ತಾಯಿಗಿಂತಲೂ ಮಂತ್ರಿ ಮಾಡಿದ ಸಂಘಟನೆ ದೊಡ್ಡದು!

ಹೀಗೆ ಬದಲಾವಣೆ ಮಾಡಿದರೆ ಹೇಗೆ?

'ಅರೆಸ್ಸೆಸ್ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸಿ' ಅಂದರೆ?

ಅಪ್ಪನವರು ಒಪ್ಪಬಹುದು!

ಇನ್ನು ಜನ್ಮ ಭೂಮಿ ವಿಷಯ.

ಯಾರದ್ದೂ ತಕರಾರಿಲ್ಲ!

ಯಡ್ಡಿ, ಈಶ್ವರೀಗೆ ಈ ವಿಷಯದಲ್ಲಿ ವಿಪರೀತ ಮುತುವರ್ಜಿ!

ಶಿವಮೊಗ್ಗ ನನ್ನ ಜನ್ಮಭೂಮಿ. ಅದು ನನ್ನ ಸ್ವತ್ತು ಅಂತ ಈಶ್ವರೀ. ಮಂಡ್ಯದಲ್ಲಿ ಹುಟ್ಟಿರಬಹುದು. ಇಲ್ಲಿಗೆ ದತ್ತು ಆಗಿದ್ದೀನಿ. ನಾನೇ ವಾರಸುದಾರ ಅಂತ ಯಡ್ಡಿ.

ಇದು ನಿರ್ಧಾರ ಆಗಬೇಕಲ್ಲ?

ಜನ್ಮಭೂಮಿಯ ವಶಕ್ಕೆ ನಿಂತರು. ಅವನು ಕೊಂದುಬಿಟ್ಟಾನು ಅಂತ ಇವನು, ಇವನು ಕೊಂದುಬಿಟ್ಟಾನು ಅಂತ ಅವನು. ಊಟ ತಿಂಡಿ ಬಿಟ್ಟು 'ಕೊಳ್ಳುಗಾರಿಕೆ'ಗೆ ಮುಂದಾದರು.

ಪರಿಣಾಮ ಅರ್ಧ ಶಿವಮೊಗ್ಗ ಇವರ ಪಾಲಾಯಿತು.

ಅರ್ಧ ಶಿವಮೊಗ್ಗ ಹೋಯಿತು ಸರಿ. ಆದರೆ ಇವರಲ್ಲಿ ಯಾರಿಗೆ ಎಷ್ಟು ದಕ್ಕಿತು?

ಜನ್ಮಭೂಮಿ ಅವರಿಗೆ ಹೆಚ್ಚು ಒಲಿದಿದೆ ಅಂತ ಕೆಲವರು. ಇಲ್ಲ ಇವರ ಕಡೇಗೆ ಅದರ ಒಲವು ಹೆಚ್ಚು ಅಂತ ಮತ್ತೆ ಕೆಲವರು. ಜನ ಕಿತ್ತಾಡ್ತಾನೆ ಇದಾರೆ. ಲೆಕ್ಕ ಮಾತ್ರ ಯಾರಿಗೂ ದಕ್ಕಿಲ್ಲ!

ನಾನು ಮುಖ್ಯಮಂತ್ರಿ ಅವನು ನನ್ನ ಕೈಕೆಳಗಿನ ಮಂತ್ರಿ. ನನ್ನ ಸಮಾನಕ್ಕೇ ಜನ್ಮಭೂಮಿ ಆರಾಧನೆ ಮಾಡಿದನಲ್ಲಾ ಎಂಬ ಚಿಂತೆ ಕಾಡಿತು ಯಡ್ಡಿಗೆ. ಅಂತಹ ಸಮಯದಲ್ಲಿ ಹರಿಕಥೆ ದಾಸರು 'ಚಿಂತಾಕ್ರಾಂತಳಾಗಿ ದ್ರೌಪದಿಯು ಕುಳಿತಿರುವ ಸಂದರ್ಭದಲ್ಲಿ ಮಹಾಮಹಿಮನಾದ ಶ್ರೀಕೃಷ್ಣ ಪರಮಾತ್ಮನು ಪ್ರತ್ಯಕ್ಷ ಆದನು' ಎನ್ನುವುದನ್ನು ನೆನಪಿಸುವಂತೆ ಕೃಷ್ಣಯ್ಯ ಶೆಟ್ಟರು ಪ್ರತ್ಯಕ್ಷ ಆದರು. ಭಾರತಾಂಬೆಯ ಯಾವ ಭಾಗವಾದರೂ ಅದು ಜನ್ಮ ಭೂಮಿಯೇ ಹೌದು ಎಂಬ ಸಿದ್ಧಾಂತವನ್ನು ಮುಂದಿಟ್ಟರು. ಇದರಿಂದ ಪುಳಕಿತರಾದ ಯಡ್ಯೂರಪ್ಪನವರು ಹೈದರಾಬಾದ್‌ನ 'ಜನ್ಮಭೂಮಿ'ಗೆ ಭಾಗಸ್ಥರಾದರು.

ಇದನ್ನು ಅಪರಾಧ ಎನ್ನುತ್ತಾರೆ ಕುಮಾರಸ್ವಾಮಿ. ಅಲ್ರೀ ಕುಮಾರಣ್ಣ ಶಿವಮೊಗ್ಗ ಜನ್ಮಭೂಮಿಗೆ ಈಶ್ವರೀ ಅಡ್ಡ ಗಾಲಾಕ್ತಾನೆ. ಪೆದ್ದು ಪೆದ್ದಾಗಿ ರೇಟು ಏರುಸ್ತಾ ಕುಂತವ್ನೆ. ಇಲ್ಲಿ ಬೇಡ ಅಂತ ಅಲ್ಲಿಗೋದ್ರೂ ನಿಮ್ಮ ತರಲೇನೇನ್ರಿ?

ವಿವೇಚನಾ ಕೋ (ಖೋ!)ಟಾ

ಏನು ವಿವೇಚನೆ ಅಂದರೆ?

ಮಂತ್ರಿಮಂಡಳದ ವಿವೇಚನೆ ಅಲ್ಲ, ಮುಖ್ಯಮಂತ್ರಿಗಳ ವಿವೇಚನೆ!.

ಅದು ಸರಿ, ಏನದು?

ಮುಖ್ಯಮಂತ್ರಿಗಳ ಗುಲಾಮನಾಗಿರಬಲ್ಲವರನ್ನು ಪತ್ತೆಹಚ್ಚುವುದು ವಿವೇಚನೆ! ಇಂತಹವರಿಗೆ ಬೆಂಗಳೂರಿನ ಪ್ರಮುಖ ಬಡಾವಣೆಗಳಲ್ಲಿ ನಿವೇಶನ ಮಂಜೂರು ಮಾಡುವುದೇ 'ವಿವೇಚನಾ ಕೋಟಾ!'

ಇತ್ತೀಚೆಗೆ ಅದರ ಒಂದು ಪಟ್ಟಿ ಪ್ರಕಟ ಆಗಿದೆ. ಜನ್ಮಭೂಮಿ ಆರಾಧಕರ ದಂಡೇ ಅಲ್ಲಿದೆ. ಒಂದೆರಡು ಹೀಗಿವೆ.....

ಯಾರು ಈ ರಾಘವೇಂದ್ರ?

ಮುಖ್ಯಮಂತ್ರಿಗಳ ಸಾಕ್ಷಾತ್ ಸುಪುತ್ರ. ಶಿವಮೊಗ್ಗದ ಸಂಸದ. ಜನ್ಮಭೂಮಿ ಆರಾಧನೆಯನ್ನು ಶ್ರದ್ಧಾಭಕ್ತಿಗಳಿಂದ ಮುಂದುವರೆಸಲಿ ಎಂದಿರಬೇಕು. ಅದಕ್ಕೆ ಈ ಕೋಟಾ!

ಯಾರು ಈ ಜನಾರ್ದನ ಸ್ವಾಮಿ?

ಅದೇ ಅಮೆರಿಕದಲ್ಲಿದ್ದವರು. ಕೋಟ್ಯಂತರ ರೂಪಾಯಿ ವ್ಯವಹಾರ ಮಾಡುತ್ತಿದ್ದೋರು. ಅದನ್ನೆಲ್ಲ ತ್ಯಾಗ ಮಾಡಿ ಬಡವರ ಸೇವೆಗಾಗಿ ಭಾರತಕ್ಕೆ ಬಂದವರು! ಚುನಾವಣೆ ಒಂದೆರಡು ದಿನ ಇದ್ದಂತೆ ಪ್ರಮುಖ ದಿನಪತ್ರಿಕೆಯ ಮುಖಪುಟದಲ್ಲಿ ಮೆಚ್ಚುಗೆ ಮಾತು ಬರುವಂತೆ ವ್ಯವಸ್ಥೆ(!) ಮಾಡಿಕೊಂಡವರು!

ಅಲ್ಲ, ಕೋಟ್ಯಂತರ ರೂಪಾಯಿಯುಳ್ಳ ಈ ದೊಡ್ಡ ಮನುಷ್ಯರು ಹಣ ನೀಡಿಯೇ ನಿವೇಶನ ಕೊಳ್ಳಬಹುದಿತ್ತಲ್ಲಾ?

ಹಣ ಬಡವರ ಸೇವೆಗೆ! ವಿವೇಚನಾ ಕೋಟಾ ಇವರ ಸೇವೆಗೆ!

ಏನು ಜನ್ಮಭೂಮಿಯ ಪ್ರೀತಿ!

ನಾವು ವ್ಯಾಪಾರಿಗಳು!

ಮಾಜಿ ವಸತಿ ಸಚಿವರು ಎಂದರೆ ಗೊತ್ತಾಗಲಿಕ್ಕಿಲ್ಲ, ಮುಜರಾಯಿ ಸಚಿವರು ಎಂದರೆ ಥಕ್ಕಂತ ತಿಳಿಯುತ್ತೆ ಅವರು ಮನೆ ಹಂಚದೆ ಇದ್ದರೂ ಲಾಡು, ತೀರ್ಥ ಧಾರಾಳವಾಗಿ ಹಂಚಿದೋರಲ್ವಾ ಅದಕ್ಕೆ. ಈ ಮಾಜಿ ಸಚಿವರು ಒಂದು ಮುತ್ತಿನಂತಹ ಮಾತನ್ನು ಹೇಳಿದ್ದಾರೆ. 'ನಾವು ಆರ್ಯ ವೈಶ್ಯರು. ವ್ಯಾಪಾರವೇ ನಮ್ಮ ವೃತ್ತಿ. ಹಾಗೆ ವ್ಯಾಪಾರ ಮಾಡಿದ್ದರಲ್ಲಿ ತಪ್ಪೇನು' ಅಂತ ಪ್ರಶ್ನೆ ಹಾಕಿದ್ದಾರೆ. ವ್ಯಾಪಾರಂ ದ್ರೋಹ ಲಕ್ಷಣಂ ಅನ್ನುವುದರಲ್ಲಿ ನಂಬಿಕೆ ಇರಬೇಕು. ಇರಲಿ.



ಈ ಪ್ರಶ್ನೆ ಯಾಕೆ ಬಂತು ಅಂದರೆ ಮಂತ್ರಿ ಆಗಿದ್ದಾಗ ಮುಜರಾಯಿ ಸೇವೆಯನ್ನು ಬಹಿರಂಗವಾಗಿಯೂ ವಸತಿಸೇವೆಯನ್ನು ಗೋಪ್ಯವಾಗಿಯೂ ಮಾಡುತ್ತಿದ್ದಿರಬೇಕು. ಶಿಡ್ಲಘಟ್ಟದ ಸಮೀಪದ ರೈತರು ಭಾರೀ ಆರ್ಥಿಕ ಮುಗ್ಗಟ್ಟಿನಲ್ಲಿದ್ದರಂತೆ. ಅವರ ಕಷ್ಟ ನೋಡಲಾರದೆ ಶೆಟ್ಟರು ತಮ್ಮ ಈ ಪೆದ್ದು ಮುಂಡೇವು ಜಮೀನ್ನ ಮಾರ್‍ತೀವಿ ಅಂದ್ರೂ ಕೊಂಡ್ಕೋಳೋರು ಯಾರು, ಕೊಂಡುಕೊಂಡರೂ ಎಕರೆಗೆ ಅಮ್ಮಮ್ಮ ಅಂದ್ರೆ ಐದು ಲಕ್ಷ ಕೊಡಬಹುದು ಅಂತ ಯೋಚಿಸಿದರಂತೆ. ರೈತರ ಮೇಲಿನ ಕನಿಕರ ಅನ್ನೋದು ಉಕ್ಕಿಹರೀತಂತೆ. ಎಕರೆಗೆ ಹದಿನೈದು ಲಕ್ಷನಾದರೂ ನೀಡಿದರೆ ಪಾಪಿ ಮುಂಡೇವು ಬದುಕಿಕೊಳ್ತವೆ ಅಂತ ಹಂಗೆ ಮಾಡಿದ್ರಂತೆ. ಭೂಮಿಕೊಂಡ ಮೇಲೆ ಅಲ್ಲ, ಹೇಳಿ ಕೇಳಿ ನಾವು ಶೆಟ್ಟರು ನಮಗ್ಯಾಕೆ ಈ ಪಾಟ ಜಮೀನು ಕುಲಕಸುಬಿನ ಮರ್ಯಾದೆನಾದರೂ ಉಳಿಸೋಣ ಅಂತಾನೋ ಏನೋ, ಎಕರೆಗೆ ಐವತ್ತು ಲಕ್ಷ ರೂಪಾಯಿಗಂತೆ ಗೃಹಮಂಡಳಿಗೆ ಮಾರಿಕೊಂಡರಂತೆ.

ಆಲೋಚನೆ ಅನ್ನೋದೆ ವಿಚಿತ್ರ ಅನ್ನಿಸುತ್ತೆ, ಕೃಷ್ಣಯ್ಯ ಶೆಟ್ಟರಿಗೆ ಇದೀ ವ್ಯವಹಾರ ಕುಲ ಕಸುಬಿನ ಮುಂದುವರಿಕೆಯಾಗಿ ಕಂಡರೆ ವಿರೋಧ ಪಕ್ಷಗಳಿಗೆ ಇದು ದ್ರೋಹವಾಗಿ ಕಾಣಿಸಿಕೊಂಡಿದೆ! ಶಾಸನಸಭೆಯ ಕಾಲವನ್ನೆಲ್ಲ ಇದು ನುಂಗಿ ಹಾಕಿದ್ರೂ ಪರಿಹಾರ ಮಾತ್ರ ದೊರಕಿಲ್ಲ, ಮುಖ್ಯಮಂತ್ರಿಗಳು 'ತಪ್ಪಿತಸ್ಥರು ಯಾರೇ ಆಗಲಿ ಬಲಿ ಹಾಕ್ತೀನಿ. ಮುಖ್ಯ ಕಾರ್ಯದರ್ಶಿಗಳಿಂದ ತನಿಖೆ ನಡುಸ್ತೀನಿ' ಎಂದು ವೀರಾವೇಶದಿಂದ ನುಡಿದರೂ ಅದು ವಿರೋಧ ಪಕ್ಷದ ಕಿವಿಗಳಿಗೆ 'ತಿಪ್ಪೆಸಾರುಸ್ತೀನಿ' ಅನ್ನೋ ತರಹವೇ ಕೇಳ್ತಾ ಇದೆಯಂತೆ. ಲೋಕಾಯುಕ್ತರೇ ತನಿಖೆ ಮಾಡಲಿ ಅಂತ ಕುಂತವ್ರೆ. ಸದನದ ಹೊರಗೂ ಇದೇ ಮಾತು ಆಡ್ತಾ ಅವೆ. ಆ ಕುಮಾರಸ್ವಾಮಿ ಅನ್ನೋನು ಮುಖ್ಯಮಂತ್ರಿಗಳೂ ಇದರಲ್ಲಿ ಶಾಮೀಲಾಗಿದಾರೆ ಅಂತ ಹೇಳ್ತಾ ಬದ್ದವ್ನೆ. ಅಲ್ಲಾ ಇಂತ ಭಾರಿ ಅವ್ಯವಹಾರನ ಮುಖ್ಯಮಂತ್ರಿ ಬೆಂಬಲ ಇಲ್ಲದೆ ಮಾಡೋಕಾಗುತ್ತ, ಕಂಡರೂ ಕಾಣದ ಹಾಗೆ ಇರಬೇಕು. ಅವರು ಮಾಡಿದ ತಪ್ಪನ್ನು ಇವರು, ಇವರು ಮಾಡಿದ ತಪ್ಪನ್ನ ಅವರು ಸಾರಿಸೋದೆ ರಾಜಕಾರಣಿಗಳ ತತ್ವ ಅನ್ನೋದನ್ನೇ ಅರೀದೆ ಹುಚ್ಚುಚ್ಚಾಗಿ ಮಾತಾಡ್ತಿದಾನೆ!

ಯಡ್ಯೂರಪ್ಪ ಎಷ್ಟೇ ಆಗಲಿ ಅನುಭವಸ್ಥ ರಾಜಕಾರಣಿ. ಜನ್ಮಭೂಮಿಯ ವಿಚಾರ ಆದ್ದರಿಂದ ಭೂಹಗರಣದ ಚರ್ಚೆ ನಡೆಯುವಾಗ ಸದನಕ್ಕೆ ಹೋಗಲಿಲ್ಲ! ನಾಲ್ಕು ದಿನ ಬಡ್ಕಂತವೇ ಆಮೇಲೆ ತೆಪ್ಪಗಾಗ್ತವೆ ಅಂತ ಅವರಿಗೆ ಗೊತ್ತುಂಟು. ಹಂಗಂತ ಸುಮ್ಮನೆ ಇದ್ದಂಗೂ ಇರಬಾರದಲ್ಲ, ಸ್ವಯಂಘೋಷಿತ ಒಕ್ಕಲಿಗ ನಾಯಕರನ್ನ ಹಿಡಿದ್ರು. ಜೊತೆಗೆ ಒಬ್ಬ ನಾಯ್ಡೂನೂ ಸೇರಿಸಿದ್ರು. ಹೋಗಿ ಪತ್ರಿಕಾಗೋಷ್ಠಿ ಮಾಡಿ ಅಂತ ಆರ್ಡರ್ ಮಾಡಿದ್ರು. ಇದರ ಪರಿಣಾಮ ಏನಾಯಿತು ಅಂದರೆ....

ಶಾಲೆಗೆ ಇನ್ಸ್‌ಪೆಕ್ಟರು ಬರ್ತಾರೆ ಅಂತ ಗೊತ್ತಾದಾಗ ಮೇಷ್ಟ್ರು ಇಂತಿಂತಹ ಪ್ರಶ್ನೆಗೆ ಇಂತಿಂತಹವರು ಉತ್ತರ ಕೊಡಬೇಕು ಅಂತ ಆರ್ಡರ್ ಮಾಡಲ್ವಾ ಹಂಗೆ ಮಾಡಿದ್ರೂ.... ಈ ಬಲಿತೋವು ಕುಮಾರಸ್ವಾಮಿ ಮೇಲೆ ಆಪಾದನೇನೆ ಸರಿಯಾಗಿ ಮಾಡದೆ ಅವರು ಹೇಳಿದಂಗೆ ಇವರು ಹೇಳಿದಂಗೆ ಅಂತ ಜಾರಿಕೊಳ್ಳೋದರಲ್ಲೆ ಕಾಲ ಕಳೆದ್ವಂತೆ. ಭೂಹಗರಣ ಸತ್ಯ ಅಂತ ಒಪ್ಪಿಕೊಂಡು ಲೋಕಾಯುಕ್ತ ತನಿಖೆಗೆ ಒಪ್ಪಿಸಿ ಕೈತೊಳೆದುಕೊಳ್ಳದೆ ಆ ಕಳ್ಳ ಕೃಷ್ಣಯ್ಯ ಶೆಟ್ಟಿ ಉಳಿಸೋಕೆ ನಮ್ಮ ಪ್ರಾಣ ಹಿಂಡ್ತಾ ಇದಾನಲ್ಲ ಅಂತ ಮುಖ್ಯಮಂತ್ರಿಗೇ ತಾರಾಮಾರಾ ಬಯ್ದರಂತೆ.

ಅಧಿಕಾರ ಅನುಭವಿಸಬೇಕೂಂತಿದ್ರೆ ಇಂತ ಗುಲಾಮಗಿರಿ ಮಾಡಲೇಬೇಕೇನೋ....

■

ಎಲ್‌ಟಿಟಿಇ ಪ್ರಭಾಕರನ್‌ನನ್ನು ಹೀರೋ ಎಂಬಂತೆ ಬಿಂಬಿಸುವುದು ಸರಿಯಲ್ಲ


ಜುಲೈ 15, 2009ರ ಸಂಚಿಕೆ ಶಿವಸುಂದರ್‌ರವರು ತಿಳಿಸಿರುವಂತೆ ಕೇವಲ 'ಬಯೋಮೆಟ್ರಿಕ್ ಕಾರ್ಡ್' ಕೊಡುವುದರ ಹಿಂದೆ ಎಂತಹ ವಂಚನೆಯ ಮುಖವಾಡ ಇದೆ ಎಂಬುದನ್ನು ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಅರಿಯಲೇ ಬೇಕು. 1,50,000 ಕೋಟಿ ರೂ.ಗಳ ಬೃಹತ್ ಮೊತ್ತವನ್ನು ಯಾವುದೇ ನಾಗರೀಕ ಹಿತಾಸಕ್ತಿಗಳಿಗೆ ಬಳಸಲಾಗದೆ. 'ಇನ್ಫೋಸಿಸ್'ನಂತಹ ಖಾಸಗಿ ಕಂಪೆನಿಯ ಪಾಲುದಾರನಿಗೆ ವಹಿಸಿ ಈ ದೇಶದ ಖಜಾನೆಯನ್ನು ನಯವಾಗಿ ಲೂಟಿ ಮಾಡುತ್ತಿರುವುದು ಈ ಸರ್ಕಾರ ಮತ್ತು ಪ್ರತಿಪಕ್ಷಗಳ ಜನವಿರೋಧಿ ನೀತಿಯ ಉತ್ತುಂಗ ನಿರ್ಧಾರಗಳಲ್ಲೊಂದು.

ಈ 'ಇನ್ಫೋಸಿಸ್' ಎಂಬ ಖಾಸಗಿ ಕಂಪೆನಿ ಈ ದೇಶದ ಸಾರ್ವಜನಿಕ ಉದ್ದಿಮೆಯೇನಲ್ಲ, ಕೇವಲ ದ್ವಿತೀಯ ದರ್ಜೆಯ ಜ್ಞಾನ ಕೆಲಸದ ಮಿತಿ ಹೊಂದಿರುವ ಈ ಸಂಸ್ಥೆ ಇಂದು ಈ ದೇಶದ ಮಹಾನ್ ಪ್ರತಿಭೆಗಳನ್ನು ಸಂಬಳ, ಸೌಕರ್ಯ ನೀಡುವ ಹೆಸರಿನಲ್ಲಿ ಬೇರಾವುದೇ ಕ್ಷೇತ್ರದತ್ತ ಮುಖ ಮಾಡದಂತೆ ಮಾಡಿ, ಈ ದೇಶಕ್ಕೆ ಸಾರ್ವಜನಿಕ ಕ್ಷೇತ್ರದಲ್ಲಿ ಉತ್ತಮ ಪ್ರತಿಭೆಗಳು ಸಿಗದಂತೆ ಮಾಡಿದ್ದು ಮಹಾನ್ ಮೋಸವಲ್ಲವೇನು? ಪ್ರತಿಭೆಯ ಹೆಸರಿನಲ್ಲಿ ಈ ದೇಶದ ಸಾಮಾಜಿಕ ನ್ಯಾಯವನ್ನು ಧಿಕ್ಕರಿಸಿ ಮೆರುವುದಕ್ಕೆ ವಿಶಾಲವಾದ ನೆಲವನ್ನಿತ್ತು ಬಹು ನಾಜೂಕಾಗಿ ಹೆಸರು ಮಾಡಿರುವ ಇದರ ನೇತಾರರು ಈ ದೇಶದ ಕೃಷಿಗೆ, ನೀರಾವರಿಗೆ, ರಕ್ಷಣೆಗೆ, ಅಸಹಾಯಕರಿಗೆ ಯಾವುದೇ ಯೋಜನೆಗಳಲ್ಲಿ ಸಹಾಯಹಸ್ತ ನೀಡಿಲ್ಲ. ಆದರೂ 1,50,000 ಕೋಟಿಗಳ ಬೃಹತ್ ಮೊತ್ತವನ್ನು ನುಂಗಲು ಹೊಂಚುಹಾಕುತ್ತಿರುವುದು, ಇದನ್ನು ಮಾಧ್ಯಮಗಳು 'ಉದ್ಧಾರ' ಎಂಬ ಹೆಸರಿನಲ್ಲಿ ಬೊಬ್ಬೆ ಹೊಡೆಯುತ್ತಿರುವುದು. ಸತ್ಯ ಕೂಡ. ಇಂತಹ ನಿರ್ಧಾರಗಳಿಂದ ಜನಸಾಮಾನ್ಯ ಕೇವಲ ಭ್ರಮೆಯಲ್ಲಿ ಮುಳುಗೇಳಬಹುದೇ ವಿನಃ ಸಮಸ್ಯಾಮುಕ್ತ ಸಮಾಜದ ಬದುಕು ಮತ್ತಷ್ಟು ನಮ್ಮಿಂದ ದೂರ ಸರಿದಿದೆ.

-ಸಿದ್ದು ಪಿ. ಅಂಬಾಡಹಳ್ಳಿ

ಹೊಗಳಿಕೆ ತೆಗಳಿಕೆ

ಸತ್ತ ಭಾಷೆ ಸಂಸ್ಕೃತದ ಜೀರ್ಣೋದ್ಧಾರದ ನೆಪದಲ್ಲಿ, ಸರ್ಕಾರದಿಂದಲೇ ಸನಾತನವಾದಿಗಳ ಉದರಪೋಷಣೆಯನ್ನು ನಿರಾತಂಕವಾಗಿ, ನಿರಂತರವಾಗಿ ಮಾಡಬಹುದೆಂಬ ದುರುದ್ದೇಶದಿಂದ ರಾಜ್ಯ ಸರ್ಕಾರ ಸಂಸ್ಕೃತ ಮತ್ತು ವೇದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಮುಂದಾಗಿರುವುದು ಖಂಡನಾರ್ಹ. ಸಂಸ್ಕೃತದಲ್ಲಿ ವಿಪುಲವಾದ ಸಾಹಿತ್ಯವಿದೆ ಎಂಬ ಒಂದು ಅಂಶವನ್ನು ಬಿಟ್ಟರೆ, ಸಂಸ್ಕೃತ ಮತ್ತು ವೇದಾಧ್ಯಯನದಿಂದ ಇಂದಿನವರಿಗಾಗಲಿ ಅಥವಾ ಮುಂದಿನ ಪೀಳಿಗೆಗಾಗಲಿ ಯಾವುದೇ ಪ್ರಯೋಜನವಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ.



ಪ್ರಭಾಕರನ್

ಸಂಸ್ಕೃತ ಮತ್ತು ವೇದ ವಿಶ್ವವಿದ್ಯಾಲಯ ಸ್ಥಾಪಿಸಲು, ಮುಂದಾಗಿರುವ ಈ ಬಿಜೆಪಿ ಸರ್ಕಾರದ ಕ್ರಮ, ಹಿಂದೂಗಳ ಹೆಸರಿನಲ್ಲಿ ಬಿಜೆಪಿ ಮಾಡುವುದು ಕೇವಲ ಬ್ರಾಹ್ಮಣರ ಹಿತಾಸಕ್ತಿಯನ್ನು ಕಾಪಾಡುವ ಕೆಲಸ ಮಾತ್ರ ಎಂಬುದು ಮತ್ತೊಮ್ಮೆ ಜಗಜ್ಜಾಹೀರಾಗಿದೆ. ಬಿಜೆಪಿಯ ಈ ಕುತಂತ್ರವನ್ನು ಈ ನಾಡಿನ ಪ್ರಜ್ಞಾವಂತರು, ದಲಿತರು, ಶೂದ್ರರು ಮತ್ತು ಅಲ್ಪಸಂಖ್ಯಾತರು ಮೊದಲು ಅರ್ಥಮಾಡಿಕೊಳ್ಳಬೇಕು ಮತ್ತು ಒಕ್ಕೊರಲಿನಿಂದ ವಿರೋಧಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಮಾನವ ವಿರೋಧಿ ಮನುಶಾಸ್ತ್ರವನ್ನೇ ನಮ್ಮ ಸಂವಿಧಾನದಲ್ಲಿ ತೂರಿಸುವ ಕೆಲಸವನ್ನು ಈ ಬಿಜೆಪಿ (ಬ್ರಾಹ್ಮಣರ ಜನತಾ ಪಕ್ಷ) ಯಶಸ್ವಿಯಾಗಿ ನಿರ್ವಹಿಸುತ್ತದೆ. ಇಂತಹ ದುರಂತ ಈ ದೇಶಕ್ಕೆ ಬರಬಾರದು ಎಂಬ ಕಾಳಜಿ ಇರುವ ಪ್ರಜ್ಞಾವಂತರೆಲ್ಲರೂ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಈ ಸಂಸ್ಕೃತ-ವೇದ ವಿಶ್ವವಿದ್ಯಾಲಯದ ಸ್ಥಾಪನೆಯನ್ನು ವಿರೋಧಿಸಬೇಕು. ಗೋಮುಖ ವ್ಯಾಘ್ರ ಬಿಜೆಪಿಯ ಹಿಡನ್ ಅಜೆಂಡಾದಲ್ಲಿ ಸಂಸ್ಕೃತ-ವೇದ ವಿಶ್ವವಿದ್ಯಾಲಯದಂತಹ ಇನ್ನೆಷ್ಟು ವಿಷಸರ್ಪಗಳಿವೆಯೋ ತಿಳಿಯದು.

ಇತ್ತೀಚಿನ ದಿನಗಳಲ್ಲಿ ನಮ್ಮ ನೆಚ್ಚಿನ 'ಗೌರಿ ಲಂಕೇಶ್' ಪತ್ರಿಕೆ ಎಲ್‌ಟಿಟಿಇ ಪ್ರಭಾಕರನ್‌ನನ್ನು ಒಬ್ಬ ಹೀರೋ ಎಂಬಂತೆ ಬಿಂಬಿಸುತ್ತಿರುವುದು ಸರಿಯಲ್ಲ. ಎಲ್‌ಟಿಟಿಇನ ಗುರಿ (ಸ್ವತಂತ್ರ ತಮಿಳು ರಾಷ್ಟ್ರ ಸ್ಥಾಪನೆ) ಸರಿ ಇರಬಹುದು. ಆದರೆ ಈ ಗುರಿ ಸಾಧನೆಗಾಗಿ ಅವರು ತುಳಿದ ಹಾದಿಯನ್ನು ಮಾನವತಾವಾದಿಗಳ್ಯಾರೂ ಸಮರ್ಥಿಸಲು ಸಾಧ್ಯವಿಲ್ಲ. ರಾಜೀವಗಾಂಧಿ ಮತ್ತು ಅನೇಕ ಸಿಂಹಳೀಯ ತಮಿಳು ನಾಯಕರನ್ನೇ ಅಮಾನುಷವಾಗಿ ಕೊಂದ ಎಲ್‌ಟಿಟಿಇ ಬಗ್ಗೆ ನಾವ್ಯಾರೂ ಅನುಕಂಪ ಪಡಬೇಕಾದ ಅವಶ್ಯಕತೆ ಇಲ್ಲ, ನಾವು ಅನುಕಂಪ ಪಡಬೇಕಾಗಿರುವುದು ಇಂದಿನ ಶ್ರೀಲಂಕಾ ತಮಿಳರ ದುಸ್ಥಿತಿಯ ಬಗ್ಗೆ. ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ, ಮಹಾತ್ಮಗಾಂಧಿ ಮತ್ತು ನೆಲ್ಸನ್ ಮಂಡೇಲಾರ ಪ್ರಯೋಗಗಳು ಶ್ರೀಲಂಕಾ ತಮಿಳರಿಗೆ ದಾರಿದೀಪವಾಗಲಿ; ಎಲ್‌ಟಿಟಿಇ ಮತ್ತು ಪ್ರಭಾಕರನ್ ತುಳಿದ ಹಾದಿಯನ್ನು ಮತ್ಯಾರೂ ತುಳಿಯದಿರಲಿ....

-ಎಸ್.ಎಸ್.ವೆಂಕಟೇಶ್, ಬೆಂಗಳೂರು

ಸಿನಿಮಾ ತಾರೆಯರೂ ಕ್ರಿಕೆಟ್ ಖರೀದಿಯೂ

ಸುದೀಪ್ ಕನ್ನಡದ ಶಾರುಖ್ ಖಾನ್ ಆಗುತ್ತಾರೆಯೇ? ಹಾಗೆಯೇ ರಮ್ಯಾ ಕನ್ನಡ ಚಿತ್ರರಂಗದ ಪ್ರೀತಿ ಜಿಂಟಾ ಆಗಲು ಹೊರಟಿದ್ದಾರೆಯೇ? ...ಗೆಂದು ಸಣ್ಣ ಕುತೂಹಲಕಾರಿ ಚರ್ಚೆ ಆರಂಭವಾಗಿದೆ. ...ನ್ನಡ ಸಿನಿಮಾ ರಂಗದಲ್ಲೂ ಕ್ರಿಕೆಟ್ ಜ್ವರ ಆರಂಭ...ಗಿರುವುದೇ ಈ ಕುತೂಹಲಕ್ಕೆ ಕಾರಣ.




ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ...ರಂಭಿಸಿರುವ ಕರ್ನಾಟಕ ಪ್ರೀಮಿಯರ್ ಲೀಗ್ ...ಬದ್ಧವ ಕೆಲವು ತಂಡಗಳ ಮಾಲೀಕತ್ವವನ್ನು ...ವರಿಬ್ಬರೂ ವಹಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ...ಬ ಮಾತು ಈಗಾಗಲೇ ಅಲ್ಲಲ್ಲಿ ಕೇಳಿಬರುತ್ತಿದೆ.

ಹಿಂದೆ ಶಾರುಖ್ ಖಾನ್ ಕೊಲ್ಕತ್ತಾ ತಂಡದ ...ಾಲೀಕತ್ವವನ್ನು ವಹಿಸಿ ಕ್ರಿಕೆಟ್ ಆಟಕ್ಕೆ ಒಂದು ...ೊಸ ಗ್ಲಾಮರ್‌ಅನ್ನು ನೀಡಿದ್ದೇ ಇವರಿಗೂ ...ಸ್ಫೂರ್ತಿಯಾಗಿರಬಹುದೇ?

ಕ್ರಿಕೆಟ್ ಆಟಕ್ಕೂ ಸಿನಿಮಾಕ್ಕೂ ಮೊದಲಿನಿಂದಲೂ ...ಲ್ಲಿಲ್ಲದ ನಂಟಿದೆ ನಿಜ. ಹಾಗೆಯೇ ಕ್ರಿಕೆಟ್ ಆಟಗಾರರ ಮತ್ತು ...ಮಾ ತಾರೆಯರ ನಡುವಿನ ಗಾಸಿಪ್‌ಗೂ ಬಹಳಷ್ಟು ದೊಡ್ಡ ...ತಿಹಾಸವೇ ಇದೆ. ಹೀಗಾಗಿ ತಾರೆಯರು ಕ್ರೀಡಾಂಗಣಕ್ಕೆ ...ಬಿಯುತ್ತಿರುವುದು ಹೊಸ ವಿಷಯವೇನೂ ಅಲ್ಲ.


ಆದರೆ ಒಂದು ತಂಡದ ಮಾಲೀಕತ್ವವನ್ನು ...ಿಸುವಷ್ಟು ನಮ್ಮ ತಾರೆಯರು ...ೀಮಂತರೇ? ಅಥವಾ ...ಷ್ಟೊಂದು ಕ್ರಿಕೆಟ್ ಬಗ್ಗೆ ...ದರಿಗೆ ಹುಚ್ಚಿದೆಯೇ? ...ಬಿತ್ಯಾದಿ ಪ್ರಶ್ನೆ ಇಲ್ಲಿ ...ದ್ಭವಿಸುತ್ತದೆ. ...ಡಿತವಾಗಿಯೂ ಒಂದು ...ಡದ ಮಾಲೀಕತ್ವವನ್ನು ...ಿಸುವುದೆಂದರೆ, ...ೂರು ಸಿನಿಮಾವನ್ನು ...ರ್ಮಾಣ ಮಾಡಿದಷ್ಟು ...ವಿದೆ. ಮೊನ್ನೆ ದಕ್ಷಿಣ ...ಫ್ರಿಕಾದಲ್ಲಿ ಶಾರುಖ್ ...ನ್ ಮಾಲೀಕತ್ವದ ...ಲ್ಕತ್ತಾ ತಂಡ ಒಂದರ ...ದೆ ಒಂದರಂತೆ ಪಂದ್ಯಗಳಲ್ಲಿ ...ೋಲುವಾಗ ಶಾರುಖ್ ಖಾನ್ ...ಮಾನ ಹತ್ತಿ ನೇರ ಮುಂಬೈಗೆ ...ಪಸ್ ಬಂದಿದ್ದರು. ಅಷ್ಟೇ ಅಲ್ಲ, ಒಂದು ...ಮದುವೆ ಸಮಾರಂಭದಲ್ಲಿ ಹಾಡಿ, ನರ್ತಿಸುತ್ತಾ ...ಡು ಮೂರು ಕೋಟಿ ಸಂಭಾವನೆ ಪಡೆದು ದೊಡ್ಡ ಸುದ್ದಿ ...ಡಿದ್ದರು. ಈ ಬಗ್ಗೆ ಕೇಳಿದಾಗ "ನನ್ನ ತಂಡದ ಆಟಗಾರರನ್ನು ...ಬೇಕಾದರೆ ನಾನು ಈ ತರಹ ಮದುವೆ ಪಾರ್ಟಿಗಳಲ್ಲಿ ನರ್ತಿಸಿ ... ಸಂಪಾದಿಸಬೇಕಾಗಿದೆ" ಎಂದು ಮಾರ್ಮಿಕವಾಗಿ ನುಡಿದಿದ್ದರು. ... ಒಬ್ಬ ಮಾಲೀಕ ಒಂದು ತಂಡವನ್ನು ನಡೆಸಬೇಕಾದರೆ ಎಷ್ಟು ...ಿಸಬೇಕು ಎಂಬುದನ್ನು ತೋರಿಸುತ್ತದೆ.



...ಇಷ್ಟಾದರೂ ಕ್ರಿಕೆಟ್ ತಂಡವನ್ನು ಖರೀದಿಸಲು ...ದೀಪ್ ಮತ್ತು ರಮ್ಯ ಆಸಕ್ತಿ ತೋರಿಸಿರುವುದು ...ಶ್ಚರ್ಯವೆನಿಸುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಒಂದು ಕ್ರಿಕೆಟ್ ...ತಂಡದ ಮಾಲೀಕತ್ವವನ್ನು ಖರೀದಿಸಬೇಕಾದರೆ, ...ಕನಿಷ್ಠವೆಂದರೂ ಒಂದೂವರೆ ಕೋಟಿ ರೂಪಾಯಿ ...ಬಂಡವಾಳವನ್ನು ಹೂಡಬೇಕಾಗಿದೆ. ಅದರ ಜೊತೆಗೆ ...ಆಟಗಾರರನ್ನು ಬಿಡ್ಡಿಂಗ್‌ನಲ್ಲಿ ಖರೀದಿಸಬೇಕಾಗಿದೆ. ಒಂದು ...ತಂಡದಲ್ಲಿ ಮೂರು ಜನ ಕರ್ನಾಟಕೇತರ ಆಟಗಾರರು ...ಇರುವುದರಿಂದ ಈ ಬಿಡ್ಡಿಂಗ್ ಮೊತ್ತ ಐದು ಕೋಟಿ ತಲುಪಬಹುದು ಅಥವಾ ಹತ್ತು ಕೋಟಿಗಳ ...ನ್ನೂ ದಾಟಬಹುದು. ಇದರ ಹೊರತಾಗಿ ಪ್ರಚಾರ, ..., ಓಡಾಟ ಮತ್ತು ಇನ್ನಿತರ ವಿಷಯಗಳಿಗಾಗಿ ...ಷ್ಟು ಕೋಟಿ ಮೀಸಲಿಡಬೇಕು. ಇಷ್ಟಾಗಿಯೂ ಮಾಲೀಕತ್ವವನ್ನು ...ವರ್ಷಗಳ ಕಾಲಾವಧಿಗೆ ಖರೀದಿಸಬೇಕಾಗುತ್ತದೆ. ಈಗ ನೀವೇ ...ಹತ್ತಿಪ್ಪತ್ತು ಲಕ್ಷ ಸಂಭಾವನೆ ಪಡೆಯುವ ನಮ್ಮ ನಾಯಕ ...ನಟಿಯರಿಗೆ ಈ ಕ್ರಿಕೆಟ್ ತಂಡದ ಮಾಲೀಕತ್ವ ಬಿಳಿ ಆನೆ ...ಯಾಗುವುದಿಲ್ಲವೇ? ಒಂದು ವೇಳೆ ಕ್ರಿಕೆಟ್‌ನಲ್ಲಿ ನಷ್ಟವಾದರೆ, ಮದುವೆ ...ಯಲ್ಲಿ ಹಾಡಿ ನರ್ತಿಸಿದರೆ, ಇವರಿಗೆ ಕೋಟಿ ಕೋಟಿ ಸಂಭಾವನೆ ...ಕೊಡುವ ಶ್ರೀಮಂತರು ನಮ್ಮ ಕರ್ನಾಟಕದಲ್ಲಿದ್ದಾರೆಯೇ?

...ಇದೆಲ್ಲ ವಿಷಯವನ್ನು ನೋಡಿದರೆ, ರಮ್ಯಾ ಮತ್ತು ಸುದೀಪ್ ... ಸೀಸದಲ್ಲಿ ಬಿಟ್ಟಿ ಪ್ರಚಾರವನ್ನು ಗಿಟ್ಟಿಸಿಕೊಂಡು ಲೈಮ್ ಲೈಟಿಗೆ ...ಬರಲಿ ಆಸಿಸುತ್ತದೆ. ಇಷ್ಟಾಗಿಯೂ ಇವರಿಬ್ಬರು ಮಾಲೀಕತ್ವವನ್ನು ವಹಿಸಿಕೊಂಡರೆ ಆಶ್ಚರ್ಯಪಡಬೇಕಾದದ್ದೂ ಇಲ್ಲ. ಯಾಕೆಂದರೆ ರಮ್ಯಾಳಿಗೆ ಕೆಲವು ರಾಜಕಾರಣಿಗಳು ಬೆಂಗಾವಲಿಗಿರುವುದರಿಂದ ಆಕೆ ಕ್ರಿಕೆಟ್ ತಂಡದ ಒಡತಿಯಾದರೂ ಆಗಬಹುದು. ಹಾಗೆಯೇ ಸುದೀಪ್ ಕೂಡಾ ಮುಂದಿನ ಅಸೆಂಬ್ಲಿ ಚುನಾವಣೆ ಹೊತ್ತಿಗೆ ಶಾಸಕರಾಗುವ ಕನಸು ಕಾಣುತ್ತಿರುವುದರಿಂದ ಅವರಿಗೂ ಕೆಲವು ರಾಜಕಾರಣಿಗಳ ಬೆಂಬಲವಿದೆ.

ವಾಸ್ತವವಾಗಿ ಇಂತಹ ಒಂದು ತಂಡದ ಮಾಲೀಕತ್ವವನ್ನು ವಹಿಸಿಕೊಳ್ಳಲು ನಿಜವಾದ ಶಕ್ತಿಯಿರುವುದು ರೆಬಲ್ ಸ್ಟಾರ್ ಅಂಬರೀಶ್‌ಗೆ ಮಾತ್ರ. ಅದು ಕೇವಲ ಹಣದ ಬಲದಿಂದ ಮಾತ್ರವಲ್ಲ, ಕ್ರಿಕೆಟ್ ಮೇಲಿನ ಮಮತೆಯಿಂದ ಕೂಡ. ಬೆಂಗಳೂರಿನಲ್ಲಿ ಯಾವುದೇ ಏಕದಿನ ಅಥವಾ ಟೆಸ್ಟ್ ಪಂದ್ಯಗಳಿದ್ದಾಗ, ಅತ್ಯಂತ ದುಬಾರಿಯಾದ ಗೋಲ್ಡನ್ ಬಾಕ್ಸ್‌ನಲ್ಲಿ ತನ್ನ ಗೆಳೆಯರೊಂದಿಗೆ ಅಂಬರೀಶ್ ಪಂದ್ಯ ವೀಕ್ಷಿಸುವುದು ಅವರ ಹವ್ಯಾಸಗಳಲ್ಲೊಂದು. ಹಾಗೆಯೇ ಶಾರ್ಜಾದಲ್ಲಿ ಕ್ರಿಕೆಟ್ ಮ್ಯಾಚ್ ಇದ್ದಾಗ ತನ್ನ ಮಿತ್ರ ರಜನಿಕಾಂತ್ ಜೊತೆ ಅಲ್ಲಿಗೇ ಹೋಗಿ ಪಂದ್ಯ ನೋಡುವುದು ಕೂಡ ಅಂಬಿಯ ದುಬಾರಿ ಹವ್ಯಾಸಗಳಲ್ಲಿ ಒಂದು. ಬೆಂಗಳೂರಿನಲ್ಲಿ ಈ ರೀತಿ ಪಂದ್ಯ ನೋಡುವ ಮತ್ತೊಬ್ಬ ನಾಯಕನಟನೆಂದರೆ ಶಿವರಾಜ್ ಕುಮಾರ್ ಮಾತ್ರ.



ಅಂಬರೀಶ್ ಬಹಳ ಹಿಂದೆಯೇ ರೇಸ್ ಕುದುರೆ ಖರೀದಿಸಿ ತನ್ನ ವರ್ಚಸ್ಸನ್ನು ಪ್ರದರ್ಶಿಸಿದವರು. ಹಾಗೆಯೇ ನಾಳೆ ಅಂಬಿ ಒಂದು ತಂಡವನ್ನು ಖರೀದಿಸಲು ಹೊರಟರೆ ಅವರ ಬೆಂಗಾವಲಿಗೆ ಸಾಕಷ್ಟು ಶ್ರೀಮಂತರು ನಿಂತೇ ನಿಲ್ಲುತ್ತಾರೆ. ಆದರೆ ಮೊನ್ನೆ ಅಸೆಂಬ್ಲಿ ಮತ್ತು ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡಿದ್ದರಿಂದಲೋ ಏನೋ ಅಂಬರೀಶ್ ಹೆಸರು ಈಗ ಕ್ರಿಕೆಟ್ ವಲಯದಲ್ಲಿ ಕೇಳಿಬರುತ್ತಿಲ್ಲ.

ಅಂಬರೀಶ್ ಅವರ 'ಆಪ್ತ ಮಿತ್ರ' ವಿಷ್ಣುವರ್ಧನ್‌ಗೆ ಕೂಡ ಕ್ರಿಕೆಟ್ ಬಗ್ಗೆ ಸಿಕ್ಕಾಪಟ್ಟೆ ಆಸಕ್ತಿ. ಅವರು ತಮ್ಮ ಗೆಳೆಯರೊಂದಿಗೆ ಸ್ನೇಹಲೋಕ ಎಂಬ ತಂಡವನ್ನು ಕಟ್ಟಿ ಕಳೆದ ಮೂರ್ನಾಲ್ಕು ವರ್ಷಗಳಿಂದ ಪ್ರತಿ ಭಾನುವಾರ ಕ್ರಿಕೆಟ್ ಆಡುತ್ತಿದ್ದಾರೆ. ಆದರೆ ಕೋಟಿಗಟ್ಟಲೆ ಹಣ ಸುರಿದು ಒಂದು ತಂಡವನ್ನು ವಿಷ್ಣು ಖರೀದಿಸಿದರೆ ಅದು ಖಂಡಿತವಾಗಿಯೂ ಪ್ರಪಂಚದ ಎಂಟನೇ ಅದ್ಭುತವಾಗುತ್ತದೆ. ಆಡುವುದೇ ಬೇರೆ, ತಂಡ ಖರೀದಿಸುವುದೇ ಬೇರೆ ಎಂಬ ಮಂತ್ರಕ್ಕೆ ವಿಷ್ಣು ಅಂಟಿಕೊಂಡಿದ್ದಾರೆ.

ಈ ಮಧ್ಯೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಬಹಳ ಬೋಲ್ಡ್ ಆಗಿ ಕ್ರಿಕೆಟ್ ಬಗ್ಗೆ ತನ್ನ ಅನಿಸಿಕೆ ಹೇಳಿಕೊಂಡಿದ್ದಾರೆ. "ನಾನು ಕ್ರಿಕೆಟ್ ಪ್ರೇಮಿ ನಿಜ. ಆದರೆ, ನಾನು ಖಂಡಿತವಾಗಿಯೂ ಯಾವುದೇ ತಂಡವನ್ನು ಖರೀದಿಸುವುದಿಲ್ಲ. ಕ್ರಿಕೆಟ್‌ಗೆ ಇತ್ತೀಚಿನ ದಿನಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಪ್ರಚಾರ ಸಿಗುತ್ತಿದೆ. ಇದರಿಂದಾಗಿ ಬೇರೆ ಕ್ರೀಡೆಗಳೆಲ್ಲವೂ ಮೂಲೆ ಗುಂಪಾಗುತ್ತಿದೆ" ಎಂದು ಹೇಳಿದ್ದಾರೆ.

ಒಂದು ರೀತಿಯಲ್ಲಿ ಈ ಕ್ರಿಕೆಟ್ ಆಟ ಜನರಲ್ಲಿ ಪ್ರಾಂತೀಯ ಮನೋಭಾವವನ್ನು ಹುಟ್ಟುಹಾಕುತ್ತಿದೆ. ಮೂಲತಃ ಕರ್ನಾಟಕದಲ್ಲಿ ನೀನು ಮೈಸೂರಿನವನು, ನಾನು ಮಂಗಳೂರಿನವನು ಎಂಬಿತ್ಯಾದಿ ಮನೋಭಾವ ಇಲ್ಲವೇ ಇಲ್ಲ. ಹಾಗೆಯೇ ಕಲಾವಿದರ ವಿಷಯದಲ್ಲೂ ಅಷ್ಟೇ. "ನಾವು ಕಲಾವಿದರೆಲ್ಲ ಒಂದೇ ಕುಟುಂಬದವರು; ಕರ್ನಾಟಕವೇ ನಮ್ಮ ಭಾಷೆ ಮತ್ತು ಕುಟುಂಬ" ಎಂಬ ಮಂತ್ರವನ್ನು ಜಪಿಸುವ ಈ ನಟನಟಿಯರು ಈಗ ಒಂದು ಪ್ರಾಂತೀಯ ತಂಡದ ಮಾಲೀಕತ್ವ ವಹಿಸುವುದು ಎಷ್ಟು ಸರಿ? ಎಂದು ಚಿಂತಿಸಬೇಕಾಗಿದೆ.

ಈಗ ಸದ್ಯಕ್ಕೆ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಒಂದು ಜೋಕ್ ಇಲ್ಲಿ ಹೇಳಲೇಬೇಕಾಗಿದೆ: ನಮ್ಮ ನಾಯಕ ನಾಯಕಿಯರು ತಂಡದ ಮಾಲೀಕತ್ವ ಪಡೆಯಲು ವಿಫಲರಾಗಬಹುದು. ಆದರೆ ಚಿಯರ್ ಗರ್ಲ್ಸ್‌ಅನ್ನು ಮಾತ್ರ ವಿದೇಶದಿಂದ ಕರೆಸುವ ಅಗತ್ಯವಿಲ್ಲ; ನಮ್ಮವರೇ ಆದ ನೀತೂ, ಆಂದ್ರಿತಾ ರೇ, ಪ್ರಿಯ್ಯಾ, ಸ್ಫೂರ್ತಿ, ರಾಧಿಕಾ ಗಾಂಧಿ... ಇದ್ದಾರಲ್ಲ ಎಂಬುದು ಮಾತ್ರ ನಿಜ.

ಚಿಯರ್ಸ್ ಟು ಕ್ರಿಕೆಟ್ ಅಂಡ್ ಚಿಯರ್ ಗರ್ಲ್ಸ್!


● ಶೆಣೈ

ಅರುಣ್ ಸಿನಿ Bits

ಕಲ್ಯಾಣ್ ಪುತ್ರನೂ ಈಗ ಹೀರೋ

ಟಿ.ಎನ್. ಸೀತಾರಾಂ ಸಾಮ್ರಾಜ್ಯದಲ್ಲಿ ಪಳಗಿ ನಂತರ ಹೊರಬಂದು ಹಲವಾರು ಧಾರಾವಾಹಿಗಳನ್ನು ನಿರ್ದೇಶಿಸಿದ್ದ ನಾಗನಾಥ ಜೋಷಿ ಈಗಷ್ಟೇ 'ಜಾಲ' ಎಂಬ ಚಿತ್ರವನ್ನು ಮುಕ್ತಾಯಗೊಳಿಸಿದ್ದಾರೆ. ಇದು ಬಿಡುಗಡೆಯಾಗುವ ಮೊದಲೇ 'ಲಕ್ಷ' ಎಂಬ ಮತ್ತೊಂದು ಚಿತ್ರವನ್ನೂ ಆರಂಭಿಸಿದ್ದಾರೆ.

ಪ್ರೇಮವನ್ನು ಇಸ್ಪೀಟು ಆಟದ 'ಲಕ್ಷ'ಕ್ಕೆ ಹೋಲಿಸಿರುವ ಈ ಚಿತ್ರದಲ್ಲಿ 'ಸೌಂದರ್ಯ ಇಲ್ಲದೆಯೂ ಪ್ರೀತಿ ಹುಟ್ಟುತ್ತದೆ' ಎಂಬ ಫಿಲಾಸಫಿಯ 'ಲಕ್ಷ' ಹಾಕಿದ್ದಾರೆ ಜೋಷಿ.



ಭರತ್

ದಿ. ಕಲ್ಯಾಣ್ ಕುಮಾರ್ ಅವರ ಪುತ್ರ ಭರತ್ ಕಲ್ಯಾಣ್ ಈ ಚಿತ್ರದ ಮೂಲಕ ಕನ್ನಡದಲ್ಲಿ ನಾಯಕನಟನಾಗಿ ಪರಿಚಯಗೊಳ್ಳುತ್ತಿದ್ದಾರೆ. ಆರಡಿ ಎತ್ತರದ ಈ ಹುಡುಗ ತಮಿಳಿನ ಕಿರುತೆರೆಯಲ್ಲಿ ಈಗ ಪಾಪ್ಯುಲರ್ ನಟ. ಆದರೆ ಕನ್ನಡದವರು ಮಾತ್ರ ಈವರೆಗೂ ಭರತ್ ಕಲ್ಯಾಣ್‌ನನ್ನು ಗುರುತಿಸಿಯೇ ಇಲ್ಲ.


ರಾಜ್‌ಕುಮಾರ್, ಉದಯ್‌ಕುಮಾರ್ ಇಬ್ಬರ ಕುಡಿಗಳೂ ಚಿತ್ರರಂಗದಲ್ಲೇ ನೆಲೆಗೊಂಡಿರುವಾಗ, ಕಲ್ಯಾಣ್ ಕುಮಾರ್ ಪುತ್ರ ಕೂಡ ಈಗ ಚಿತ್ರರಂಗದ ನಂಟಿಗೆ ಬಂದಿರುವುದು ವಿಶೇಷವಾಗಿದೆ.

ಕನ್ನಡಕ್ಕೆ 'ನಾಡೋಡಿಗಳ್'!

ಈಗಷ್ಟೇ ಬಿಡುಗಡೆಗೊಂಡು ತಮಿಳುನಾಡು ಮಾತ್ರವಲ್ಲದೆ ದಕ್ಷಿಣದ ಎಲ್ಲ ರಾಜ್ಯಗಳಲ್ಲೂ ಸಾಕಷ್ಟು ಸುದ್ದಿ ಮಾಡುತ್ತಿರುವ 'ನಾಡೋಡಿಗಳ್' ಚಿತ್ರ ಕನ್ನಡಕ್ಕೆ ರಿಮೇಕ್ ಆಗುತ್ತಿದೆ.



'ನಾಡೋಡಿಗಳ್'ನ ಕನ್ನಡ ಅವತರಣಿಕೆಯಲ್ಲಿ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟಿಸಲಿದ್ದಾರಂತೆ. ಈ ವಿಷಯವನ್ನು ಸ್ವತಃ ಈ ಚಿತ್ರದ ನಿರ್ದೇಶಕ ಸಮುತ್ತಿರಕನಿ ಅವರೇ ಹೊರಗೆಡವಿದ್ದಾರೆ. ಏಳೂವರೆ ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿ ಸುಮಾರು 30ಕ್ಕೂ ಹೆಚ್ಚು ಕೋಟಿಗಳ ಲಾಭದ ಅಂದಾಜಿನಲ್ಲಿರುವ ಈ ಚಿತ್ರವನ್ನು ಕನ್ನಡದಲ್ಲೂ ಸಮುತ್ತಿರಕನಿ ಅವರೇ ನಿರ್ದೇಶಿಸಲಿದ್ದಾರಂತೆ.


ಸಮುತ್ತಿರಕನಿ

ಈವರೆಗೆ ಕಮರ್ಷಿಯಲ್ ಚಿತ್ರಗಳಲ್ಲೇ ನಟಿಸುತ್ತಾ ಬಂದಿರುವ ಲವರ್ ಬಾಯ್ ಪುನೀತ್ 'ನಾಡೋಡಿಗಳ್'ನಂಥ ಭಿನ್ನ ಚಿತ್ರಕ್ಕೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬುದೇ ಸದ್ಯ ಗಾಂಧಿನಗರದವರನ್ನು ಕಾಡುತ್ತಿರುವ ಪ್ರಶ್ನೆ.

ನಾಯ್ಡು ಆದಳು ಡೈಸಿ

ಡೈಸಿ ಬೋಪಣ್ಣ ಎಂಬ ಸೈಸಿ ನಟಿ ಈಗ ತನ್ನ ಹೆಸರಿನಲ್ಲಿರುವ ಬೋಪಣ್ಣನನ್ನು ಕಿತ್ತೆಸೆದು ಆ ಜಾಗಕ್ಕೆ 'ನಾಯ್ಡು'ವನ್ನು ಸೇರಿಸಿಕೊಂಡಿದ್ದಾಳೆ.

ಐದಾರು ವರ್ಷಗಳಿಂದ ಚಿತ್ರರಂಗದಲ್ಲಿದ್ದರೂ, ಆರಕ್ಕೇರದ ಮೂರಕ್ಕಿಳಿಯದ ನಟಿಯಾಗಿರುವ ಡೈಸಿ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಹೆಸರು ಬದಲಾಯಿಸಿಕೊಂಡರೆ ಅದೃಷ್ಟ ಬದಲಾಗುತ್ತದೆ ಎಂದು ನಂಬಿ ಈಗ ನಾಯ್ಡುವಾಗಿ ರೂಪಾಂತರಗೊಂಡಿದ್ದಾಳೆ.

ನಾಯ್ಡುವಾದರೂ ಸರಿ, ಬೋಪಣ್ಣನಾದರೂ ಸರಿ ಪ್ರತಿಭೆಯೊಂದಿದ್ದರೆ ಎಂಥದ್ದನ್ನು ಕೂಡಾ ಸಾಧಿಸಬಹುದು ಎಂಬ ಸತ್ಯ... ನಟಿಯರು ಯಾವಾಗ ಅರಿತುಕೊಳ್ಳುತ್ತಾರೋ?



ಮಲ್ಲನ್ನ V/s ಮಗಧೀರ



ಕನ್ನಡ ಚಿತ್ರರಂಗದಲ್ಲಿ ಪುನೀತ್ ಅಭಿನಯದ 'ರಾಜ್' ಚಿತ್ರ ಬಿಡುಗಡೆಗೆ ಹೆದರಿ ಪುಟ್ಟ ಪುಟ್ಟ ಸಿನಿಮಾಗಳೆಲ್ಲಾ ಆತುರಕ್ಕೆ ಬಿದ್ದು ಬಿಡುಗಡೆಯ ಭಾಗ್ಯ ಕಾಣುತ್ತಿದ್ದರೆ, ಪಕ್ಕದ ಆಂಧ್ರದಲ್ಲೂ ಒಬ್ಬ ದೊಡ್ಡ ನಟ ಮತ್ತು ಹೊಸ ನಾಯಕನಟನ ಚಿತ್ರಗಳು ಒಟ್ಟೊಟ್ಟಿಗೇ ತೆರೆಗೆ ಬರುತ್ತಿರುವುದರಿಂದ ಇಡೀ ಚಿತ್ರರಂಗದಲ್ಲಿ ವಿಕ್ಷಿಪ್ತ ವಾತಾವರಣ ಸೃಷ್ಟಿಯಾಗಿದೆ.

ಇದೇ ಜುಲೈ 29ರಂದು ಮೆಗಾಸ್ಟಾರ್ ಚಿರಂಜೀವಿ ಪುತ್ರ ರಾಮ್ ಚರಣ್ ತೇಜಾ ಅಭಿನಯದ ಎರಡನೇ ಚಿತ್ರ 'ಮಗಧೀರ' ಬಿಡುಗಡೆಯಾಗುತ್ತಿದೆ. ಇದೇ ವೇಳೆಗೆ ವಿಕ್ರಮ್ ಅಭಿನಯದ 'ಮಲ್ಲನ್ನ' ಚಿತ್ರವೂ ಬಿಡುಗಡೆಗೊಳ್ಳುತ್ತಿರುವುದು ಆಂಧ್ರದಲ್ಲಿ ನಡೆಯಲಿರುವ ಸ್ಟಾರ್‌ವಾರ್‌ನ ಮುನ್ಸೂಚನೆಯಾಗಿದೆ.

ಚಿರು ಪುತ್ರ ತೇಜಾ ನಟನೆಯ ಮೊದಲ ಚಿತ್ರ 'ಚಿರುತಾ' ಈಗ್ಗೆ ಒಂದೂವರೆ ವರ್ಷಗಳ ಹಿಂದಷ್ಟೇ ಬಿಡುಗಡೆಗೊಂಡಿತ್ತು. ಹೇಳಿ ಕೇಳಿ ಅದು ಮೆಗಾಸ್ಟಾರ್ ಕುಡಿಯ ಚಿತ್ರವಾದ್ದರಿಂದ ಇಡೀ ದಕ್ಷಿಣ ಭಾರತದಲ್ಲಿ ಇನ್ನಿಲ್ಲದ ಪ್ರಚಾರ ಪಡೆದಿತ್ತು. ಆದರೆ ಪ್ರಚಾರದ ಹವಾ ಏನೇ ಇದ್ದರೂ ಚಿತ್ರ ನಿರೀಕ್ಷೆಯ ಗೆಲುವು ಕಾಣಲಿಲ್ಲ. ಹೀಗಾಗಿ ತನ್ನ ಮಗನ ಎರಡನೇ ಚಿತ್ರ ಯಾವ ಕಾರಣಕ್ಕೂ ಸೋಲಬಾರದು ಎಂದು ತೀರ್ಮಾನಿಸಿದ ಚಿರಂಜೀವಿ ತೆಲುಗಿನ ಸ್ಟಾರ್ ನಿರ್ದೇಶಕ ಎಸ್.ಎಸ್.ರಾಜಮೌಳಿಯ ಬೆನ್ನು ಬಿದ್ದು ತೇಜಾನಿಗೊಂದು ಸಿನಿಮಾ ಮಾಡಿಕೊಡುವಂತೆ ಒತ್ತಾಯಿಸಿದ್ದರು. 'ಸ್ಟೂಡೆಂಟ್ ನಂ. 1' ಚಿತ್ರದಿಂದ ಆರಂಭಿಸಿ 'ಸಿಂಹಾದ್ರಿ', 'ಛತ್ರಪತಿ', 'ವಿಕ್ರಮಾರ್ಕುಡು', 'ಯಮದೊಂಗ' .... ಹೀಗೆ ರಾಜಮೌಳಿ ಈವರೆಗೆ ಮುಟ್ಟಿದ ಚಿತ್ರಗಳೆಲ್ಲಾ ಚಿನ್ನವಾಗಿವೆ.






ತೆಲುಗು ಚಿತ್ರಾಸಕ್ತರ ಆರಾಧ್ಯದೈವ ಚಿರಂಜೀವಿಯೇ ತನ್ನ ಮಗನಿಗೆ ಚಿತ್ರವೊಂದನ್ನು ನಿರ್ದೇಶಿಸು ಎನ್ನುವಾಗ ರಾಜಮೌಳಿಯಾದರೂ ಸುಮ್ಮನಿರಲು ಹೇಗೆ ಸಾಧ್ಯ? ಹೀಗಾಗಿ 'ಮಗಧೀರ'ನ್ನು ನಿರ್ದೇಶಿಸಲು ರಾಜಮೌಳಿ ಒಪ್ಪಿಕೊಂಡರು. ಇದನ್ನು ನಿರ್ಮಿಸಲು ಚಿರಂಜೀವಿಯ ಸಂಬಂಧಿ ತೆಲುಗು ಚಿತ್ರರಂಗದ ದಿಗ್ಗಜ ಅಲ್ಲು ಅರವಿಂದ್ ಮುಂದಾದರು. ಈ ಚಿತ್ರಕ್ಕೆ ಈವರೆಗೆ ಖರ್ಚಾಗಿರುವುದು ಅನಾಮತ್ತು 35 ಕೋಟಿ ರೂಪಾಯಿಗಳು ಮಾತ್ರ!

'ಮಗಧೀರ'ನ ಸುತ್ತ ವಿವಾದದ ಹುತ್ತ

ರೊಮ್ಯಾಂಟಿಕ್ ಲವ್ ಸ್ಟೋರಿಯೊಂದಿಗೆ ಪುನರ್ಜನ್ಮದ ಕಥೆಯನ್ನು ಹೊಂದಿರುವ 'ಮಗಧೀರ' ಈಗಾಗಲೇ ಹಲವಾರು ವಿವಾದಗಳಲ್ಲಿ ಸಿಕ್ಕಿಕೊಂಡಿದೆ. ಒಂದೆಡೆ ಈ ಚಿತ್ರ ಹಾಲಿವುಡ್‌ನ '1001 ಗ್ಲಾಡಿಯೇಟರ್ಸ್' ಚಿತ್ರವನ್ನೇ ಹೋಲುತ್ತದೆ ಎಂಬುದು ಹಲವರ ಅಭಿಪ್ರಾಯವಾದರೆ, ಇನ್ನೊಂದೆಡೆ ಎಸ್.ಪಿ. ಚಾರಿ ಎಂಬ ಬರಹಗಾರ "ಆಂಧ್ರ ಭೂಮಿ ಪತ್ರಿಕೆಯಲ್ಲಿ 2002ರಲ್ಲಿ ಪ್ರಕಟಗೊಂಡ 'ಚಂದೇರಿ' ಎಂಬ ನನ್ನ ಧಾರಾವಾಹಿಯನ್ನೇ ಎತ್ತುವಳಿ ಮಾಡಿದ್ದಾರೆ'' ಎಂದು ಆರೋಪಿಸಿ ಅಲ್ಲಿನ ಛೇಂಬರ್ ಮೆಟ್ಟಿಲೇರಿದ್ದಾರೆ. 400 ವರ್ಷಗಳ ಹಿಂದೆ ಇಬ್ಬರು ಪ್ರೇಮಿಗಳು ಆತ್ಮಹತ್ಯೆಗೆ ಶರಣಾಗಿ ಮತ್ತೆ ಪುನರ್ಜನ್ಮ ಪಡೆಯುವ ಕಥಾಹಂದರವೇ 'ಮಗಧೀರ' ಚಿತ್ರದ ಕಥಾವಸ್ತುವಾಗಿರುವುದು ಲೇಖಕ ಚಾರಿ ಅವರ ಆರೋಪಕ್ಕೆ ಕಾರಣವಾಗಿದೆ.

ಈ ಎಲ್ಲ ವಿವಾದಗಳ ನಡುವೆ ಬಿಡುಗಡೆಯಾಗುತ್ತಿರುವ 'ಮಗಧೀರ'ನ ಗೆಲುವು ಚಿರಂಜೀವಿ ಫ್ಯಾಮಿಲಿಗೆ ಅನಿವಾರ್ಯವಾಗಿದೆ. ಈಗಷ್ಟೇ ನಡೆದ ಚುನಾವಣೆಯಲ್ಲಿ ಭಯಾನಕ ಸೋಲು




ಕಂಡಿರುವ ಚಿರು ಈಗ ರಾಜಕೀಯವಾಗಿ ಕುಗ್ಗಿರುವುದರಿಂದ ಮಗನ ಚಿತ್ರವೂ ಸೋತುಹೋದರೆ ತನ್ನ ಸ್ಟಾರ್ ವರ್ಚಸ್ಸಿಗೆ ಪೆಟ್ಟು ಬಿದ್ದು ಪ್ರತಿಷ್ಠೆ ಮಣ್ಣುಪಾಲಾಗಲಿದೆ ಎಂಬುದು ಗೊತ್ತಿದೆ. ಹೀಗಾಗಿ ಮಗನ ಚಿತ್ರ ಬಿಡುಗಡೆಯ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ. ಮಾತ್ರವಲ್ಲದೆ ಒಂದುವೇಳೆ 'ಮಗಧೀರ'ನೂ ಗೆದ್ದು ನಿಂತಲ್ಲಿ ನಿರ್ದೇಶಕ ರಾಜಮೌಳಿಗೆ ಡಬಲ್ ಹ್ಯಾಟ್ರಿಕ್ ನಿರ್ದೇಶಕ ಎಂಬ ದೊಡ್ಡ ಮಟ್ಟದ ಸರ್ಟಿಫಿಕೇಟು ದೊರೆಯುವುದರಿಂದ ಆತನಿಗೂ 'ಮಗಧೀರ'ನ ಗೆಲುವು ಅತ್ಯವಶ್ಯಕವಾಗಿದೆ.

'ಮಗಧೀರ'ನಿಗೆ 'ಮಲ್ಲನ್ನ'ನ ಸವಾಲ್!

ಪ್ರಪಂಚದಾದ್ಯಂತ 14 ದೇಶಗಳ ಸಾವಿರದೈನೂರಕ್ಕೂ ಹೆಚ್ಚು ಕೇಂದ್ರಗಳಲ್ಲಿ ಬಿಡುಗಡೆಗೊಳ್ಳುತ್ತಿರುವ 'ಮಗಧೀರ'ನಿಗೆ ಸವಾಲೆಸೆದಿರುವುದು ಮತ್ತೊಬ್ಬ ಸ್ಟಾರ್ ನಟ ವಿಕ್ರಮ್‌ನ 'ಮಲ್ಲನ್ನ'.

ತಮಿಳಿನಲ್ಲಿ 'ಕಂದಸಾಮಿ'ಯಾಗಿ, ತೆಲುಗಿನಲ್ಲಿ 'ಮಲ್ಲನ್ನ'ನಾಗಿ ನಿರ್ಮಾಣಗೊಂಡಿರುವ ಈ ಚಿತ್ರಕ್ಕೂ ತಗುಲಿರುವ ಖರ್ಚು ಅಷ್ಟಿಷ್ಟಲ್ಲ: ಬರೋಬ್ಬರಿ 70 ಕೋಟಿ. ಸುಮಾರು ಎರಡು ವರ್ಷಗಳಿಂದಲೂ ನಿರಂತರವಾಗಿ ಚಿತ್ರೀಕರಣಗೊಂಡಿರುವ 'ಮಲ್ಲನ್ನ'ದಲ್ಲಿ ವಿಕ್ರಮ್ ನಾಯಕನ ಪಾತ್ರದಲ್ಲಿ ಮಾತ್ರವಲ್ಲದೆ, ಹೆಣ್ಣಿನ ಗೆಟಪ್ಪಿನಲ್ಲಿ ಮುದಿ ಸನ್ಯಾಸಿಯ ಪಾತ್ರದಲ್ಲಿ ... ಹೀಗೆ ಎಂಟು ವಿಭಿನ್ನ ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ವಿಕ್ರಮ್ ಜೊತೆ ಮೋಹಕ ನಟಿ ಶ್ರೇಯಾ ಈ ಚಿತ್ರದಲ್ಲಿ ನಾಯಕಿಯಾಗಿದ್ದಾಳೆ. ಈಗ ಬಿಡುಗಡೆಗೊಂಡಿರುವ ಹಾಡುಗಳು ಮತ್ತು ಈ ಚಿತ್ರದ ಪ್ರೋಮೋಗಳೇ ಇದರ ಬಗ್ಗೆ ನಿರೀಕ್ಷೆಗಳನ್ನು ಹೆಚ್ಚಿಸಿವೆ. ಸೂಸಿ ಗಣೇಶನ ನಿರ್ದೇಶನದಲ್ಲಿ ಹಾಲಿವುಡ್ ಮಾದರಿಯಲ್ಲಿ ತಯಾರಾಗಿರುವ ಈ ಚಿತ್ರ ಕೂಡಾ ಆಂಧ್ರದಲ್ಲಿ ಗೆಲ್ಲಲೇಬೇಕಿರುವ ಅನಿವಾರ್ಯತೆಯಿದೆ. ತೆಲುಗು ನಟರಷ್ಟೇ ಕ್ರೇಜ್ ಹೊಂದಿರುವ ತಮಿಳು ನಟ ವಿಕ್ರಮ್ ಈ ಹಿಂದೆ ನಟಿಸಿದ್ದ 'ಮಜಾ' ಚಿತ್ರ ಆಂಧ್ರದಲ್ಲಿ ಮುಗ್ಗರಿಸಿತ್ತು. ಇದರಿಂದ ಕನ್ನಡದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್‌ಗೆ ನಷ್ಟವಾಗಿದ್ದು ಮಾತ್ರವಲ್ಲದೆ ವಿಕ್ರಮ್‌ನ ಸ್ಟಾರ್‌ಡಂ ಕೂಡಾ ಕುಸಿದುಬಿದ್ದಿತ್ತು. ಹೀಗಾಗಿ 'ಮಗಧೀರನ' ಪೈಪೋಟಿಯ ನಡುವೆಯೂ ಗೆಲ್ಲುವ ಉದ್ದೇಶದಿಂದ 'ಮಲ್ಲನ್ನ'ನ ಪ್ರಚಾರವೂ ಧೋ ಎನುತ್ತಿದೆ.





ಜಾಗಬಿಟ್ಟ ಜಗನ್ಮೋಹಿನಿ!

ಮೂರು-ನಾಲ್ಕು ದಶಕಗಳ ಹಿಂದೆ ಯುವಕರ ಮೈನವಿರೇಳಿಸುವಂತೆ ಕುಣಿಯುತ್ತಲೇ ಹೆಸರು ಮಾಡಿದ್ದ ಅಂದಗಾಲತ್ತಿಲ್ ಕ್ಲಬ್ ಡ್ಯಾನ್ಸರ್ ಜ್ಯೋತಿಲಕ್ಷ್ಮಿ ಮತ್ತು ದಕ್ಷಿಣ ಭಾರತದ ಸದ್ಯದ ಸೆಕ್ಸ್ ಬಾಂಬ್ ನಮಿತಾ ಈಗ ಒಂದಾಗಿ ನಟಿಸಿರುವ 'ಜಗನ್ಮೋಹಿನಿ' ಎಂಬ ಪೌರಾಣಿಕ ಚಿತ್ರ ಕೂಡಾ ಇದೇ ತಿಂಗಳು ಬಿಡುಗಡೆಯಾಗಬೇಕಿತ್ತು. ಸುಮಾರು ನಲವತ್ತು ವರ್ಷಗಳ ಹಿಂದೆ ತೆಲುಗಿನಲ್ಲಿ ಖ್ಯಾತ ನಿರ್ದೇಶಕ ವಿಠಲಾಚಾರ್ಯ ಅವರು ಎನ್.ಟಿ.ಆರ್ ಮತ್ತು ಅಕ್ಕಿನೇನಿ ನಾಗೇಶ್ವರ್ ರಾವ್ ಅಭಿನಯದಲ್ಲಿ ತಯಾರಿಸಿದ್ದ 'ಜಗನ್ಮೋಹಿನಿ' ಎಂಬ ಪೌರಾಣಿಕ ಚಿತ್ರವನ್ನೇ ಮತ್ತೊಮ್ಮೆ ಮರುಸೃಷ್ಟಿಗೊಳಿಸಲಾಗಿದೆ. ಅಂದಿನ ಜಯಮಾಲಿನಿ ಮತ್ತು ಇಂದಿನ ನಮಿತಾ ಎಂಬ ಇಬ್ಬರು ನಟಿಯರೂ ಪೈಪೋಟಿಗೆ ಬಿದ್ದವರಂತೆ ಎಕ್ಸ್‌ಪೋಸ್ ಮಾಡಿದ್ದಾರೆ. ಆದರೂ 'ಮಗಧೀರ' ಮತ್ತು 'ಮಲ್ಲನ್ನ'ರ ಮಧ್ಯೆ ಬಿಡುಗಡೆಗೊಂಡರೆ ಎಲ್ಲಿ 'ಜಗನ್ಮೋಹಿನಿ' ತೋಪಾಗುತ್ತದೋ ಎಂದು ಅದರ ಬಿಡುಗಡೆಯನ್ನು ಸೆಪ್ಟಂಬರ್ ತಿಂಗಳಿಗೆ ಮುಂದೂಡಲಾಗಿದೆ.

ಒಟ್ಟಾರೆಯಾಗಿ ಎರಡು ಮೆಗಾಬಜೆಟ್ ಸಿನಿಮಾಗಳ ಸ್ಪರ್ಧೆಯ ನಡುವೆ ಮೆಗಾಸ್ಟಾರ್ ಪುತ್ರನ ಸಿನಿಮಾ ಭವಿಷ್ಯ ಚಿರಂಜೀವಿಯ ಪ್ರತಿಷ್ಠೆ ಏನಾಗುತ್ತದೋ? ನೋಡಬೇಕು.

● ಅರುಣ್.ಜಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...